ಸಂಪುಟ: 06 ಸಂಚಿಕೆ: 81 ಪುಟಗಳು: 08 ಗುರುವಾರ 04 ಜೂನ್ 2026
www.udayavahini.in epaper.udayavahini.in Udaya vahini news Udaya vahini news Udayavahini news you tube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ಗೆಲುವಿಗೆ ಮೊದಲ ಮೆಟ್ಟಿಲೆಂದರೆ ನಾವು ಮಾಡಬೇಕಾದ ಕೆಲಸವನ್ನು ಪ್ರೀತಿಸಬೇಕು. ಶ್ರದ್ಧೆಯೇ ಎರಡನೇ ಹಂತ. ಅಲ್ಲಿಂದ ಗೆಲುವು ದೂರವಿಲ್ಲ.

# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಕೆಪಿಸಿಸಿ ನೂತನ ಅಧ್ಯಕ್ಷರಾಗಿ ಬಿ.ಕೆ ಹರಿಪ್ರಸಾದ್ ನೇಮಕ

• ಉದಯವಾಹಿನಿ, ಬೆಂಗಳೂರು



ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಬಿ.ಕೆ ಹರಿಪ್ರಸಾದ್ ಅವರನ್ನ ನೇಮಕ ಮಾಡಿ ಎಐಸಿಸಿ ಅಧಿಕೃತ ಆದೇಶ ಹೊರಡಿಸಿದೆ. ಮುಖ್ಯಮಂತ್ರಿಯಾಗಿ ಡಿಕೆ ಶಿವಕುಮಾರ್ ಅಧಿಕಾರ ಸ್ವೀಕರಿದ ಬೆನ್ನಲ್ಲೇ ಕೆಪಿಸಿಸಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಹೀಗಾಗಿ ತೆರವಾದ ಸ್ಥಾನಕ್ಕೆ ಬಿ.ಕೆ ಹರಿಪ್ರಸಾದ್ ಅವರನ್ನ ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧಿಕೃತ ಆದೇಶ ಹೊರಡಿಸಿದ್ದಾರೆ.

ಅಲ್ಲದೇ ನಿರ್ಗಮಿತ ಅಧ್ಯಕ್ಷ ಡಿ.ಕೆ ಶಿವಕುಮಾರ್ ಅವರ ಕೊಡುಗೆಗಳನ್ನ ಪಕ್ಷವು ಶ್ಲಾಘಿಸುತ್ತದೆ ಎಂದು ಸ್ಮರಿಸಿದ್ದಾರೆ.

## ರಾಜ್ಯಾದ್ಯಂತ 10,000 ಭಾರತ್ ಜೋಡೋ ಯುವಕರ ಸಂಘ ಸ್ಥಾಪನೆ ಪ್ರತಿ ಸಂಘಕ್ಕೆ 10 ಲಕ್ಷ ರೂ.: ಸಿಎಂ ಡಿಕೆಶಿ

• ಉದಯವಾಹಿನಿ, ಬೆಂಗಳೂರು

ರಾಜ್ಯಾದ್ಯಂತ 10,000 ಯುವ ಸಂಘಗಳನ್ನು ಆರಂಭಿಸಲಾಗುವುದು. ಪ್ರತಿ ಸಂಘಕ್ಕೂ ಸರ್ಕಾರದಿಂದ 10 ಲಕ್ಷ ರೂ. ಹಣ ನೀಡಲಾಗುವುದು ಎಂದು ನೂತನ ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರದ ಬಳಿಕ ನಡೆಸಿದ ಮೊದಲ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿಕೆಶಿ, ಹಲವು ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ. ನನ್ನ ಕನಸಿನ ಚಿಂತನೆ. 10 ಸಾವಿರ ಭಾರತ್ ಜೋಡೊ ಯುವಕರ ಸಂಘ ರಚನೆಗೆ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಹೇಳಿದರು.

ಸ್ಪೋರ್ಟ್ಸ್, ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನಾಯಕತ್ವ ಬೆಳೆಸಲು ಇದನ್ನ ಸ್ಥಾಪನೆ ಮಾಡಲಾಗುವುದು. ಆ ಸಂಘಕ್ಕೆ 10 ಲಕ್ಷ ಹಣವನ್ನು ಸರ್ಕಾರ ಕೊಡಲಿದೆ ಎಂದು ತಿಳಿಸಿದರು. ಸಂಘ ಹೇಗೆ ನಡೆಯುತ್ತದೆ ಜಾಗ ಎಲ್ಲಿ ಅಂತ ನಿರ್ಧಾರ ಮಾಡಿದ್ದೇವೆ.

ಇದಕ್ಕೆ ಸರ್ಕಾರವೇ ಹಣ ಕೊಡಲಿದೆ. ಯುವಕರು ಬೇರೆ ಕೆಲಸಕ್ಕೆ ಹೋಗದೆ ನಾಯಕತ್ವ ಬೆಳೆಸಲು, ಸಾಂಸ್ಕೃತಿಕತೆ ಬೆಳೆಯಲು, ಪ್ರತಿಭೆ ಗುರುತಿಸಲು ಸಂಘ ರಚನೆ ಮಾಡಲಾಗುವುದು. ಒಂದು ಪಂಚಾಯತಿಗೆ 10 ಲಕ್ಷ ಹಣವನ್ನು ಸರ್ಕಾರವೇ ಕೊಡಲಿದೆ ಎಂದರು.

## ಮನೆಗೆಲಸದಾಕೆ ಬಂಧನ: 15 ಲಕ್ಷ ನಗದು ಜಪ್ತಿ

• ಉದಯವಾಹಿನಿ,ಬೆಂಗಳೂರು

ಕೆಲಸ ಮಾಡುತ್ತಿದ್ದ ಮನೆಯಲ್ಲೇ 25 ಲಕ್ಷ ಕಳ್ಳತನ ಮಾಡಿದ್ದ ಮನೆಗೆಲಸದಾಕೆಯನ್ನು ರಾಜರಾಜೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿ, 15 ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ. ಜ್ಞಾನಭಾರತಿ ಲೇಔಟ್ ನಿವಾಸಿ ಬದರಿ ರಂಗನ್ ಎಂಬುವರ ಮನೆಯಲ್ಲಿ ರತ್ನಮ್ಮ ಎಂಬುವವರು ಹತ್ತು ವರ್ಷಗಳಿಂದ ಮನೆಗೆಲಸ ಮಾಡಿಕೊಂಡಿದ್ದರು. ಎರಡು ವರ್ಷದ ಹಿಂದೆ ಬದರಿ ರಂಗನ್ ಅವರು ಫ್ಲ್ಯಾಟ್ ವೊಂದನ್ನು ಮಾರಾಟ ಮಾಡಿದ್ದು, ಅದರಿಂದ ಬಂದಿದ್ದ 25 ಲಕ್ಷ ಹಣವನ್ನು ಬೀರುವಿನಲ್ಲಿಟ್ಟಿದ್ದರು. ಇತ್ತೀಚೆಗೆ ನಿವೇಶನ ಖರೀದಿಸಲು ಮುಂಗಡ ಹಣ ನೀಡಬೇಕಾಗಿದ್ದರಿಂದ ಬೀರುವನ್ನು ತೆರೆದು ನೋಡಿದಾಗ ಹಣ ಇರಲಿಲ್ಲ. ಗಾಬರಿಗೊಂಡ ಅವರು ಪತ್ನಿ ಮತ್ತು ತಾಯಿಯನ್ನು ವಿಚಾರಿಸಿದಾಗ ಹಣದ ಬಗ್ಗೆ ಗೊತ್ತಿಲ್ಲವೆಂದು ಹೇಳಿದ್ದಾರೆ. ಬದರಿ ಅವರು ಅನುಮಾನಗೊಂಡು ಮನೆಯಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ ರತ್ನಮ್ಮ ಅವರು ಹಣ ಕಳವು ಮಾಡಿರುವ ದೃಶ್ಯ ಸೆರೆಯಾಗಿದೆ. ತಕ್ಷಣ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

## ಗೇಮ್ ಹಾಕಿ ಕುಚ್ ನಹೀ ಬಾಕಿ ಅರ್ಜಿದಾರರನ್ನು ಛೇಡಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಬಡ ಹಾಕಿ ಆಟಗಾರರನ್ನು ವಂಚಿಸಿದಂತೆ ಕ್ರಿಕೆಟಿಗರನ್ನೂ ವಂಚಿಸಲಿಕ್ಕಾಗುತ್ತದೆಯೇ' ಎಂದು ಪ್ರಶ್ನಿಸಿರುವ ಹೈಕೋರ್ಟ್,ಹಾಕಿ ಆಟಗಾರರನ್ನು ನಂಬಿಸಿ ವಂಚಿಸಿರುವ ಪ್ರಕರಣ ತನಿಖೆಗೆ ಯೋಗ್ಯ ಎಂಬ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ ಗೇಮ್ ಹಾಕಿ ಕುಚ್ ನಹೀ ಬಾಕಿ' ಆಟವೇನೊ ಹಾಕಿ ಆದರೆ, ಉಳಿದಿಲ್ಲ ಏನೂ ಬಾಕಿ) ಎಂದು ಅರ್ಜಿದಾರರನ್ನು ಛೇಡಿಸಿದೆ.

ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು ಎಂದು ಕೋರಿ, ಖೇಲೊ ಮಾಸ್ಟರ್ ಸಂಸ್ಥೆಯ ಖಜಾಂಜಿ ಎ.ಎನ್.ಸೋಮಯ್ಯ, ಅಧ್ಯಕ್ಷ ಎಚ್.ಎಂ.ಪ್ರಸನ್ನ, ಕಾರ್ಯದರ್ಶಿ ಎನ್.ಮಧು ಮತ್ತು ತಂಡದ ಮ್ಯಾನೇಜರ್ ಪಿ.ಕೆ.ತೇಜಶ್ರೀ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

# ಸಿಎಂ ಆಗಿ ಬಂದ ನೋಡು ಡಿಕೆ ಸಾಹೇಬ

## ಡಿಕೆಶಿ ಪಟ್ಟಾಭಿಷೇಕ

• ಉದಯವಾಹಿನಿ, ಬೆಂಗಳೂರು





ಕರ್ನಾಟಕದ 34ನೇ ಅವಧಿಯ 25ನೇ ಮುಖ್ಯಮಂತ್ರಿಯಾಗಿ ಡಿ.ಕೆ ಶಿವಕುಮಾರ್ ಪ್ರಮಾಣ ಸ್ವೀಕರಿಸಿದ್ದಾರೆ. ಪ್ರಮಾಣವಚನ ಸ್ವೀಕರಿಸಿದ ಬಳಿಕ ವಿಧಾನಸೌಧಕ್ಕೆ ಆಗಮಿಸಿದ ಡಿಕೆಶಿ, ಅಂಬೇಡ್ಕರ್, ಬಸವಣ್ಣ, ಗಾಂಧಿ ಸೇರಿದಂತೆ ಎಲ್ಲಾ ಮಹನೀಯರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿದ್ರು.

ನಂತರ ವಿಧಾನಸೌಧ ಆವರಣದಲ್ಲಿರುವ ಮುನೇಶ್ವರ ದೇಗುಲದಲ್ಲಿ ಪೂಜೆ ಸಲ್ಲಿಸಿದ್ರು. ಬಳಿಕ ವಿಧಾನಸೌಧದ ಮೆಟ್ಟಿಲುಗಳಿಗೆ ನಮಸ್ಕರಿಸಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ದೀರ್ಘದಂಡ ನಮಸ್ಕಾರ ಹಾಕಿದ ಡಿಕೆಶಿ ಉತ್ತರದ ನಂದಿ ದ್ವಾರದ ಮೂಲಕ ಪ್ರಜಾ ದೇಗುಲ ಪ್ರವೇಶಿಸಿದರು. ಬಳಿಕ ನೂತನ ಸಂಪುಟ ಸಚಿವರ ಜೊತೆ ಮುಖ್ಯಮಂತ್ರಿಯಾಗಿ ಮೊದಲ ಕ್ಯಾಬಿನೆಟ್ ಸಭೆ ನಡೆಸಿದರು. ಒಟ್ಟಿನಲ್ಲಿ 45 ವರ್ಷಗಳ ರಾಜಕೀಯ ಜೀವನದಲ್ಲಿ ಸಾಕಷ್ಟು ಏಳು-ಬೀಳು ಕಂಡ ಡಿಕೆಶಿ ಛಲದಂಕ ಮಲ್ಲನಂತೆ ಮುಖ್ಯಮಂತ್ರಿ ಗಾದಿಗೇರಿದ್ದಾರೆ.

**ನೇಗಿಲು ಕೊಟ್ಟು ಅಭಿನಂದಿಸಿದ ರೈತರು:** ಸಿಎಂ ಆಗಿ ಪ್ರಮಾಣ ಸ್ವೀಕರಿಸಿದ ಬಳಿಕ ಡಿಕೆ ಶಿವಕುಮಾರ್ ಅವರು ಹೈಕೋರ್ಟ್ ಗೇಟ್ ಬಳಿ ಬರುತ್ತಿದ್ದರು. ಈ ವೇಳೆ ಅಲ್ಲಿದ್ದ ರೈತರನ್ನ ಸಿಎಂ ಬಳಿ ಬಿಡಲು ಪೊಲೀಸರು ನಿರಾಕರಿಸಿದರು. ಬಳಿಕ ಡಿಕೆಶಿ ಸೂಚನೆ ಮೇರೆಗೆ ರೈತರು ಸಿಎಂ ಭೇಟಿಯಾಗಲು ಅನುವುಮಾಡಿಕೊಟ್ಟರು. ಈ ವೇಳೆ ಡಿಕೆಶಿಗೆ ನೇಗಿಲನ್ನ ನೀಡಿ ನೂತನ ಮುಖ್ಯಮಂತ್ರಿಗಳನ್ನ ರೈತರು ಅಭಿನಂದಿಸಿದರು. ಇದಕ್ಕೂ ಮುನ್ನ ಲೋಕಭವನದ ಗಾಜಿನ ಮನೆಯಲ್ಲಿ ಡಿಕೆಶಿ ಸಿಎಂ ಆಗಿ ಪ್ರಮಾಣ ಸ್ವೀಕರಿಸಿದರು.

1 ವಿಧಾನಸೌಧಕ್ಕೆ ಆಗಮಿಸಿದ ನೊಣವಿನಕೆರೆ ಸ್ವಾಮೀಜಿ

2 ಕೆಂಗಲ್ ಗೇಟ್‌ನ ಮೂಲಕ ಸ್ವಾಮೀಜಿ ವಿಧಾನಸೌಧ ಪ್ರವೇಶ

3 ಈ ವೇಳೆ ವಿಧಾನಸೌಧ ಮೆಟ್ಟಿಲುಗಳಿಗೆ ನೀರು ಪ್ರೋಕ್ಷಿಸಿದ ಸ್ವಾಮೀಜಿ

ಸಂಜೆ 4 ಗಂಟೆ 15ಕ್ಕೆ ಸರಿಯಾಗಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಧಿಕಾರ ಪದ ಹಾಗೂ ಗೌಪ್ಯತಾವಿಧಿ ಬೋಧಿಸಿದರು. ರೇಷ್ಮೆ ಜುಬ್ಬಾ, ಪಂಚೆ, ಶಲ್ಯ ಧರಿಸಿ ಸಾಂಪ್ರಾದಾಯಿಕ ಉಡುಗೆಯಲ್ಲಿ ಡಿಕೆ ಪ್ರಮಾಣ ವಚನ ಸ್ವೀಕಾರ ಮಾಡಿದರು. ಕೈಯಲ್ಲಿ ಸಂವಿಧಾನ ಹಿಡಿದು ಡಿಕೆಶಿ ಅವರು ಅಜ್ಜಯ್ಯನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ನಂತರ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಕಡತಕ್ಕೆ ಸಹಿ ಹಾಕಿದರು. ಪ್ರಮಾಣ ವಚನಕ್ಕೂ ಮುನ್ನ ವೇದಿಕೆಯ ಪಕ್ಕದಲ್ಲೇ ಇಡಲಾಗಿದ್ದ ಅಜ್ಜಯ್ಯನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು .

ವೇದಿಕೆಯಲ್ಲಿ ಸಿಎಂ ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್, ತೆಲಂಗಾಣ ಸಿಎಂ ರೇವಂತ್ ರೆಡ್ಡಿ, ಕೇರಳಂ ಸಿಎಂ ಸತೀಶನ್, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಉಪಸ್ಥಿತರಿದ್ದರು.

ವೇದಿಕೆ ಮೇಲಿದ್ದ ಎಲ್ಲರಿಗೂ ಹೂಗುಚ್ಛ ನೀಡಿ ಗೌರವಿಸಿದರು. ಪ್ರತಿಜ್ಞಾವಿಧಿಯ ಸಮಯ ಸಮೀಪಿಸುತ್ತಿರುವುದನ್ನು ಗಮನಿಸಿ ಡಿಕೆಶಿ ಪದೇ ಪದೆ ಸಮಯ ನೋಡುತ್ತಿರುವುದು ಕಂಡುಬಂತು. ಪ್ರಮಾಣವಚನದ ವೇಳೆ ಬೆಂಬಲಿಗರು ಡಿಕೆಶಿ ಪರ ಘೋಷಣೆ ಕೂಗಿದರು.

ಬೆಂಬಲಿಗರು ಡಿಕೆಶಿ ಪರ ಘೋಷಣೆ

ಸಿಹಿ ಹಂಚಿಸಿ ಸಂಭ್ರಮ

ಏಳು ಬೀಳು ಕಂಡ ಡಿಕೆಶಿ


ಸಿಎಂ ಆಗಿ ಡಿಕೆ ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕಾರ ಮಾಡುತ್ತಿದ್ದಂತೆ ಇತ್ತ ಸ್ವಕ್ಷೇತ್ರ ರಾಮನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಾಚಣೆ ಮಾಡಿದರು. ನಗರದ ಐಜೂರು ವೃತ್ತ ಹಾಗೂ ಚನ್ನಪಟ್ಟಣದಲ್ಲಿ ಬಸ್ ನಿಲ್ದಾಣದ ಮುಂಭಾಗದಲ್ಲಿ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿಸಿ ಸಂಭ್ರಮ ಆಚರಿಸಿಕೊಂಡರು.

ಸ್ವಕ್ಷೇತ್ರ ರಾಮನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಂಭ್ರಮಾಚರಣೆ

**ಗಂಡು ಮಕ್ಕಳಿಗೆ ಡಿಕೆಶಿ ಭರ್ಜರಿ ಗಿಫ್ಟ್! ಶಾಲಾ ಬಾಲಕರಿಗೂ ಇನ್ಮುಂದೆ ಫ್ರೀ ಬಸ್ ಪಾಸ್**


ಸಿಎಂ ಆದ ಬಳಿಕ ಡಿಕೆಶಿ ಮೊದಲ ಸುದ್ದಿಗೋಷ್ಠಿ

**ಡಿಕೆಶಿ ಛಲದಂಕ ಮಲ್ಲ**



ಕರ್ನಾಟಕದ 25ನೇ ಮುಖ್ಯಮಂತ್ರಿಯಾಗಿ ಡಿ.ಕೆ. ಶಿಪ್ರಮಾಣವಚನ ಸ್ವೀಕರಿಸಿದ್ದಾರೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪ್ರತಿಜ್ಞಾವಿಧಿ ಬೋಧಿಸಿದ್ದು, ವೀರ ಗಂಗಾಧರ ಅಜ್ಜಯ್ಯನ ಹೆಸರಿನಲ್ಲಿ ಡಿಕೆಶಿ ಪ್ರಮಾಣ ಸ್ವೀಕರಿಸಿರೋದು ಗಮನ ಸೆಳೆದಿದೆ. ಆರಾಧ್ಯ ದೈವವಾದ ಅಜ್ಜಯ್ಯನನ್ನು ನೆನೆದಿರೋದು ಡಿ.ಕೆ. ಶಿಗೆ ಅವರ ಮೇಲಿರುವ ನಂಬಿಕೆ ಎಂತಹದ್ದು ಎಂಬುದಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಅಜ್ಜಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಸಿದ ಬಳಿಕೆಯೇ ಕರ್ನಾಟಕ ಸಿಎಂ ಆಗಿ ಡಿಕೆಶಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ವಿಶೇಷ ಎಂದರೆ ಪದಗ್ರಹಣ ಸಮಾರಂಭ ಕೂಡ ಅಜ್ಜಯ್ಯನ ಮಠ ನೀಡಿರುವ ದಿನಾಂಕ ಮತ್ತು ಸಮಯದಂದೇ ನೆರವೇರಿದೆ.

ವೀರ ಗಂಗಾಧರ ಅಜ್ಜಯ್ಯ ಹೆಸರಿನಲ್ಲಿ ಪ್ರಮಾಣವಚನ



### ಡಿಸಿಎಂ ಆಗಿ ಜಿ. ಪರಮೇಶ್ವರ್ ಪ್ರಮಾಣವಚನ

ಇತ್ತ ಡಾ. ಜಿ.ಪರಮೇಶ್ವರ್ ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿದರು. ಡಾ. ಜಿ.ಪರಮೇಶ್ವರ್ ಅವರು ಡಾ. ಅಂಬೇಡ್ಕರ್ ಅವರ ಹೆಸರಿನ ಮೇಲೆ ಪ್ರಮಾಣವಚನ ಸ್ವೀಕರಿಸಿದರು. ಉಳಿದಂತೆ ಕೆ.ಹೆಚ್. ಮುನಿಯಪ್ಪ, ಕೆ.ಜೆ. ಜಾರ್ಜ್ ದೇವರ ಹೆಸರಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದರು. ಉಳಿದವರು ಎಂ.ಬಿ.ಪಾಟೀಲ್, ರಾಮಲಿಂಗಾರೆಡ್ಡಿ, ಸತೀಶ್ ಜಾರಕಿಹೊಳಿ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಯು.ಟಿ. ಖಾದರ್, ಈಶ್ವರ್ ಖಂಡ್ರೆ, ಯತೀಂದ್ರ ಸಿದ್ದರಾಮಯ್ಯ, ಬೈರತಿ ಸುರೇಶ್ ಮತ್ತು ಶರಣಪ್ರಕಾಶ್ ಪಾಟೀಲ್ ಸಂಪುಟ ಸಚಿವರಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದರು.

### ವಂದೇ ಮಾತರಂ ಹಾಡಿಸಿದ ಸಿಬ್ಬಂದಿ

ಪ್ರಮಾಣವಚನ ಸ್ವೀಕಾರ ಸಮಾರಂಭದ ಮುಂಚೆ ಮೊದಲಿಗೆ ವಂದೇ ಮಾತರಂ ಹಾಡನ್ನು ಹಾಡಿಸಲಾಯಿತು. ಕೇಂದ್ರ ಸರ್ಕಾರದ ಹೊಸ ಮಾರ್ಗಸೂಚಿಯ ಪ್ರಕಾರ 'ವಂದೇ ಮಾತರಂ' ಅನ್ನು ಮೊದಲ ಸ್ಥಾನದಲ್ಲಿ ಇರಿಸಲಾಗಿತ್ತು. ಸಮಾರಂಭದ ಆರಂಭದಲ್ಲಿ ವಂದೇ ಮಾತರಂ ಅನ್ನು ಪೂರ್ಣವಾಗಿ (ಆರು ಚರಣಗಳು) ಹಾಡಲಾಯಿತು. ನಂತರ ರಾಷ್ಟ್ರಗೀತೆ (ಜನಗಣಮನ) ಮತ್ತು ಕೊನೆಯದಾಗಿ ನಾಡ ಗೀತೆಯನ್ನು ನುಡಿಸಲಾಯಿತು. ಆದರೆ, ಈ ವೇಳೆ ರಾಜಭವನ ಸಿಬ್ಬಂದಿ ಎಡವಟ್ಟು ಮಾಡಿದರು. ವಂದೇ ಮಾತರಂ ಗೀತೆ ಹಾಡುವಂತೆ ಮುಖ್ಯ ಕಾರ್ಯದರ್ಶಿ ಸೂಚಿಸಿದರು. ಈ ವೇಳೆ ಸಿಬ್ಬಂದಿ ನಾಡಗೀತೆಯನ್ನು ಹಾಡಿಸಿದರು. ಬಳಿಕ ಅರ್ಧಕ್ಕೆ ನಾಡಗೀತೆಯನ್ನು ಮೊಟಕುಗೊಳಿಸಿ ವಂದೇ ಮಾತರಂ ಗೀತೆ ಹಾಡಿಸಲಾಯಿತು. ಬಳಿಕ ರಾಷ್ಟ್ರಗೀತೆ ಹಾಡಿಸಿದ ಅಧಿಕಾರಿಗಳು, ಕೊನೆಯಲ್ಲಿ ನಾಡಗೀತೆ ನುಡಿಸಿದರು.

### ಸಚಿವ ಎಂ.ಬಿ. ಪಾಟೀಲ್‌ಗೆ ರಾಜ್ಯಪಾಲರ ಕ್ಲಾಸ್

ಸಂಪುಟ ಸಚಿವರಾಗಿ ಪ್ರಮಾಣವಚನ ಸ್ವೀಕಾರದ ಬಳಿಕ ಎಂ.ಬಿ. ಪಾಟೀಲ್ ಅವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕ್ಲಾಸ್ ತೆಗೆದುಕೊಂಡ ಘಟನೆ ನಡೆಯಿತು. ಪ್ರತಿಜ್ಞಾವಿಧಿ ಸ್ವೀಕಾರದ ವೇಳೆ ಬಸವಣ್ಣ ಹಾಗೂ ಸಿದ್ದೇಶ್ವರ ಮಹಾಸ್ವಾಮಿ ಹೆಸರಲ್ಲಿ ಎಂ.ಬಿ. ಪಾಟೀಲ್ ಪ್ರಮಾಣವಚನ ಸ್ವೀಕರಿಸಿದರು. ಈ ವೇಳೆ ಮಧ್ಯ ಪ್ರವೇಶಿದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಪ್ರಮಾಣ ಪತ್ರದಲ್ಲಿರುವ ವಾಖ್ಯಗಳನ್ನು ಮಾತ್ರ ಓದಬೇಕು. ಅದನ್ನು ಬಿಟ್ಟು ಬೇರೆಯದನ್ನು ಓದದಂತೆ ರಾಜ್ಯಪಾಲರು ತಾಕೀತು ಮಾಡಿದ್ದಾರೆ. ಹಾಗಾಗಿ ಎಲ್ಲರೂ ಪತ್ರದಲ್ಲಿರುವುದನ್ನು ಮಾತ್ರ ಓದುವಂತೆ ಮನವಿ ಮಾಡಿದರು.

ಪ್ರಮಾಣವಚನ ಸ್ವೀಕರಿಸಿ ಬಳಿಕ ರಾಜ್ಯಪಾಲರಿಗೆ ಹೂಗುಚ್ಛ ನೀಡಲು ತೆರಳಿದ ವೇಳೆ ಪ್ರಮಾಣವಚನ ಪ್ರತಿಯಲ್ಲಿ ಏನು ಬರೆದಿದೆ ಅದನ್ನೇ ಓದುವಂತೆ ಸಚಿವ ಎಂ.ಬಿ. ಪಾಟೀಲ್ ಅವರಿಗೆ ತಾಕೀತು ಮಾಡಿದರು. ಈ ವೇಳೆ ಎಂ.ಬಿ. ಪಾಟೀಲ್ ಬಸವಣ್ಣನ ಹೆಸರಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ್ದೇನೆ. ಅವರು ಸಾಂಸ್ಕೃತಿಕ ರಾಯಭಾರಿಯಾಗಿದ್ದಾರೆ ಎಂದು ಸಮಜಾಯಿಶಿ ನೀಡಿದರು. ಈ ವೇಳೆ ಥಾವರ್ ಚಂದ್ ಗೆಹ್ಲೋಟ್ ಪ್ರಮಾಣ ಪತ್ರದಲ್ಲಿ ಏನ್ ಬರೆಯಲಾಗಿದೆ ಅದನ್ನಷ್ಟೇ ಓದುವಂತೆ ಮತ್ತೊಮ್ಮೆ ತಾಕೀತು ಮಾಡಿದರು. ಈ ವೇಳೆ ಮಧ್ಯಪ್ರವೇಶಿಸಿದ ಸಿಎಂ ಡಿ.ಕೆ. ಶಿವಕುಮಾರ್ ಅಲ್ಲಿಗೆ ಆಗಮಿಸಿ ಎಂ.ಬಿ. ಪಾಟೀಲ್ ಅವರನ್ನು ತಮ್ಮತ್ತ ಕರೆದು ಹೂಗುಚ್ಛ ನೀಡಿದರು.

### ಡಿ.ಕೆ.ಶಿಗೆ ಮೋದಿ ಅಭಿನಂದನೆ



ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರಿಗೆ ಅಭಿನಂದನೆಗಳು. ಅವರ ಅಧಿಕಾರಾವಧಿಗೆ ಶುಭಾಶಯಗಳು. ಕೇಂದ್ರವು ಕರ್ನಾಟಕ ಸರ್ಕಾರದೊಂದಿಗೆ ಜನರ ಕಲ್ಯಾಣಕ್ಕಾಗಿ ನಿಕಟವಾಗಿ ಕಾರ್ಯನಿರ್ವಹಿಸಲಿದೆ ಎಂದು ಪ್ರಧಾನಿ ಮೋದಿ ಅವರು ಶುಭಾಶಯ ತಿಳಿಸಿದ್ದಾರೆ.

### ವಿಧಾನಸೌಧದ ಮೆಟ್ಟಿಲುಗಳಿಗೆ ನಮಸ್ಕರಿಸಿದ ಸಿಎಂ ಡಿ.ಕೆ.ಶಿವಕುಮಾರ್



ವಿಧಾನಸೌಧ ಪ್ರವೇಶಕ್ಕೆ ಮುನ್ನ ನೂತನ ಸಿಎಂ ಡಿ.ಕೆ. ಶಿವಕುಮಾರ್ ವಿಧಾನಸೌಧ ಮುಂಭಾಗ ಇರುವ ನಾಡಪ್ರಭು ಕೆಂಪೇಗೌಡ ಪ್ರತಿಮೆ, ಬಸವಣ್ಣನ ಪ್ರತಿಮೆ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಪ್ರತಿಮೆ, ಜವಹಾರಲಾಲ್ ನೆಹರೂ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿದರು. ಬಳಿಕ ವಿಧಾನಸೌಧ ಆವರಣದಲ್ಲಿನ ಮಹಾತ್ಮಾ ಗಾಂಧಿ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿದರು. ಬಳಿಕ ವಿಧಾನಸೌಧದ ಉತ್ತರ ದ್ವಾರದಿಂದ ಸಂಪುಟ ಸಭೆಗೆ ಪ್ರವೇಶಿಸಿದರು. ವಿಧಾನಸೌಧ ಪ್ರವೇಶಿಸುವಾಗ ಸಿಎಂ ಡಿ.ಕೆ.ಶಿವಕುಮಾರ್ ಮೆಟ್ಟಿಲುಗಳಿಗೆ ನಮಸ್ಕರಿಸಿದರು.

## ದೇವೇಗೌಡರ ಕಾಲಿಗೆ ಬಿದ್ದು ಆಶೀರ್ವಾದ ಪಡೆದ ಡಿಕೆ ಶಿವಕುಮಾರ್

• ಉದಯವಾಹಿನಿ,ಬೆಂಗಳೂರು

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಭೇಟಿಯ ಬೆನ್ನಲ್ಲೇ, ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಲಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ನಿವಾಸಕ್ಕೆ ಭೇಟಿ ನೀಡಿ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿದ್ದಾರೆ.

ಬೆಂಗಳೂರಿನ ಪದ್ಮನಾಭನಗರದಲ್ಲಿರುವ ದೊಡ್ಡಗೌಡರ ಅಧಿಕೃತ ನಿವಾಸಕ್ಕೆ ಖುದ್ದಾಗಿ ಆಗಮಿಸಿದ ಡಿ.ಕೆ. ಶಿವಕುಮಾರ್, ಹಿರಿಯ ಮುತ್ಸದ್ದಿ ನಾಯಕನಿಗೆ ಗೌರವ ಸಲ್ಲಿಸಿದರು. ಹೆಚ್.ಡಿ. ದೇವೇಗೌಡರನ್ನು ಭೇಟಿಯಾದ ಡಿ.ಕೆ. ಶಿವಕುಮಾರ್,




ಅವರ ಕಾಲಿಗೆ ಬಿದ್ದು ನಮಸ್ಕಾರ ಮಾಡಿ ಆಶೀರ್ವಾದ ಪಡೆದರು. ತಮ್ಮ ಪ್ರಮಾಣವಚನ ಕಾರ್ಯಕ್ರಮಕ್ಕೆ ಬರುವಂತೆ ಅತ್ಯಂತ ಗೌರವಪೂರ್ವಕವಾಗಿ ಆಹ್ವಾನಿಸಿದರು. ಇದೇ ವೇಳೆ ರಾಜ್ಯದ ಸಮಗ್ರ ಅಭಿವೃದ್ಧಿ ಹಾಗೂ ಸುಗಮ ಆಡಳಿತಕ್ಕಾಗಿ ಹಿರಿಯರ ಮಾರ್ಗದರ್ಶನ ಮತ್ತು ಸಹಕಾರ ಸದಾ ಇರಬೇಕೆಂದು ಕೋರಿದರು.

ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಸ್ವೀಕರಿಸಲಿರುವ ಈ ಅದ್ದೂರಿ ಕಾರ್ಯಕ್ರಮವು ಇಂದು ಸಂಜೆ ಲೋಕಭವನದ ಭವ್ಯ ಗಾಜಿನ ಮನೆಯಲ್ಲಿ ಜರುಗಲಿದೆ. ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲು ರಾಜ್ಯದ ಇಬ್ಬರೂ ದೈತ್ಯ ಹಿರಿಯ ನಾಯಕರನ್ನು ಖುದ್ದಾಗಿ ಆಹ್ವಾನಿಸುವ ಮೂಲಕ ಡಿಕೆಶಿ ಹೊಸ ರಾಜಕೀಯ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ.

## ನೂತನ ಸಿಎಂ ಡಿಕೆಶಿ ಆರ್ಥಿಕ ಸಲಹೆಗಾರರಾಗಿ ನಿವೃತ್ತಿ ಐಎಎಸ್ ಅಧಿಕಾರ ಅತೀಕ್ ನೇಮಕ

• ಉದಯವಾಹಿನಿ,ಬೆಂಗಳೂರು



ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರ್ಥಿಕ ಸಲಹೆಗಾರರಾಗಿ ನಿವೃತ್ತ ಐಎಎಸ್ ಅಧಿಕಾರಿ ಅತೀಕ್ ಅವರನ್ನು ನೇಮಕ ಮಾಡಲಾಗಿದೆ.

ಸಿಎಂ ಡಿಕೆಶಿಗೆ ಅಧಿಕಾರಿಗಳ ನೇಮಕ ಮಾಡಲಾಗಿದೆ. ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ತುಷಾರ್ ಗಿರಿನಾಥ್ ಅವರನ್ನು ನೇಮಿಸಲಾಗಿದೆ. ರಾಜೇಂದ್ರ ಚೋಳನ್ ಅವರನ್ನು ಸಿಎಂ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

## ಮೈಸೂರು ನಗರದಲ್ಲಿ 209 ಕೋಟಿ ನೀರಿನ ಬಿಲ್ ಬಾಕಿ: ಸರ್ಕಾರಿ ಇಲಾಖೆಗಳಲ್ಲೇ ಅಧಿಕ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿರುವ ವಿವಿಧ ಸರ್ಕಾರಿ ಇಲಾಖೆಗಳು, ವಾಣಿಜ್ಯ ಕಟ್ಟಡಗಳು, ಗೃಹಬಳಕೆ ಹಾಗೂ ಕೈಗಾರಿಕೆಗಳು 209.17 ಕೋಟಿ ರೂಪಾಯಿ ನೀರಿನ ಬಿಲ್ ಬಾಕಿ ಉಳಿಸಿಕೊಂಡಿವೆ. ಇಲಾಖೆ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡು ಬಾಕಿ ಮಸೂಲಿ ಮಾಡದೇ ಇದ್ದರೆ ಮುಂದಿನ ದಿನಗಳಲ್ಲಿ ಬಾಕಿ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ.





ಮಹಾನಗರ ಪಾಲಿಕೆಯ ವಾಣಿವಿಲಾಸ ನೀರು ಸರಬರಾಜು ಹಾಗೂ ಒಳಚರಂಡಿ ವಿಭಾಗದಿಂದ ಸರ್ಕಾರಿ ಇಲಾಖೆಗಳು, ಕೈಗಾರಿಕೆಗಳು, ವಾಣಿಜ್ಯ ಮಳಿಗೆಗಳು ಹಾಗೂ ಗೃಹ ಬಳಕೆಗೆ ನೀರಿನ ಸಂಪರ್ಕ ಪಡೆದುಕೊಂಡಿವೆ. ಇದಕ್ಕೆ ವಾಣಿ ವಿಲಾಸ ನೀರು ಸರಬರಾಜು ಹಾಗೂ ಒಳಚರಂಡಿ ವಿಭಾಗದಿಂದ ಪ್ರತಿ ತಿಂಗಳು ಬಿಲ್ ನೀಡಲಾಗುತ್ತಿದೆ. ಆದರೆ, ಹಲವು ವರ್ಷಗಳಿಂದ ನೀರಿನ ಬಿಲ್ ಪಾವತಿಸದೆ ಸರ್ಕಾರಿ ಸ್ವಾಮ್ಯದ ಇಲಾಖೆಗಳು 41,04,48,436 ರೂ. ಬಾಕಿ ಉಳಿಸಿಕೊಂಡಿದ್ದರೆ, ಮತ್ತೊಂದೆಡೆ ವಾಣಿಜ್ಯ, ಗೃಹಬಳಕೆ ಕೈಗಾರಿಕೆಗಳು 1,68,13,13,525 ರೂ. ಬಾಕಿ ಉಳಿಸಿಕೊಂಡಿವೆ. ಪಾಲಿಕೆ ನೀರಿನ ದರ ಪರಿಸ್ಕರಿಸಿ ಶೇ.36ರಷ್ಟು ಏರಿಸಿದೆ. ಪರಿಸ್ಕರಿಸಿದ ದರವನ್ನು ಏ.1ರಿಂದ ಜಾರಿಗೊಳಿಸಲಾಗಿದೆ. ಅದರಂತೆ ಕನಿಷ್ಠ ಮಾಸಿಕ ಶುಲ್ಕವನ್ನು 125ರಿಂದ 163 ರೂ.ಗೆ ಏರಿಸಲಾಗಿದೆ. ನಂತರ ಪ್ರತಿ 25 ಸಾವಿರ ಲೀ.ಗೆ 6.50 ರೂ., 25 ರಿಂದ 50 ಲೀ.ಗೆ 10 ರೂ., 50 ರಿಂದ 75 ಲೀ.ಗೆ ರೂ. 75 ರಿಂದ 1 ಲಕ್ಷ ಲೀ.ಗೆ 20 ರೂ., ಲಕ್ಷಕೂ ಹೆಚ್ಚು ಬಳಸಿದರೆ 25 ರೂ ಹೆಚ್ಚಿಸಿದೆ. ಇದಲ್ಲದೆ ಯುಜಿಡಿ ಸೆಸ್ ಕೂಡ ಹೆಚ್ಚಿಸಿದ್ದು, ನೀರಿನ ಬಿಲ್‌ನ ಶೇ.30ರಷ್ಟಿದ್ದ ಒಳಚರಂಡಿ ಸೆಸ್ ಅನ್ನು ಶೇ. 40ಕ್ಕೆ ಹೆಚ್ಚಿಸಲಾಗಿದೆ. ಈಗಾಗಲೇ ಪಾಲಿಕೆ ನೀರಿನ ದರ ಏರಿಕೆ ಮಾಡಿ ವಾಣಿವಿಲಾಸ ವಿಭಾಗ ಅದನ್ನು ಅನುಷ್ಠಾನಗೊಳಿಸಿ ಎಲ್ಲರ ಮನೆ, ವಾಣಿಜ್ಯ ಕಟ್ಟಡ, ಕೈಗಾರಿಕೆಗಳು, ಸರ್ಕಾರಿ ಇಲಾಖೆಗಳಿಗೆ ಹೊಸ ನೀರಿನ ಬಿಲ್ ಕಳುಹಿಸಿದೆ. ಈಗಾಗಲೇ ಇವರೆಲ್ಲರೂ ನೀರಿನ ಬಿಲ್ 209.17 ಕೋಟಿ ಬಾಕಿ ಉಳಿಸಿಕೊಂಡಿದ್ದು, ಇದನ್ನು ಪಾವತಿಸದಿದ್ದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ನೂರಾರು ಕೋಟಿ ಬಿಲ್ ಬಾಕಿ ಉಳಿಯಲಿದೆ. ಈ ಬಗ್ಗೆ ಮೈಸೂರು ಪಾಲಿಕೆ ಎಚ್ಚೆತ್ತುಕೊಂಡು ವಿಶೇಷ ಕಾರ್ಯಾಚರಣೆ ಮಾಡಿ ಬಾಕಿ ಉಳಿದಿರುವ ಬಿಲ್‌ಗಳನ್ನು ವಸೂಲಿ ಮಾಡದಿದ್ದರೆ ಪಾಲಿಕೆ ಬೊಕ್ಕಸಕ್ಕೆ ಭಾರಿ ಹೊಡೆತ ಬೀಳಲಿದೆ.

### ಮೈಸೂರು ಪಾಲಿಕೆಯಿಂದಲೂ ನೀರಿನ ಬಿಲ್ ಬಾಕಿ

ಮೈಸೂರು ಪಾಲಿಕೆ ನೀರಿನ ಬಿಲ್ ಬಾಕಿದಾರರ ಪಟ್ಟಿಯಲ್ಲಿ ಸೇರಿದ್ದು, ತನ್ನದೇ ಆದ ನೀರು ಸರಬರಾಜು ವಿಭಾಗವಾದ ವಾಣಿ ವಿಲಾಸ ವಾಟರ್ ವರ್ಕ್ಸ್‌ಗೆ 5,25,384 ರೂ. ಬಾಕಿ ಉಳಿಸಿಕೊಂಡಿದೆ. ತನ್ನದೇ ಆದ ಇಲಾಖೆಗೆ ಬಾಕಿ ಪಾವತಿಸಲು ವಿಫಲವಾಗಿದ್ದು, ಇತರ ಬಾಕಿದಾರರಿಂದ ಬಾಕಿ ಪಾವತಿದಾರರನ್ನು ವಸೂಲಿ ಮಾಡಲು ನಾಗರಿಕ ಸಂಸ್ಥೆ ಎಷ್ಟು ಪರಿಣಾಮಕಾರಿಯಾಗಿ ಒತ್ತಾಯಿಸುತ್ತದೆ ಎಂಬ ಪ್ರಶ್ನೆ ಮೂಡಿದೆ.


## ಆರು ಮಂದಿ ವಕೀಲರನ್ನು ಹೈಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಿಸಲು ಕೊಲಿಜಿಯಂ ಶಿಫಾರಸು

• ಉದಯವಾಹಿನಿ,ಬೆಂಗಳೂರು

ಆರು ಮಂದಿ ವಕೀಲರನ್ನು ಹೈಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಿಸಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ.

ವಕೀಲರಾದ ರಾಘವೇಂದ್ರ, ಸೀತಾರಾಂ ಶ್ರೀವಾತ್ಸವ್, ಹೇಮಾ ಕುಲಕರ್ಣಿ, ಸುಬ್ರಮಣ್ಯ ರಂಗರಾವ್, ಟಿ.ಪಿ. ವಿವೇಕಾನಂದ, ಬಿ. ಪ್ರಮೋದ್ ಮತ್ತು ಶಾಂತಿಭೂಷಣ್ ಅವರ ಹೆಸರುಗಳನ್ನು ಕೊಲಿಜಿಯಂ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಇತ್ತೀಚೆಗೆ ಮೂವರು ನ್ಯಾಯಾಂಗ ಅಧಿಕಾರಿಗಳನ್ನು ಹೆಚ್ಚುವರಿ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲಾಗಿದ್ದು, ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸಿದ್ದರು.

ಹೈಕೋರ್ಟ್‌ನಲ್ಲಿ 62 ನ್ಯಾಯಮೂರ್ತಿಗಳ ಹುದ್ದೆಗಳಿದ್ದು, ಶಿಫಾರಸುಗೊಂಡಿರುವ ವಕೀಲರ ಹೆಸರಿಗೆ ಒಪ್ಪಿಗೆ ದೊರೆತರೆ ನ್ಯಾಯಮೂರ್ತಿಗಳ ಸಂಖ್ಯೆ 54ಕ್ಕೆ ಏರಿಕೆಯಾಗಲಿದೆ.





ಹೆಚ್ ಶಾಂತಿಭೂಷಣ್ ಅವರು ಸದ್ಯ ಡೆಪ್ಯೂಟಿ ಸಾಲಿಸಿಟರ್ ಜನರಲ್ ಆಗಿ ಹೈಕೋರ್ಟ್‌ನಲ್ಲಿ ಕೇಂದ್ರ ಸರ್ಕಾರದ ಪರವಾಗಿ ಪ್ರತಿನಿಧಿಸುತ್ತಿದ್ದಾರೆ.

**ಈ ದಿನದ ದರ** ಪೆಟ್ರೋಲ್: 110.91 ₹/L ಡೀಸೆಲ್ : 98.80₹/L ಬಂಗಾರ: ₹ 15,152/Gram 24ct ₹14,430 /Gram 22ct ಬೆಳ್ಳಿ: ₹265.00/Gram

# ಪ್ರಮಾಣವಚನಕ್ಕೂ ಮುನ್ನವೇ ಹಿನ್ನಡೆ: ಹೈಕೋರ್ಟ್ ಎದುರು ಅಳವಡಿಸಿದ್ದ ಬೃಹತ್ ಕಟೌಟ್‌ಗಳ ತೆರವು

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿರುವ ಡಿಕೆ ಶಿವಕುಮಾರ್ ಅವರ ಪ್ರಮಾಣವಚನ ಸಮಾರಂಭದ ಮುನ್ನ, ಅವರ ಅಭಿಮಾನಿಗಳು ಕರ್ನಾಟಕ ಹೈಕೋರ್ಟ್ ಎದುರು ಅಳವಡಿಸುತ್ತಿದ್ದ ಬೃಹತ್ ಕಟೌಟ್‌ಗಳನ್ನು ತೆರವುಗೊಳಿಸಿದ ಘಟನೆ ನಡೆದಿದೆ.

ಪ್ರಮಾಣವಚನ ಸಮಾರಂಭದ ಮುನ್ನದಿನ ಹೈಕೋರ್ಟ್ ಆವರಣದ ಎದುರು ಡಿ.ಕೆ. ಶಿವಕುಮಾರ್ ಅವರ ಕಟೌಟ್‌ಗಳನ್ನು ಸ್ಥಾಪಿಸುವ ಕಾರ್ಯ ನಡೆಯುತ್ತಿತ್ತು. ಆದರೆ, ಸಾರ್ವಜನಿಕ ಸ್ಥಳಗಳಲ್ಲಿ ಕಟೌಟ್‌ಗಳ ಅಳವಡಿಕೆ ಹಾಗೂ ಅದಕ್ಕೆ ಸಂಬಂಧಿಸಿದ ನ್ಯಾಯಾಂಗ ನಿರ್ದೇಶನಗಳ ಹಿನ್ನೆಲೆಯಲ್ಲಿ ಕಾನೂನು ತೊಂದರೆ ಎದುರಾಗುವ ಸಾಧ್ಯತೆಯನ್ನು ಮನಗಂಡು, ಅಧಿಕಾರಿಗಳು, ಆಯೋಜಕರು ಕಟೌಟ್‌ಗಳನ್ನು ತೆರವುಗೊಳಿಸಿದ್ದಾರೆ ಎಂದು ತಿಳಿದುಬಂದಿದೆ. ಬೆಂಗಳೂರಿನ ಹೈಕೋರ್ಟ್ ಆವರಣದ ಎದುರು ಅವರ ಬೆಂಬಲಿಗರು ಅಳವಡಿಸುತ್ತಿದ್ದ ಬೃಹತ್ ಕಟೌಟ್ ಗಳು ಹಾಗೂ ಫ್ಲೆಕ್ಸ್‌ಗಳನ್ನು ಕೊನೆ ಕ್ಷಣದಲ್ಲಿ ತೆರವುಗೊಳಿಸಲಾಗಿದೆ.

ಕಾನೂನು ಹಿನ್ನಡೆಯ ಭೀತಿಯಿಂದ ಈ ಕ್ರಮ ಕೈಗೊಳ್ಳಲಾಗಿದ್ದು, ಹೈಕೋರ್ಟ್ ಸಮೀಪದ ಪ್ರದೇಶದಲ್ಲಿ ಯಾವುದೇ ವಿವಾದ ಉಂಟಾಗದಂತೆ ಮುನ್ನೆಚ್ಚರಿಕೆವಹಿಸಲಾಗಿದೆ. ಈ ಬೆಳವಣಿಗೆ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಮೂಲಗಳ ಪ್ರಕಾರ, ಡಿಕೆ ಶಿವಕುಮಾರ್ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ನಗರದ ವಿವಿಧ ಭಾಗಗಳಲ್ಲಿ ಸಂಭ್ರಮಾಚರಣೆಗೆ ಸಿದ್ಧತೆ ನಡೆಸಿದ್ದರು. ಅದರ ಭಾಗವಾಗಿ ಹೈಕೋರ್ಟ್ ಎದುರಿನ ಪ್ರಮುಖ ರಸ್ತೆಯ ಬದಿಯಲ್ಲಿ ಡಿಕೆ ಶಿವಕುಮಾರ್ ಅವರ ಬೃಹತ್ ಕಟೌಟ್‌ಗಳನ್ನು ಅಳವಡಿಸುವ ಕಾರ್ಯ ಆರಂಭವಾಗಿತ್ತು. ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

**ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸ**

ವಿಶೇಷವಾಗಿ ಹೈಕೋರ್ಟ್ ಆವರಣದ ಎದುರು ಇಂತಹ ಕಟೌಟ್‌ಗಳನ್ನು ಅಳವಡಿಸುವುದು ನ್ಯಾಯಾಂಗದ ಗಮನ ಸೆಳೆಯುವ ಸಾಧ್ಯತೆ ಇದೆ ಎಂಬ ಕಾರಣದಿಂದ ಅವುಗಳನ್ನು ತಕ್ಷಣ ತೆರವುಗೊಳಿಸಲಾಯಿತು ಎನ್ನಲಾಗಿದೆ.

# ಮತ್ತಷ್ಟು ಯಶಸ್ಸು ನಿಮ್ಮದಾಗಲಿ

• ಉದಯವಾಹಿನಿ,ಬೆಂಗಳೂರು

ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ ಅವರು ನಿಯೋಜಿತ ಸಿಎಂ ಡಿ.ಕೆ ಶಿವಕುಮಾರ್ ಅವರಿಗೆ ಬುಧವಾರ ದೂರವಾಣಿ ಕರೆ ಮಾಡಿ ಶುಭ ಹಾರೈಸಿದರು. ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಿರಿ. ಕರ್ನಾಟಕವನ್ನ ಯಶಸ್ವಿಯಾಗಿ ಮುನ್ನಡೆಸುತ್ತೀರಿ ಎಂಬ ಅದಮ್ಯ ವಿಶ್ವಾಸ ನನಗಿದೆ. ಹೊಸ ಜವಾಬ್ದಾರಿಯನ್ನ ಸಮರ್ಥವಾಗಿ ನಿಭಾಯಿಸಿ. ಮತ್ತಷ್ಟು ಯಶಸ್ಸು ನಿಮ್ಮದಾಗಲಿ ಎಂದು ಸೋನಿಯಾ ಗಾಂಧಿ ಅವರು ಡಿಕೆ ಶಿವಕುಮಾರ್ ಅವರಿಗೆ ಶುಭಾಶಯ ಹೇಳಿದರು.

ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಇಂದು ಗದ್ದುಗೆಗೇರುತ್ತಿದ್ದು, ಅವರ ಜೊತೆಗೆ ಒಟ್ಟು 13 ಮಂದಿ ಶಾಸಕರು ಸಚಿವರಾಗಿ ಪ್ರತಿಜ್ಞಾವಿಧಿ ಸ್ವೀಕರಿಸಲಿದ್ದಾರೆ. ಸಂಪುಟ ರಚನೆಯ ಆರಂಭದಿಂದಲೂ ತೀವ್ರ ಕುತೂಹಲ ಮೂಡಿಸಿದ್ದ ಉಪಮುಖ್ಯಮಂತ್ರಿ ಹುದ್ದೆಯ ಸಸ್ಪೆನ್ಸ್‌ಗೆ ಕೊನೆಗೂ ತೆರೆ ಬಿದ್ದಿದೆ. ವರದಿಯ ಪ್ರಕಾರ, ಹಿರಿಯ ದಲಿತ ನಾಯಕ ಡಾ. ಜಿ. ಪರಮೇಶ್ವರ್ ಅವರು ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ಏಕೈಕ ಉಪಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವುದು ಈಗ ಅಧಿಕೃತಗೊಂಡಿದೆ. ಆ ಮೂಲಕ ಹೈಕಮಾಂಡ್ ಹಿರಿಯ ನಾಯಕನ ಅನುಭವಕ್ಕೆ ದೊಡ್ಡ ಮನ್ನಣೆ ನೀಡಿದೆ.

ಈ ಬಾರಿಯ ಸಂಪುಟ ರಚನೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಅತ್ಯಂತ ನಾಜೂಕಾದ ನಡೆ ಇಟ್ಟಿದೆ. ಪ್ರಮಾಣವಚನ ಸ್ವೀಕರಿಸಲಿರುವ ಒಟ್ಟು 14 ನಾಯಕರ ಪೈಕಿ 12 ಮಂದಿ ನಾಯಕರು ಈ ಹಿಂದಿನ ಸಿದ್ದರಾಮಯ್ಯ ಅವರ ಸಂಪುಟದಲ್ಲೂ ಸಚಿವರಾಗಿ ಕಾರ್ಯನಿರ್ವಹಿಸಿದ ಅಪಾರ ಅನುಭವ ಹೊಂದಿದ್ದಾರೆ. ಆಡಳಿತ ಯಂತ್ರಕ್ಕೆ ಯಾವುದೇ ಹಿನ್ನಡೆಯಾಗದಂತೆ ಮುನ್ನಡೆಸಲು ಈ ಹಿರಿಯ ನಾಯಕರನ್ನು ಯಥಾವತ್ತಾಗಿ ಮುಂದುವರೆಸಲಾಗಿದೆ. ಹಳೇ ಸಚಿವರ ದಂಡಿನ ಮಧ್ಯೆ ಇಬ್ಬರು ಪ್ರಮುಖ ನಾಯಕರು ಈ ಬಾರಿ ಹೊಸದಾಗಿ ಮಂತ್ರಿ ಪಟ್ಟವನ್ನು ಅಲಂಕರಿಸುತ್ತಿದ್ದಾರೆ. ವಿಧಾನಸಭಾ ಸ್ಪೀಕರ್ ಆಗಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಸರ್ಕಾರದ ಸಚಿವರಿಗೆ ಬಿಸಿ ಮುಟ್ಟಿಸಿದ್ದ ಯು.ಟಿ. ಖಾದರ್ ಅವರು ಈ ಬಾರಿ ಸ್ಪೀಕರ್ ಸ್ಥಾನದಿಂದ ನೇರವಾಗಿ ಸಚಿವ ಸಂಪುಟಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಮಾಜಿ ಸಿಎಂ ಸಿದ್ದರಾಮಯ್ಯ ಅವರ ಪುತ್ರ ಹಾಗೂ ಪ್ರಸ್ತುತ ಪರಿಷತ್ ಸದಸ್ಯರಾಗಿರುವ ಯತೀಂದ್ರ ಸಿದ್ದರಾಮಯ್ಯ ಅವರೂ ಮೊದಲ ಬಾರಿಗೆ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಮೂಲಕ ರಾಜ್ಯ ರಾಜಕಾರಣದ ಮುಂಚೂಣಿಗೆ ಬರಲಿದ್ದಾರೆ.

## ಡಿಕೆಶಿಗೆ ಸೋನಿಯಾ ಗಾಂಧಿ ಶುಭ ಹಾರೈಕೆ


ಉದಯವಾಹಿನಿ ಚಿತ್ರ

**ಕರ್ನಾಟಕವನ್ನ ಯಶಸ್ವಿಯಾಗಿ ಮುನ್ನಡೆಸುತ್ತೀರಿ ಎಂಬ ಅದಮ್ಯ ವಿಶ್ವಾಸ ನನಗಿದೆ**

## ಯಾರಿಗೆ ಯಾವ ಖಾತೆ

ಖಾತೆ ಹಂಚಿಕೆಯ ಅಧಿಕೃತ ವಿವರ ಇನ್ನೂ ಲಭ್ಯವಾಗಿಲ್ಲ. ಪ್ರಮಾಣವಚನ ಸ್ವೀಕರಿಸಿದ ಬಳಿಕ ಸಚಿವರಿಗೆ ಖಾತೆ ಹಂಚಿಕೆ ಮಾಡಲಾಗುತ್ತದೆ. ಸಿಕ್ಕಿರುವ ಮೂಲಗಳ ಮಾಹಿತಿ ಪ್ರಕಾರ ಸಚಿವರಿಗೆ ಈ ಕೆಳಗಿನಂತೆ ಖಾತೆ ಹಂಚಿಕೆಯಾಗುವ ಸಾಧ್ಯತೆಯಿದೆ.

ಪ್ರಿಯಾಂಕ್ ಖರ್ಗೆ ಗೃಹ ಎಂ.ಬಿ.ಪಾಟೀಲ್ ಕೈಗಾರಿಕೆ ಶರಣ ಪ್ರಕಾಶ್ ಪಾಟೀಲ್ ವೈದ್ಯಕೀಯ ಶಿಕ್ಷಣ ಯತೀಂದ್ರ ಸಿದ್ದರಾಮಯ್ಯ ನಗರಾಭಿವೃದ್ಧಿ ಕೃಷ್ಣ ಬೈರೇಗೌಡ ಬೆಂಗಳೂರು ಅಭಿವೃದ್ಧಿ ರಾಮಲಿಂಗಾ ರೆಡ್ಡಿ ಜಲ ಸಂಪನ್ಮೂಲ ಯು.ಟಿ ಖಾದರ್- ಆರೋಗ್ಯ ಬೈರತಿ ಸುರೇಶ್ ಗ್ರಾಮೀಣಾಭಿವೃದ್ಧಿ

### ಎಲ್ಲರ ಜೊತೆಗೂಡಿ ಕೆಲಸ ಮಾಡುತ್ತೇನೆ

**ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವುದಾಗಿ ಹೇಳಿರುವ ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತಮೊಂದಿಗೆ 13 ಜನ ಸಂಪುಟ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ತಿಳಿಸಿದ್ದಾರೆ. ಡಾಲರ್ಸ್ ಕಾಲೋನಿಯಲ್ಲಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ನಿವಾಸಕ್ಕೆ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿರಿಯ ನಾಯಕರು ರಾಜ್ಯಕ್ಕಾಗಿ ದುಡಿದಿದ್ದಾರೆ, ಮಾರ್ಗದರ್ಶನ ಮಾಡಿದ್ದಾರೆ. ತಮದೇ ಆದ ಕೊಡುಗೆ ನೀಡಿದ್ದಾರೆ. ಎಲ್ಲರ ಜೊತೆಗೂಡಿ ರಾಜ್ಯದ ಅಭಿವೃದ್ಧಿಗೆ ತಾವು ಕೆಲಸ ಮಾಡುವುದಾಗಿ ತಿಳಿಸಿದ್ದಾರೆ. ತಮೊಂದಿಗೆ ಇನ್ನೂ 13 ಜನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ಇದೇವೇಳೆ ಸ್ಪಷ್ಟಪಡಿಸಿದರು. ನಂತರ ದೇವೇಗೌಡರ ಮನೆ ಬಳಿ ಮಾತನಾಡಿದ ಡಿ.ಕೆ.ಶಿವಕುಮಾರ್, ಮಾಜಿ ಪ್ರಧಾನಿ ದೇವೇಗೌಡರು, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಹಾಗೆಯೇ ಉಳಿದ ಮಾಜಿ ಮುಖ್ಯಮಂತ್ರಿಗಳೂ ಸಾಕಷ್ಟು ಕೆಲಸ ಮಾಡಿದ್ದಾರೆ.**

## ಕಾನೂನು ಪಾಲಿಸುವ ನೆಪದಲ್ಲಿ ಅಧಿಕಾರಿಗಳು ಕಾನೂನಿನ ಪದಗಳನ್ನೇ ನಕಲು ಮಾಡಿ ಆದೇಶಿಸಲಾಗದು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಜಾರಿ ನಿರ್ದೇಶನಾಲಯ(ಇ.ಡಿ) ಅಧಿಕಾರಿಗಳು ಕಾನೂನನ್ನು ಪಾಲಿಸುತ್ತಿದ್ದೇವೆ ಎಂದು ತೋರಿಸಲು ಕಾನೂನಿನಲ್ಲಿರುವ ಪದಗಳನ್ನೇ ನಕಲು ಮಾಡಿ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅಕಾಶವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ. ಅಲ್ಲದೆ, ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್ಎ) ಅಡಿಯಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ಹೊರಡಿಸಲಾಗುವ ಇಂತಹ ತಾತ್ಕಾಲಿಕ ಜಪ್ತಿ ಆದೇಶಗಳು ಕಾನೂನು ಪ್ರಕಾರ ಸಮರ್ಥನೀಯವಲ್ಲ ಎಂದು ನ್ಯಾಯಪೀಠ ಹೇಳಿದೆ.

ಮೈಸೂರಿನ ಕೆ.ಜಿ.ಕೊಪ್ಪಲಿನ ನಿವಾಸಿಯಾಗಿರುವ 70 ವರ್ಷದ ಜಯಮ್ಮ ಎಂಬವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಅಲ್ಲದೆ, ಇ.ಡಿ ಅಧಿಕಾರಿಗಳು 2025ರ ಜೂನ್ 9ರಂದು ಹೊರಡಿಸಿದ್ದ ಅರ್ಜಿದಾರರ ಆಸ್ತಿಯನ್ನು ತಾತ್ಕಾಲಿಕ ಮುಟ್ಟುಗೋಲು ಹಾಕಿಕೊಳ್ಳುವ ಆದೇಶ ಮತ್ತು ಅದರ ಮುಂದುವರೆದ ಎಲ್ಲಾ ಪ್ರಕ್ರಿಯೆಗಳನ್ನು ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ.

ಅಧಿಕಾರಿಗಳು ಕೇವಲ ಕಾಯ್ದೆಯ ಸೆಕ್ಷನ್ 5(1)ರಲ್ಲಿರುವ ಅಂಶಗಳನ್ನು ಯಾಂತ್ರಿಕವಾಗಿ ಆದೇಶದಲ್ಲಿ ನಕಲು ಮಾಡಿದರೆ ಸಾಲದು. ಆಸ್ತಿಯನ್ನು ತಕ್ಷಣವೇ ಜಪ್ತಿ ಮಾಡದಿದ್ದರೆ ತನಿಖಾ ಪ್ರಕ್ರಿಯೆಗೆ ಹಿನ್ನಡೆಯಾಗುತ್ತದೆ ಎಂಬುದಕ್ಕೆ ಅಧಿಕಾರಿಯ ಬಳಿ ಸ್ಪಷ್ಟವಾದ ವಸ್ತುನಿಷ್ಠ ದಾಖಲೆಗಳನ್ನು ಇಟ್ಟುಕೊಂಡಿರಬೇಕು.

## ರಾಜ್ಯದ ಮುಖ್ಯಮಂತ್ರಿಯಾಗಲಿರುವ ಡಿಕೆಶಿ ಎಲ್ಲಾ ಮತ ಬಾಂಧವರ ಪ್ರೀತಿಯ ಮಗನಾಗಲಿ: ನೊಣವಿನಕೆರೆ ಶ್ರೀ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಮುಖ್ಯಮಂತ್ರಿಯಾಗಿ ಇಂದು ಪ್ರಮಾಣವಚನ ಸ್ವೀಕರಿಸುತ್ತಿರುವ ಡಿಕೆ ಶಿವಕುಮಾರ್ ಅವರು ಎಲ್ಲಾ ಮತ ಬಾಂಧವರ ಪ್ರೀತಿಯ ಮಗನಾಗಲಿ ಎಂದು ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಡಾ.ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಶುಭ ಹಾರೈಸಿದ್ದಾರೆ.

ಚಿತ್ರದುರ್ಗ ತಾಲ್ಲೂಕಿನ ಮಾದನಾಯಕನಹಳ್ಳಿ ಗ್ರಾಮದಲ್ಲಿ ನಡೆದ ಲಿಂ.ಕೊಟ್ರುಸ್ವಾಮಿ ಹಾಗು ಲಿಂ.ಸಾರಂಗಜ್ಜನವರ ಕರ್ತೃ ಗದ್ದುಗೆಗಳ ಪುನಃ ನಿರ್ಮಾಣ ಲೋಕಾರ್ಪಣೆ ಕಾರ್ಯಕ್ರಮದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಮ್ಮ ಡಿಕೆಶಿ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸುತ್ತಿರುವುದು ವಿಶೇಷ ಎನಿಸಿದೆ. ಡಿಕೆ ಶಿವಕುಮಾರ್ ನಮ್ಮ ಮಠದ ಮಗನಾಗಿ, ಶ್ರದ್ಧಾ ಭಕ್ತಿಯಿಂದ ಸೇವೆ ಸಲ್ಲಿಸಿದ್ದಾರೆ.

ವೀರ ಗಂಗಾಧರ ಶಿವಾಚಾರ್ಯರ ಕೃಪಾಶೀರ್ವಾದದಿಂದ ಅವರಿಗೆ ಜಯ ಲಭಿಸಿದ್ದು, ಸಿಎಂ ಕಚೇರಿಯಲ್ಲಿ ಅಜ್ಜಯ್ಯ ಅವರ ಭಾವಚಿತ್ರವಿದೆ. ಹೀಗಾಗಿ ಎಲ್ಲಾ ಭಕ್ತಾದಿಗಳ ಸಂಕಲ್ಪದಿಂದ ಎಲ್ಲರೂ ಗೆದ್ದಿದ್ದೀರೆಂಬ ಸಂತೋಷವಿದೆ. ಇಂದು ಮಧ್ಯಾಹ್ನ 3ರಿಂದ 4ಕ್ಕೆ ಸಿಎಂ ಪ್ರಮಾಣವಚನ ಸ್ವೀಕರಿಸಲಿದ್ದು, ರೈತರು, ವರ್ತಕರು, ಸೈನಿಕರು, ಮಹಿಳೆಯರು, ಯುವಕರು ಹಾಗೂ ಮುತ್ಸದ್ದಿಗಳ ಸೇವೆ ಮಾಡುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಆಶೀರ್ವದಿಸಿದ್ದಾರೆ.

## ಲೋಕಭವನದತ್ತ ಜನ ಜಮಾವಣೆ: ಪಾಸ್ ಇದ್ದವರಿಗಷ್ಟೇ ಪ್ರವೇಶ ಕಲ್ಪಿಸುತ್ತಿರುವ ಪೊಲೀಸರು

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ರಾಜ್ಯದ ನೂತನ ಸಿಎಂ ಆಗಿ ಡಿ.ಕೆ.ಶಿವಕುಮಾರ್ ಅವರ ಪ್ರಮಾಣವಚನಕ್ಕೆ ಕ್ಷಣಗಣನೆ ಆರಂಭವಾಗಿದೆ. ಲೋಕಭವನಕ್ಕೆ ನಿಧಾನವಾಗಿ ಜನರು ಜಮಾವಣೆಯಾಗುತ್ತಿದ್ದಾರೆ. ದೂರದ ಊರಿನಿಂದ ಬಂದಿರುವ ಜನರು ವಿಐಪಿ ಪಾಸ್ ತೋರಿಸಿ ಲೋಕಭವನ ಪ್ರವೇಶಿಸುತ್ತಿದ್ದಾರೆ.

ಪಾಸ್ ಹೊಂದಿರುವವರಿಗೆ ಪೊಲೀಸ್ ತಿಮ್ಮಯ್ಯ ಜಂಕ್ಷನ್ ಮೂಲಕ ಪ್ರವೇಶ ಕಲ್ಪಿಸಲಾಗಿದೆ. ಪ್ರತಿಯೊಬ್ಬರ ಪಾಸ್ ಪರಿಶೀಲಿಸಿ ಸಹಿ ಹಾಕಿ, ಸ್ಕ್ಯಾನ್ ಮಾಡಿ ಪೊಲೀಸರು ಒಳಬಿಡುತ್ತಿದ್ದಾರೆ. ಬ್ಯಾರಿಕೇಡ್‌ಗಳನ್ನು ಹಾಕಿ ಪಾದಚಾರಿ ರಸ್ತೆ ಮೂಲಕ ಲೋಕಭವನಕ್ಕೆ ಬಿಡಲಾಗುತ್ತಿದೆ. ಒಂದು ಪಾಸ್‌ಗೆ ಒಬ್ಬರಿಗಷ್ಟೇ ಪ್ರವೇಶವಿದೆ. ಪಾಸ್ ಇಲ್ಲದವರನ್ನು ಪೊಲೀಸರು ವಾಪಸ್ ಕಳುಹಿಸುತ್ತಿದ್ದಾರೆ. ಈಗಾಗಲೇ ಲೋಕಭವನದ ರಸ್ತೆ ಬಂದ್ ಮಾಡಿರುವ ಸಂಚಾರ ಪೊಲೀಸರು ಇಂಡಿಯನ್ ಎಕ್ಸ್‌ಪ್ರೆಸ್ -ಕನ್ನಿಂಗ್ ಹಾಮ್ ರಸ್ತೆ ಮೂಲಕ ಗಾಲ್ಫ್ ರಸ್ತೆ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದಾರೆ.

## ರಾಜಕಾರಣಕ್ಕೆ ಮರಳಲು ಕಾಲ ಕೂಡಿಬರಬೇಕು: ನಟಿ ರಮ್ಯಾ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ನಾನು ರಾಜಕಾರಣಕ್ಕೆ ಮರಳಲು ಕಾಲ ಕೂಡಿಬರಬೇಕು ಎಂದು ನಟಿ ರಮ್ಯಾ ತಿಳಿಸಿದ್ದಾರೆ. ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ ಶಿವಕುಮಾರ್ ಅವರು ಇಂದು ಗದ್ದುಗೆಗೇರುತ್ತಿದ್ದು, ನಟಿ ರಮ್ಯಾ ಕೂಡ ಡಿಕೆ ಶಿವಕುಮಾರ್ ಅವರ ಪ್ರಮಾಣ ಸ್ವೀಕಾರ ಸಮಾರಂಭಕ್ಕೆ ಆಗಮಿಸಿದ್ದಾರೆ. ಈ ವೇಳೆ ತಮ್ಮ ಮುಂದಿನ ರಾಜಕೀಯ ನಡೆ ಕುರಿತು ಜೊತೆಗೆ ಮಾತನಾಡಿದ್ದಾರೆ. ನಾನೀಗ ಬಂದಿರೋದು ಡಿಕೆ ಶಿವಕುಮಾರ್ ಅವರ ಫ್ಯಾಮಿಲಿಗೋಸ್ಕರ. ಇಷ್ಟು ವರ್ಷ ಕಷ್ಟಪಟ್ಟಿರುವುದರ ಫಲ ಅವರಿಗೆ ಸಿಕ್ಕಿದೆ. ಅದನ್ನ ನೋಡಿ ಸೆಲಬ್ರೇಟ್ ಮಾಡೋಕೆ ಬಂದಿದ್ದೇನೆ. ನಾನು ರಾಜಕಾರಣಕ್ಕೆ ಮರಳಲು ಕಾಲ ಕೂಡಿಬರಬೇಕು. ಎಲ್ಲದಕ್ಕೂ ಸಮಯ ಬೇಕಲ್ಲ ಅಂದಿದ್ದಾರೆ. ಇನ್ನೂ ಡಿಕೆಶಿ ಪದಗ್ರಹಣ ವಿಚಾರ ಕುರಿತು ಮಾತನಾಡಿ, ಡಿಕೆ ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕಾರ ಮಾಡ್ತಿರೋದು ಖುಷಿ ಆಗ್ತಿದೆ.

## ನೂತನ ಡಿಕೆಶಿ ಸರ್ಕಾರದ ಭಾಗವಾಗುತ್ತಿರುವ ಹಿನ್ನೆಲೆಯಲ್ಲಿ ವಿಧಾನಸಭೆ ಸ್ಪೀಕರ್ ಹುದ್ದೆಗೆ ಯು.ಟಿ. ಖಾದರ್ ರಾಜೀನಾಮೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕರ್ನಾಟಕ ನೂತನ ಸಿಎಂ ಆಗಿ ಡಿಕೆ ಶಿವಕುಮಾರ್ ಪ್ರಮಾಣ ಸ್ವೀಕರಿಸುತ್ತಿರುವ ಬೆನ್ನಲ್ಲೇ ವಿಧಾನಸಭೆ ಸ್ಪೀಕರ್ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಹಾಗೂ ಮಂಗಳೂರು ಶಾಸಕ ಯುಟಿ ಖಾದರ್ ಬುಧವಾರ ರಾಜಿನಾಮೆ ನೀಡಿದ್ದಾರೆ ಎಂದು ತಿಳಿದುಬಂದಿದೆ. ನೂತನ ಡಿ.ಕೆ. ಶಿವಕುಮಾರ್ ಸರ್ಕಾರದ ಭಾಗವಾಗುತ್ತಿರುವ ಹಿನ್ನೆಲೆಯಲ್ಲಿ ವಿಧಾನಸಭೆ ಸ್ಪೀಕರ್ ಹುದ್ದೆಗೆ ಯು.ಟಿ. ಖಾದರ್ ರಾಜೀನಾಮೆ ನೀಡಿದ್ದು, ಡೆಪ್ಯುಟಿ ಸ್ಪೀಕರ್ ರುದ್ರಪ್ಪ ಲಮಾಣಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಲೋಕಭವನದಲ್ಲೇ ಡೆಪ್ಯುಟಿ ಸ್ಪೀಕರ್‌ಗೆ ಖಾದರ್ ರಾಜೀನಾಮೆ ಪತ್ರ ಸಲ್ಲಿಸಿದ್ದು, ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲು ಬರುವಂತೆ ನಿಯೋಜಿತ ಸಿಎಂ ಡಿ.ಕೆ. ಶಿವಕುಮಾರ್ ಅವರಿಂದ ಕರೆ ಬೆನ್ನಲ್ಲೇ ಈ ವಿದ್ಯಮಾನ ನಡೆದಿದೆ ಎನ್ನಲಾಗಿದೆ. ಸಚಿವ ಸ್ಥಾನದ ವಿಚಾರವಾಗಿ ಪ್ರತಿಕ್ರಿಯಿಸಿರುವ ಯು.ಟಿ. ಖಾದರ್ ನಾನು ಯಾವುದೇ ಖಾತೆಗೆ ಬೇಡಿಕೆ ಇಟ್ಟಿಲ್ಲ. ಆದರೆ ಆರೋಗ್ಯ ಖಾತೆ ಅಥವಾ ವಸತಿ ಖಾತೆ ಸಿಕ್ಕರೆ ಒಳಿತೆಂಬ ಬಯಕೆ ಇದೆ. ನಾಯಕರು ಯಾವುದೇ ಜವಾಬ್ದಾರಿ ಕೊಟ್ಟರೂ ನಿಭಾಯಿಸುತ್ತೇನೆ. ಉಪಮುಖ್ಯಮಂತ್ರಿ ಸ್ಥಾನ ಕೊಟ್ಟರೂ ನಿಭಾಯಿಸಲು ತಾನು ಸಿದ್ಧ. ಯಾವ ಬಾಲ್ ಬಂದರೂ ಬ್ಯಾಟಿಂಗ್ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

## ಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ಹೊರಗುಳಿಯುವುದಿಲ್ಲ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬೆಂಗಳೂರಿನಲ್ಲಿ ಮತದಾರರಪಟ್ಟಿ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯು ಚುರುಕು ಪಡೆದುಕೊಳ್ಳುತ್ತಿದೆ. ಮತದಾರರ ಪಟ್ಟಿಯಿಂದ ಅನರ್ಹ ಮತದಾರರ ಹೆಸರನ್ನು ತೆಗೆಯುವ ಮತ್ತು ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳುವ ಉದ್ದೇಶವನ್ನು ವಿಶೇಷ ಸಮಗ್ರ ಪರಿಷ್ಕರಣೆ ಹೊಂದಿದ್ದು, ಇದರಲ್ಲಿ ಮತಗಟ್ಟೆ ಅಧಿಕಾರಿ (ಬಿಎಲ್‌ಒ)ಗಳ ಗರಿಷ್ಠ ಪಾತ್ರ, ಜವಾಬ್ದಾರಿ ಇದೆ ಎಂದು ಪಾಲಿಕೆ ಆಯುಕ್ತರಾದ ಡಾ. ರಾಜೇಂದ್ರ ಕೆ.ವಿ ಹೇಳಿದ್ದಾರೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಹಾಗೂ ಚುನಾವಣೆ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಪಾಲಿಕೆ ಆಯುಕ್ತರಾದ ಡಾ. ರಾಜೇಂದ್ರ ಕೆ.ವಿ. ಅವರು ಜೂನ್ 1ರ ಮಂಗಳವಾರ ವಿಜಯನಗರ, ಬಸವನಗುಡಿ ಹಾಗೂ ಪದ್ಮನಾಭನಗರ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಭೆ ನಡೆಸಿದರು.


ಈ ವೇಳೆ ಮಾತನಾಡಿದ ಅವರು ಎಸ್.ಐ.ಆರ್‌ನಲ್ಲಿ ಮ್ಯಾಪಿಂಗ್ ಪ್ರಕ್ರಿಯೆ ಬಹಳ ಮುಖ್ಯವಾಗಿದ್ದು, ಬಿಎಲ್ ಒಗಳು, ಮತಗಟ್ಟೆ ಅಧಿಕಾರಿಗಳ ಮೇಲ್ವಿಚಾರಕರುಗಳು, ಮತದಾರರ ನೋಂದಣಾಧಿಕಾರಿಗಳು , ಸಹಾಯಕ ಮತದಾರರ ನೋಂದಣಾಧಿಕಾರಿಗಳು ಈ ಬಗ್ಗೆ ಸಮರ್ಪಕವಾಗಿ ಕೆಲಸಗಳನ್ನು ಮುಗಿಸಿಕೊಳ್ಳಬೇಕು. ನೂತನ ಬಿಎಲ್‌ಒಗಳಿಗೆ ಅಗತ್ಯ ತರಬೇತಿ ನೀಡಬೇಕು ಎಂದು ಆಯುಕ್ತರು ನಿರ್ದೇಶಿಸಿದ್ದಾರೆ.

ಉಳಿದ ಎರಡು ತಿಂಗಳುಗಳಲ್ಲಿ ಮ್ಯಾಪಿಂಗ್, ಅನ್ -ಮ್ಯಾಪಿಂಗ್, ರೀ-ಮ್ಯಾಪಿಂಗ್ ಇತ್ಯಾದಿ ಪ್ರಕ್ರಿಯೆಗಳಿಗೆ ಪ್ರಾಮಾಣಿಕ ಪ್ರಯತ್ನದ ಅಗತ್ಯವಿದೆ. ರಾಜಕೀಯ ಪಕ್ಷಗಳಿಂದ ನೇಮಿಸಲ್ಪಟ್ಟ ಬೂತ್ ಮಟ್ಟದ ಏಜೆಂಟ್ ಗಳನ್ನು ಬಿಎಲ್‌ಒಗಳು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು, ಅವರ ಸಹಾಯವನ್ನು ಪಡೆಯಬೇಕು ಮತ್ತು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು. ಬಿಎಲ್ ಒಗಳು, ಮೇಲ್ವಿಚಾರಕರು, ಇಆರ್‌ಒಗಳು ಮತ್ತು ಎಇಆರ್‌ಒಗಳು ಮತಗಟ್ಟೆಗಳಲ್ಲಿ ಇಂಟರ್ನೆಟ್‌ನಂತಹ ಸೌಲಭ್ಯಗಳನ್ನು ವ್ಯವಸ್ಥೆ ಮಾಡಬೇಕು ಎಂದು ಅವರು ಹೇಳಿದರು.

> **ಎಸ್‌ಐಆರ್ ಸಂಪೂರ್ಣವಾಗಿ ತಂತ್ರಜ್ಞಾನ ಆಧಾರಿತವಾಗಿದೆ ಮತ್ತು ಈ ವ್ಯಾಯಾಮದ ಸಮಯದಲ್ಲಿ, ಬಿಎಲ್‌ಒಗಳು ದೈಹಿಕ ಮತ್ತು ಮಾನಸಿಕ ಪರಿಶ್ರಮದಿಂದಾಗಿ ಒತ್ತಡವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ, ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳುವುದು, ವ್ಯವಸ್ಥಿತ ಯೋಜನೆಯನ್ನು ರೂಪಿಸುವುದು ಮತ್ತು ಕೆಲಸ ಮಾಡಲು ಪ್ರಾರಂಭಿಸುವುದು ಅತ್ಯಗತ್ಯ** ಆಯುಕ್ತ ಕೆ.ವಿ.ರಾಜೇಂದ್ರ

## ಮುಖ್ಯಮಂತ್ರಿಯಾಗಿ ಡಿಕೆ ಶಿವಕುಮಾರ್ ಪ್ರಮಾಣ: ಶೀಘ್ರವೇ ಚುನಾವಣೆ ನಡೆಸುವಂತೆ ಒತ್ತಾಯ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಚುನಾವಣಾ ಗಡುವು ಮತ್ತು ಡಿ ಕೆ ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವುದರಿಂದ, ಐದು ನಗರ ನಿಗಮಗಳಿಗೆ ಚುನಾವಣೆಗಳು ಯಾವುದೇ ವಿಳಂಬವಿಲ್ಲದೆ ನಡೆಯಲಿವೆ ಎಂದು ಸಂಬಂಧಪಟ್ಟ ನಾಗರಿಕರು ಮತ್ತು ಸ್ಥಳೀಯ ಪಕ್ಷದ ಪ್ರತಿನಿಧಿಗಳು ಆಶಿಸಿದ್ದಾರೆ.

ಇತ್ತೀಚಿನ ರಾಜಕೀಯ ಬೆಳವಣಿಗೆ ಮತ್ತು ಸ್ಥಳೀಯ ಚುನಾವಣೆಗಳ ಮೇಲಿನ ಅದರ ಪರಿಣಾಮಗಳ ಕುರಿತು ಟಿಎನ್ಐಇ ಜೊತೆ ಮಾತನಾಡಿದ ಸಿಐವಿಐಸಿ-ಬೆಂಗಳೂರಿನ ಕಾರ್ಯನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್, ಸ್ಥಳೀಯ ಚುನಾವಣೆಗಳಲ್ಲಿ ಹೆಚ್ಚಿನ ವಿಳಂಬವು ಸ್ಥಳೀಯ ಸಮುದಾಯಗಳಿಗೆ, ವಿಶೇಷವಾಗಿ ನಗರ ಬಡವರಿಗೆ, ಸಾಮಾನ್ಯವಾಗಿ ತಮ್ಮ ಅಗತ್ಯಗಳಿಗೆ ಸ್ಪಂದಿಸುವ ಸ್ಥಳೀಯ ಚುನಾಯಿತ ಪ್ರತಿನಿಧಿಗಳನ್ನು ಸಂಪರ್ಕಿಸಲು ಸಾಧ್ಯವಾಗದಂತೆ ಪರಿಣಾಮ ಬೀರುತ್ತದೆ. ಸ್ಥಳೀಯ ಯೋಜನೆ ಮತ್ತು ನಿಧಿಗಳು ಮತ್ತು ಕಾಮಗಾರಿಗಳ ಮೇಲ್ವಿಚಾರಣೆಗಾಗಿ ಉದ್ದೇಶಿಸಲಾದ ವಾರ್ಡ್ ಸಮಿತಿಗಳು ಮತ್ತು ಪ್ರದೇಶ ಸಭೆಗಳು ಸಹ ಇರುವುದಿಲ್ಲ, ನಗರ ನಿಗಮಗಳನ್ನು ನಿರ್ವಹಿಸುವ ಅಧಿಕಾರಿಗಳು ಜಿಬಿಎ ಮತ್ತು ರಾಜ್ಯ ಸರ್ಕಾರದಲ್ಲಿನ ತಮ್ಮ ಹಿರಿಯ ಅಧಿಕಾರಿಗಳಿಗೆ ಮಾತ್ರ ಜವಾಬ್ದಾರರಾಗಿರುತ್ತಾರೆ ಎಂದು ಅವರು ಹೇಳಿದರು.

ಬೆಂಗಳೂರು ನವನಿರ್ಮಾಣ ಪಕ್ಷದ ಸಂಸ್ಥಾಪಕ ಶ್ರೀಕಾಂತ್ ನರಸಿಂಹನ್, ಕಳೆದ ಐದೂವರೆ ವರ್ಷಗಳಿಂದ ನಮ್ಮ ಬಹುದಿನಗಳ ಬೇಡಿಕೆಯೆಂದರೆ, ಸಂವಿಧಾನದ ಪ್ರಕಾರ, ಪುರಸಭೆ ಚುನಾವಣೆಗಳನ್ನು ಸಮಯಕ್ಕೆ ಸರಿಯಾಗಿ ನಡೆಸಬೇಕು.

ವಾಸ್ತವವಾಗಿ, ಚುನಾವಣೆಗಳು ಒಂದು ದಿನ ವಿಳಂಬವಾದರೆ, ಅದು ಸಂವಿಧಾನಬಾಹಿರ. 2020 ರಿಂದ ನಗರಕ್ಕೆ ಮೇಯರ್ ಅಥವಾ ಕಾರ್ಪೊರೇಟರ್‌ಗಳು ಇಲ್ಲ.

ಈ ವಿಳಂಬವು ಪ್ರತಿದಿನ ನಗರದ ಪರಿಸ್ಥಿತಿಯನ್ನು ಹದಗೆಡಿಸಲು ಕಾರಣವಾಗಿದೆ. ಯಾವುದೇ ಹೆಚ್ಚಿನ ವಿಳಂಬವು ಪರಿಸ್ಥಿತಿಯನ್ನು ಹದಗೆಡಿಸುವ ಹಂತಕ್ಕೆ ಕೊಂಡೊಯ್ಯುತ್ತದೆ, ಅಲ್ಲಿ ಪರಿಸ್ಥಿತಿಯು ಬದಲಾಯಿಸಲಾಗದ ಹಂತಕ್ಕೆ ಕೊಂಡೊಯ್ಯುತ್ತದೆ.

## ಡಿ.ಕೆ.ಶಿವಕುಮರ್ ಹೊಸ ಸಂಪುಟದಲ್ಲಿ ಮಹಿಳಾ ಪ್ರಾತಿನಿಧ್ಯ ಇಲ್ಲ

• ಉದಯವಾಹಿನಿ, ಬೆಂಗಳೂರು

ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್ ಅವರ ಹೊಸ ಮಂತ್ರಿಮಂಡಲವನ್ನು ಹೈಕಮಾಂಡ್ ಜೊತೆ ಸುದೀರ್ಘವಾಗಿ ಚರ್ಚೆ ನಡೆಸಿ ಅಳೆದು ತೂಗಿ ಅಂತಿಮಗೊಳಿಸಲಾಗಿದೆ. ರಾಜ್ಯಪಾಲರಿಗೆ ಈಗಾಗಲೇ ಕಳುಹಿಸಿರುವ ಮಂತ್ರಿಮಂಡಲ ಸದಸ್ಯರ ಪ್ರಮಾಣವಚನ ಪಟ್ಟಿ ಪ್ರಕಾರ ಹೊಸ ಕ್ಯಾಬಿನೆಟ್‌ನಲ್ಲಿ 13 ಜನ ಶಾಸಕರು ಡಿ.ಕೆ.ಶಿವಕುಮಾರ್ ಜೊತೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ವಿಶೇಷವೆಂದರೆ ಈ ಹದಿನಾಲ್ಕು ಜನರ ಇಡೀ ಮಂತ್ರಿಮಂಡಲದಲ್ಲಿ ಒಬ್ಬರೇ ಒಬ್ಬ ಮಹಿಳಾ ಶಾಸಕರಿಗೆ ಪ್ರಾತಿನಿಧ್ಯ ನೀಡಲಾಗಿಲ್ಲ. ಪ್ರಮಾಣ ವಚನ ಸ್ವೀಕಾರ ಮಾಡುವವರೆಲ್ಲರೂ ಪುರುಷರಾಗಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಒಟ್ಟು 8 ಜನ (ಐವರು ವಿಧಾನಸಭೆ ಸದಸ್ಯರು, ಮೂವರು ವಿಧಾನ ಪರಿಷತ್ ಸದಸ್ಯರು) ಮಹಿಳಾ ಶಾಸಕರಿದ್ದರೂ ಮೊದಲ ಹಂತದ ಸಚಿವ ಸಂಪುಟ ರಚನೆಯಲ್ಲಿ ಯಾವ ಮಹಿಳಾ ಶಾಸಕರಿಗೂ ಅವಕಾಶ ಸಿಕ್ಕಿಲ್ಲ.

## ಡಿಕೆಶಿ ಸಿಎಂ ಆದ ಬಳಿಕವಾದರೂ ಬೆಂಗಳೂರಿನ ಸಮಸ್ಯೆಗಳಿಗೆ ಸಿಗುತ್ತಾ ಪರಿಹಾರ..?

• ಉದಯವಾಹಿನಿ, ಬೆಂಗಳೂರು

ಉಸ್ತುವಾರಿ ಸಚಿವರಾಗಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ನಗರದ ಅಭಿವೃದ್ಧಿ ವೇಗಗೊಳ್ಳಬಹುದು ಎಂಬ ಆಶಾಭಾವ ವ್ಯಕ್ತವಾಗಿದೆ. ಬೆಂಗಳೂರು ಅಭಿವೃದ್ಧಿ ಸಚಿವರಾಗಿದ್ದ ಅವಧಿಯಲ್ಲಿ ಡಿ.ಕೆ. ಶಿವಕುಮಾರ್ ಅವರು ಬ್ರಾಂಡ್ ಬೆಂಗಳೂರು ಹಾಗೂ ಗ್ರೇಟರ್ ಬೆಂಗಳೂರು ಪರಿಕಲ್ಪನೆಗೆ ಹೆಚ್ಚಿನ ಒತ್ತು ನೀಡಿದ್ದರು. ನಗರವನ್ನು ಜಾಗತಿಕ ಮಟ್ಟದ ನಗರವನ್ನಾಗಿ ರೂಪಿಸುವ ಗುರಿಯೊಂದಿಗೆ ಹಲವು ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ಘೋಷಿಸಿದ್ದರು.

ಇದೀಗ ಅವರೇ ರಾಜ್ಯದ ಮುಖ್ಯಮಂತ್ರಿಯಾಗುತ್ತಿರುವುದರಿಂದ ಆ ಯೋಜನೆಗಳಿಗೆ ಮತ್ತಷ್ಟು ವೇಗ ಸಿಗುವ ನಿರೀಕ್ಷೆ ವ್ಯಕ್ತವಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ನಗರದ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಮಹತ್ವಾಕಾಂಕ್ಷಿ ಯೋಜನೆಗಳ ರೂಪುರೇಷೆಗಳನ್ನು ಸಿದ್ಧಪಡಿಸುವಲ್ಲಿ ಶಿವಕುಮಾರ್ ಪ್ರಮುಖ ಪಾತ್ರವಹಿಸಿದ್ದರು. ಸರ್ಕಾರದ ಆರ್ಥಿಕ ಮಿತಿಗಳ ನಡುವೆಯೂ ಮೂಲಸೌಕರ್ಯ ಕಾಮಗಾರಿಗಳಿಗೆ ಹಣಕಾಸು ಒದಗಿಸುವುದು, ನೀತಿ ಬದಲಾವಣೆಗಳನ್ನು ಜಾರಿಗೆ ತರುವುದು ಹಾಗೂ ಆಡಳಿತಾತ್ಮಕವಾಗಿ ಕಠಿಣ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಅವರು ಮುಂಚೂಣಿಯಲ್ಲಿದ್ದರು.

ಪ್ರಮುಖ ಯೋಜನೆಗಳಿಗೆ ವೇಗ ಶಿವಕುಮಾರ್ ಅವರ ಕನಸಿನ ಯೋಜನೆಗಳಲ್ಲಿ ಉತ್ತರದಕ್ಷಿಣ ಹಾಗೂ ಪೂರ್ವಪಶ್ಚಿಮ ಸುರಂಗ ರಸ್ತೆ ಯೋಜನೆಗಳು, 126 ಕಿ.ಮೀ ಎತ್ತರದ ಕಾರಿಡಾರ್‌ಗಳು, ಹೆಬ್ಬಾಳ ಜಂಕ್ಷನ್ ಸುರಂಗ ಮಾರ್ಗ, ಪೆರಿಫೆರಲ್ ರಿಂಗ್ ರಸ್ತೆ , ಬಿಡದಿಯ ಸಮಗ್ರ ಟೌನ್‌ಶಿಪ್ ಯೋಜನೆ ಹಾಗೂ ಮಳೆನೀರಿನ ಚರಂಡಿಗಳ ಬಫರ್ ವಲಯಗಳಲ್ಲಿ ರಸ್ತೆ ನಿರ್ಮಾಣ ಯೋಜನೆಗಳು ಸೇರಿವೆ.


ಉದಯವಾಹಿನಿ ಚಿತ್ರ

ಇದರ ಜೊತೆಗೆ, ದಕ್ಷಿಣ ಬೆಂಗಳೂರಿಗೆ ಎರಡನೇ ವಿಮಾನ ನಿಲ್ದಾಣ ಸ್ಥಾಪನೆ ಕುರಿತೂ ಅವರು ನಿರಂತರವಾಗಿ ಧ್ವನಿ ಎತ್ತುತ್ತಿದ್ದಾರೆ. ಮುಖ್ಯಮಂತ್ರಿಯಾದರೆ ಇಂತಹ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ನಿರ್ಧಾರ ಪ್ರಕ್ರಿಯೆ ಇನ್ನಷ್ಟು ವೇಗವಾಗಿ ನಡೆಯುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಆಡಳಿತಾತ್ಮಕ ಸುಧಾರಣೆಗಳೂ ನಡೆದಿವೆ, ಅವರ ಅವಧಿಯಲ್ಲಿ ಕಟ್ಟಡ ವಿಚಲನಮಿತಿಯನ್ನು 5ರಿಂದ 15 ಶೇಕಡಕ್ಕೆ ಹೆಚ್ಚಿಸುವುದು, ಪ್ರೀಮಿಯಂ ಎಫ್ ಎಆರ್ ಜಾರಿ, ಟಿಡಿಆರ್ ವ್ಯವಸ್ಥೆಯನ್ನು ಹೆಚ್ಚು ಆಕರ್ಷಕಗೊಳಿಸುವುದು ಹಾಗೂ ಜಾಹೀರಾತು ನೀತಿಯಲ್ಲಿ ಬದಲಾವಣೆ ತರಲು ಕಾನೂನು ತಿದ್ದುಪಡಿಗಳು ನಡೆದವು. ಅದೇ ರೀತಿ, ಬಿಬಿಎಂಪಿಯನ್ನು ಐದು ನಗರ ಪಾಲಿಕೆಗಳಾಗಿ ಪುನರ್‌ರಚಿಸಿ ಗ್ರೇಟರ್ ಬೆಂಗಳೂರು ಆಡಳಿತ ವ್ಯವಸ್ಥೆಗೆ ಅಡಿಪಾಯ ಹಾಕಿದ ಹೆಗ್ಗಳಿಕೆಯೂ ಅವರಿಗಿದೆ. ಬೃಹತ್ ಯೋಜನೆಗಳ ಜೊತೆಗೆ ಮೂಲಭೂತ ಸಮಸ್ಯೆಗಳಿಗೂ ಪರಿಹಾರ ಬೇಕುಆದರೆ ನಗರದ ಜನರ ಮುಂದೆ ಇರುವ ಪ್ರಶ್ನೆ ಬೇರೆ. ಸುರಂಗ ರಸ್ತೆ, ಎಲಿವೇಟೆಡ್ ಕಾರಿಡಾರ್‌ಗಳಂತಹ ಬೃಹತ್ ಯೋಜನೆಗಳಿಗಿಂತಲೂ, ದೈನಂದಿನ ಬದುಕಿಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರವೇ ಜನರ ಮೊದಲ ಆದ್ಯತೆಯಾಗಿದೆ.

### ಕುಡಿಯುವ ನೀರಿನ ಕೊರತೆ

**ಪ್ರತಿ ಮಳೆಗಾಲದಲ್ಲೂ ಜಲಾವೃತವಾಗುವ ಪ್ರದೇಶಗಳು, ಮಳೆನೀರಿನ ಚರಂಡಿಗಳಲ್ಲಿ ಹರಿಯುತ್ತಿರುವ ಕೊಳಚೆ ನೀರು, ಗುಂಡಿಮಯ ರಸ್ತೆಗಳು, ಹದಗೆಟ್ಟ ಪಾದಚಾರಿ ಮಾರ್ಗಗಳು, ಕಸದ ವಿಲೇವಾರಿ ಸಮಸ್ಯೆ, ಕೆರೆಗಳ ಸಂರಕ್ಷಣೆ, ಕುಡಿಯುವ ನೀರಿನ ಕೊರತೆ ಹಾಗೂ ವಿಳಂಬವಾಗುತ್ತಿರುವ ಮೆಟ್ರೋ ಕಾಮಗಾರಿಗಳು ಇನ್ನೂ ನಗರವನ್ನು ಕಾಡುತ್ತಿವೆ.**

### ಮೂಲಸೌಕರ್ಯ ಯೋಜನೆಗಳು ಅಗತ್ಯ

**ನಗರದ ಹಲವು ಭಾಗಗಳಲ್ಲಿ ರಸ್ತೆ ಡಾಂಬರೀಕರಣ, ಸಮರ್ಪಕ ಫುಟ್‌ಪಾತ್ ನಿರ್ಮಾಣ, ಸಂಚಾರ ದಟ್ಟಣೆ ನಿಯಂತ್ರಣ ಹಾಗೂ ಪರಿಸರ ಸಂರಕ್ಷಣೆ ಕುರಿತಂತೆ ನಾಗರಿಕರ ನಿರೀಕ್ಷೆಗಳು ಹೆಚ್ಚಿವೆ. ತಜ್ಞರ ಅಭಿಪ್ರಾಯವೇನುಮಾಜಿ ಕಾರ್ಪೊರೇಟರ್ ಅಬ್ದುಲ್ ವಾಜಿದ್ ಅವರ ಪ್ರಕಾರ, ಬೆಂಗಳೂರಿಗೆ ದೀರ್ಘಾವಧಿಯ ಸಂಚಾರ ಪರಿಹಾರಕ್ಕಾಗಿ ದೊಡ್ಡ ಮೂಲಸೌಕರ್ಯ ಯೋಜನೆಗಳು ಅಗತ್ಯ.**

# ಕಮರ್ಷಿಯಲ್ ಶೆಡ್ಡುಗಳ ನಿರ್ಮಾಣ ಕಣ್ಮುಚ್ಚಿ ಕುಳಿತ ನಗರಸಭೆ, ಸಾರ್ವಜನಿಕರ ಆಕ್ರೋಶ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ಕೆಲವು ವರ್ಷಗಳಿಂದ ಜನವಸತಿ ಪ್ರದೇಶಗಳಲ್ಲಿ ಅನಧಿಕೃತ ಕಮರ್ಷಿಯಲ್ ಶೆಡ್ಡುಗಳ ನಿರ್ಮಾಣದಿಂದಾಗಿ ಸಾರ್ವಜನಿಕರು ಬೇಸತ್ತು ಹೋಗಿದ್ದಾರೆ. ನಗರ ಪ್ರದೇಶದಲ್ಲಿ ಕೆಲ ಸೈಟಿನ ಮಾಲೀಕರು ಹಣ ಮಾಡುವ ಆಸೆಯಿಂದಾಗಿ ಶೆಡ್ಡು ಗಳನ್ನು ನಿರ್ಮಿಸಿ ಬಾಡಿಗೆಗೆ ಅಥವಾ ಜಾಗವನ್ನು ಭೋಗ್ಯಕ್ಕೆ ಕೊಡುತ್ತಿದ್ದಾರೆ. ಅಂತಹ ಶೆಡ್ಡುಗಳ ಬಾಡಿಗೆದಾರರು ಯಾವ ರೀತಿಯಲ್ಲಿ ಅದನ್ನು ಬಳಸಿಕೊಳ್ಳುತ್ತಿದ್ದಾರೆ, ಇದರಿಂದ ಅಕ್ಕಪಕ್ಕದವರಿಗೆ ತೊಂದರೆಯಾಗುತ್ತಿದೆಯೇ ಎಂಬುದನ್ನು ಅರಿಯಬೇಕಿದೆ.

ಸಾಮಾನ್ಯವಾಗಿ ವಸತಿ ಪ್ರದೇಶಗಳಲ್ಲಿ ಜನಸಾಮಾನ್ಯರ ದಿನಬಳಕೆ ವಸ್ತುಗಳನ್ನು ಪುಟ್ಟ ಶೆಡ್ಡುಗಳನ್ನು ಮಾಡಿ ಅಂಗಡಿ ರೂಪದಲ್ಲಿ ವ್ಯಾಪಾರ ಮಾಡುವುದು ಸಾರ್ವಜನಿಕರ ಅನುಕೂಲಕ್ಕಿರುವುದು ಒಳ್ಳೆಯದೇ. ಕೆಲ ಶೆಡ್ಡುಗಳು ಸಿಮೆಂಟ್ ಗೋಡನ್,2 ಮತ್ತು 4 ವೀಲರ್ ಪಾರ್ಕಿಂಗ್ ಮಾಡಲು, ಡ್ರಗ್ಸ್ ಗೋಡನ್, ಇನ್ನು ಹಲವಾರು ವಸ್ತುಗಳ ಶೇಖರಣೆ ಮತ್ತು ಮಾರಾಟ ಮಾಡಲು ಉಪಯೋಗಿಸುತ್ತಾರೆ. ಇನ್ನು ಕೆಲವಷ್ಟು ಪ್ರಭಾವಿ ವ್ಯಕ್ತಿಗಳು ಫೈನಾನ್ಸ್ ವ್ಯವಹಾರಗಳನ್ನು ಮಾಡುತ್ತಾ ಹಣ ಕೊಡದೇ ಇದ್ದಾಗ ಅವರ ವಾಹನಗಳನ್ನು ಸೀಜ್ ಶೆಡ್ಡುಗಳಲ್ಲಿ ನಿಲ್ಲಿಸುತ್ತಾರೆ. ಮತ್ತೆ ಕೆಲ ಜನ ನಮ್ಮದೇ ಸೈಟು ಅಲ್ಲವೇ ಯಾರು ಕೇಳುತ್ತಾರೆ ಎಂದು ಶೆಡ್ ಗಳನ್ನು ನಿರ್ಮಿಸಿ ಅದರಲ್ಲಿಯೇ ಸ್ನೇಹಿತರೊಂದಿಗೆ ಪಾರ್ಟಿ ಮಾಡುತ್ತಾರೆ ಎಂಬ ಆರೋಪವೂ ಕೂಡ ಕೇಳಿ ಬರುತ್ತಿವೆ. ನಗರದ ಕೆಲ ಅಫಿಶಿಯಲ್ ಲೇಔಟ್ ಗಳಲ್ಲಿ ಶೆಡ್ಡುಗಳ ದುರ್ಬಳಕೆ ಮತ್ತು ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿವೆ ಎಂದು ಸಾರ್ವಜನಿಕರ ಅಭಿಪ್ರಾಯ. ಅಫಿಶಿಯಲ್ ಏರಿಯಾಗಳನ್ನು ಆಯ್ಕೆ ಮಾಡುವುದರ ಉದ್ದೇಶ ಜನಸಂದಣಿ ಕಮ್ಮಿ ಇರುತ್ತದೆ ಅವರ ಪಾಡಿಗೆ ಅವರು ಇರುತ್ತಾರೆ,ಮತ್ತೆ ಯಾರು ಪ್ರಶ್ನಿಸುವುದಿಲ್ಲ ಸ್ವಲ್ಪ ಏರು ಧ್ವನಿಯಲ್ಲಿ ಮಾತನಾಡಿದರೆ ಸಾಕು ಸುಮ್ಮನಾಗಿ ಬಿಡುತ್ತಾರೆ ಎಂಬ ಮನಸ್ಥಿತಿ ಅವರದ್ದಾಗಿರುತ್ತದೆ. ಇದೀಗ ಹಾಸನ ರಸ್ತೆಯ ಶಿವ ನಗರದಲ್ಲಿರುವ ಕಮರ್ಷಿಯಲ್ ಶೆಡ್ ಒಂದು ಸಾರ್ವಜನಿಕ ವಲಯದಲ್ಲಿ ಆತಂಕ ಸೃಷ್ಟಿಸಿದೆ. ಈ ಶೆಡ್ಡಿಗೆ ಅಂತರ್ ರಾಜ್ಯ ನೊಂದಣಿ ವಾಹನಗಳು ಆಹಾರ ಪದಾರ್ಥಗಳನ್ನು ತುಂಬಿಕೊಂಡು ಬರುತ್ತವೆ. ವಿಈ ಶೆಡ್ಡಿಗೆ ಬರುವ ಆಹಾರ ಪದಾರ್ಥಗಳ ಎಲ್ಲಿಂದ ಆಮದು ಆಗುತ್ತಿವೆ ಮತ್ತೆ ಇವುಗಳನ್ನು ಮತ್ತೆ ಹೊಸ ಪ್ಯಾಕ್ ಮಾಡಿ ಮಾರಾಟ ಮಾಡುತ್ತಿದ್ದಾರ ಹಾಗೇನಾದರೂ ಇದ್ದಲ್ಲಿ ಅಂತಹ ಆಹಾರ ಪದಾರ್ಥಗಳನ್ನು ತಿಂದಂಥವರ ಗತಿ ಏನು?ಎಂಬುದು ಸಾರ್ವಜನಿಕರ ಯಕ್ಷ ಪ್ರಶ್ನೆಯಾಗಿದೆ.

# ಕೆಸರುಗದ್ದೆಯಾದ ಚತ್ತಗುಟ್ಲಹಳ್ಳಿ ರಸ್ತೆ

• ಉದಯವಾಹಿನಿ, ಬಂಗಾರಪೇಟೆ

ಡಿಜಿಟಲ್ ಇಂಡಿಯಾ ಮತ್ತು ಗ್ರಾಮ ಸ್ವರಾಜ್ಯ ಘೋಷಣೆಗಳು ಕೇವಲ ಕಾಗದದ ಮೇಲಷ್ಟೇ ಉಳಿದಿವೆ ಎಂಬುದಕ್ಕೆ ತಾಲ್ಲೂಕಿನ ಕಾಡಂಚಿನ ಚತ್ತಗುಟ್ಲಹಳ್ಳಿ ಗ್ರಾಮ ಸಾಕ್ಷಿಯಾಗಿದೆ.

ಜೂನ್ 1ರಿಂದ ರಾಜ್ಯದಾದ್ಯಂತ ಶಾಲಾ ಗಂಟೆ ಮೊಳಗಿದ್ದು, ಮಕ್ಕಳು ಸಡಗರದಿಂದ ಶಾಲೆಗಳತ್ತ ಹೆಜ್ಜೆ ಹಾಕುತ್ತಿದ್ದಾರೆ. ಆದರೆ, ಬಲಮಂದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚತ್ತಗುಟ್ಲಹಳ್ಳಿ ಮಕ್ಕಳಿಗೆ ಮಾತ್ರ ಶಿಕ್ಷಣದ ಹಾದಿ ಕೆಸರಿನ ಮಲ್ಲಯುದ್ಧವಾಗಿ ಮಾರ್ಪಟ್ಟಿದೆ. ಸೂಕ್ತ ರಸ್ತೆ ಸಂಪರ್ಕವಿಲ್ಲದೆ ಮಳೆ ನೀರು ಹರಿಯಲು ಕನಿಷ್ಠ ಚರಂಡಿ ವ್ಯವಸ್ಥೆಯೂ ಇಲ್ಲದೆ ಇಡೀ ಮಾರ್ಗ ಅಕ್ಷರಶಃ ಕೆಸರು ಗದ್ದೆಯಾಗಿದೆ. ಚತ್ತಗುಟ್ಲಹಳ್ಳಿ ಗ್ರಾಮದಿಂದ ಪಕ್ಕದ ಕನಮನಹಳ್ಳಿ ಗ್ರಾಮದಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಗೆ ಸಂಪರ್ಕ ಕಲ್ಪಿಸುವ 3 ಕಿ.ಮೀ.ರಸ್ತೆ ಸಂಪೂರ್ಣವಾಗಿ ಹಳ್ಳ ಹಿಡಿದಿದೆ. ಕಳೆದ ನಾಲ್ಕು ದಿನಗಳಿಂದ ಸುರಿಯುತ್ತಿರುವ ಮುಂಗಾರು ಮಳೆಗೆ ಈ ಕಚ್ಚಾ ರಸ್ತೆ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದೆ.

ರಸ್ತೆ ಇಕ್ಕೆಲಗಳಲ್ಲಿ ವೈಜ್ಞಾನಿಕವಾಗಿ ಮಳೆ ನೀರು ಹರಿದು ಹೋಗಲು ಚರಂಡಿ ವ್ಯವಸ್ಥೆ ಇಲ್ಲ. ಇದರಿಂದಾಗಿ ಅರಣ್ಯ ಹಾಗೂ ಗುಡ್ಡದ ಮೇಲಿಂದ ಹರಿದು ಬರುವ ನೀರೆಲ್ಲವೂ ರಸ್ತೆಯ ಮೇಲೆಯೇ ಹರಿಯುತ್ತಿದ್ದು, ಮಣ್ಣಿನ ರಸ್ತೆಯಲ್ಲಿ ನೀರು ನಿಂತು ಇಡೀ ಮಾರ್ಗ ಚೌಗು ಪ್ರದೇಶವಾಗಿದೆ. ಮೊಣಕಾಲಿನವರೆಗೆ ಸಿಗುವ ಕೆಸರಿನಲ್ಲೇ ಪುಟ್ಟ ಮಕ್ಕಳು ಪುಸ್ತಕದ ಚೀಲ ಹೊತ್ತು ನಡೆದುಕೊಂಡು ಹೋಗಬೇಕಾದ ಅನಿವಾರ್ಯತೆ ಎದುರಾಗಿದೆ. ಈ ಬಗ್ಗೆ ಮೂರು ವರ್ಷಗಳಿಂದ ಬಲಮಂದೆ ಗ್ರಾಮ ಪಂಚಾಯಿತಿಗೆ ಮನವಿ ನೀಡಿದರೂ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ.

ಈ ರಸ್ತೆಯಲ್ಲಿ ಬೈಕ್ ಮತ್ತು ಆಟೋ ಚಾಲಕರು ಸಂಚರಿಸಲು ಪರದಾಡುವಂತಾಗಿ. ಕೆಸರಿನಲ್ಲಿ ಗಾಲಿಗಳು ಸಿಲುಕಿ ವಾಹನಗಳು ಸ್ಕಿಡ್ ಆಗುತ್ತಿದ್ದು, ನಿತ್ಯವೂ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿವೆ. ಗ್ರಾಮದಲ್ಲಿ ಯಾರಿಗಾದರೂ ಗಂಭೀರ ಆರೋಗ್ಯ ಸಮಸ್ಯೆಯಾದರೆ ಅಥವಾ ಗರ್ಭಿಣಿಯರಿಗೆ



ಹೆರಿಗೆ ನೋವು ಕಾಣಿಸಿಕೊಂಡರೆ ಆಂಬುಲೆನ್ಸ್ ಬರಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ರೋಗಿಗಳನ್ನು ಮೂರು ಕಿ.ಮೀ.ಹೊತ್ತುಕೊಂಡೇ ಮುಖ್ಯ ರಸ್ತೆಗೆ ತರಬೇಕಾದ ದುಸ್ಥಿತಿ ಇಲ್ಲಿದೆ. ಮಳೆಗಾಲ ಆರಂಬವಾಗುತ್ತಿರುವುದಿರಂದ ರಸ್ತೆ ಮೇಲಿರುವ ನೀರು ಹೊರ ಹೋಗಲು ತಾತ್ಕಾಲಿಕ ಕಂದಕ ತೆಗೆಯಬೇಕು. ಕೆಸರಾಗಿರುವ ಜಾಗಕ್ಕೆ ಕಲ್ಲು ಮತ್ತು ಜಲ್ಲಿ ಹಾಕಿ ಸದ್ಯಕ್ಕೆ ಸಂಚಾರ ಯೋಗ್ಯ ರಸ್ತೆ ಮಾಡಬೇಕು. ಈ 3 ಕಿ.ಮೀ ಮಾರ್ಗಕ್ಕೆ ಗ್ರಾಮೀಣಾಭಿವೃದ್ಧಿ ಯೋಜನೆಗಳಡಿ ಶಾಶ್ವತ ಚರಂಡಿ ಸಹಿತ ಡಾಂಬರು ಅಥವಾ ಕಾಂಕ್ರೀಟ್ ರಸ್ತೆ ನಿರ್ಮಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

**ಶೀಘ್ರ ಸಮಸ್ಯೆ ಬಗೆಹರಿಸಲು ಕ್ರಮ**

ಚತ್ತಗುಟ್ಲಹಳ್ಳಿ ಗ್ರಾಮದಿಂದ ಕನಮನಹಳ್ಳಿ ಶಾಲೆಗೆ ಹೋಗುವ ರಸ್ತೆ ಸಮಸ್ಯೆ ನಮ್ಮ ಗಮನಕ್ಕೆ ಬಂದಿದೆ. ಕಳೆದ ನಾಲ್ಕು ದಿನಗಳಿಂದ ಅನಿರೀಕ್ಷಿತವಾಗಿ ಮಳೆ ಸುರಿದಿದ್ದರಿಂದ ಮತ್ತು ರಸ್ತೆಯ ಪಕ್ಕದಲ್ಲಿ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಮಳೆ ನೀರು ರಸ್ತೆ ಮೇಲೆಯೇ ನಿಂತು ಕೆಸರಾಗಿದೆ. ಇದರಿಂದ ಶಾಲಾ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗಿದ್ದು, ಶೀಘ್ರ ಸಮಸ್ಯೆ ಬಗೆಹರಿಸುತ್ತೇವೆ.

> ಈ ರಸ್ತೆಯಲ್ಲಿ ಬೈಕ್ ಚಲಾಯಿಸುವುದೂ ಸಾಹಸದ ಕೆಲಸವಾಗಿದೆ. ದಿನಕ್ಕೆ ಕನಿಷ್ಠ ಇಬ್ಬರಾದರೂ ಬಿದ್ದು ಕೈ-ಕಾಲು ಮುರಿದುಕೊಳ್ಳುತ್ತಿದ್ದಾರೆ. ಇನ್ನು ಗ್ರಾಮದಲ್ಲಿ ಯಾರಿಗಾದರೂ ಕಾಯಿಲೆ ಅಥವಾ ಹೆರಿಗೆ ಆಸ್ಪತ್ರೆಗೆ ಹೋಗಬೇಕಾದರೆ ಅಂಬುಲೆನ್ಸ್ ಬರಲು ಸಾಧ್ಯವೇ ಇಲ್ಲ. ರೋಗಿಗಳನ್ನು ಮಂಚದ ಮೇಲೆ ಹೊತ್ತುಕೊಂಡು ಹೋಗಬೇಕಾದ ಕಾಲದಲ್ಲೇ ನಾವಿನ್ನೂ ಬದುಕುತ್ತಿದ್ದೇವೆ.
>
> -ಆನಂದ್ ರಾವ್, ಸ್ಥಳೀಯ ಯುವಕ


> ಗ್ರಾಮ ಪಂಚಾಯಿತಿ ಪಿಡಿಒ ಅವರಿಗೆ ಮನವಿ ಕೊಟ್ಟು ಕೊಟ್ಟು ಸಾಕಾಗಿದೆ. ಮಳೆಗಾಲ ಬರುವ ಮುನ್ನವೇ ಚರಂಡಿ ಸರಿಪಡಿಸಿ ಎಂದು ಕೇಳಿಕೊಂಡಿದ್ದೆವು. ಪ್ರತಿ ಬಾರಿಯೂ 'ಮುಂದಿನ ವಾರ ಮಾಡಿಕೊಡುತ್ತೇವೆ' ಎನ್ನುವ ಭರವಸೆ ಬಿಟ್ಟರೆ ಬೇರೇನೂ ಸಿಕ್ಕಿಲ್ಲ. ಗ್ರಾಮ ಪಂಚಾಯಿತಿಗೆ ನಾವು ಕಟ್ಟುವ ತೆರಿಗೆ ಹಣ ಎಲ್ಲಿಗೆ ಹೋಗುತ್ತಿದೆ ಕನಿಷ್ಠ ನಡೆದಾಡುವ ಹಕ್ಕನ್ನೂ ನಮಗೆ ನಿರಾಕರಿಸಲಾಗುತ್ತಿದೆ.
>
> -ನಾಗೇಶ್ ರಾವ್, ಗ್ರಾಮಸ್ಥ

**ಕನಿಷ್ಠ ರಸ್ತೆಯೂ ಇಲ್ಲ**

ನಾವು ಪ್ರತಿ ವರ್ಷ ನಿಯಮಿತವಾಗಿ ಕಂದಾಯ ಕಟ್ಟುತ್ತಿದ್ದೇವೆ. ಆದರೆ, ನಮಗೆ ಕನಿಷ್ಠ ರಸ್ತೆಯನ್ನೂ ನೀಡುತ್ತಿಲ್ಲ. ನಮ್ಮ ಮಕ್ಕಳು ಅಕ್ಷರ ಕಲಿಯಬೇಕೋ ಅಥವಾ ಜೀವ ಕೈಯಲ್ಲಿ ಹಿಡಿದು ಕೆಸರಿನಲ್ಲಿ ಈಜಬೇಕೋ ಅಧಿಕಾರಿಗಳು ಕೇವಲ ಹವಾನಿಯಂತ್ರಿತ ಕೊಠಡಿಗಳಲ್ಲಿ ಕೂತು ಕಾಲಹರಣ ಮಾಡುತ್ತಿದ್ದಾರೆ.

# ಖಾಸಗಿ ಶಾಲಾ ವಾಹನಗಳ ದಾಖಲೆಗಳ ಪರಿಶೀಲನೆಯಾಗಲಿ : ಮುನೀರ್ ಪಾಷಾ ಆಗ್ರಹ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಎಲ್ಲಾ ಖಾಸಗಿ ಶಾಲೆಗಳ ವಾಹನಗಳ ಗುಣಮಟ್ಟ ಮತ್ತು ದಾಖಲೆಗಳನ್ನ ಪರಿಶೀಲನೆಗೆ ಸಾರಿಗೆ ಇಲಾಖೆ ಮುಂದಾಗಲಿ ಹಾಗೆಯೇ ಮಕ್ಕಳ ಸುರಕ್ಷತಾ ಹಿತದೃಷ್ಟಿಯಿಂದ ಶಿಕ್ಷಣ ಇಲಾಖೆಯು ಮುತುವರ್ಜಿವಹಿಸಬೇಕು ಎಂದು ಗಡಿನಾಡ ರಕ್ಷಣಾ ಸೇನೆ ರಾಜ್ಯಾಧ್ಯಕ್ಷ ಮುನೀರ್ ಪಾಷಾ ಆಗ್ರಹಿಸಿದ್ದಾರೆ.

ಖಾಸಗಿ ಒಡೆತನದಲ್ಲಿ ನಡೆಸಲಾಗುತ್ತಿರುವ ಬಹುತೇಕ ಶಾಲೆಗಳಲ್ಲಿ ಮಕ್ಕಳ ಕರೆದೊಯ್ಯಲು ಯೋಗ್ಯವಲ್ಲದ ಮಿನಿ ವಾಹನಗಳನ್ನ ರಸ್ತೆಗಿಳಿಸಲಾಗುತ್ತಿದೆ ಎಂಬ ಆರೋಪಕ್ಕೆ ಸಂಬಂದಪಟ್ಟ ಇಲಾಖೆ ಸ್ಪಂದಿಸಬೇಕಿದೆ, ಸಾರಿಗೆ ಇಲಾಖೆ ನಿಯಮಗಳ ಕಡ್ಡಾಯ ಪಾಲನೆಗೆ ಸೂಚನೆ ನೀಡುವ ಜೊತೆಗೆ ಮಕ್ಕಳನ್ನ ಕರೆದೊಯ್ಯಲು ಅನುಮತಿಸಿರುವ ಆಸನಕ್ಕಿಂತ ಹೆಚ್ಚುವರಿ ಮಕ್ಕಳ ಪ್ರಯಾಣ ಕಂಡುಬಂದಲ್ಲಿ ಮೋಟಾರು ವಾಹನ ಕಾಯ್ದೆಯಡಿ ಕಠಿಣ ಕ್ರಮ ಕೈಗೊಳ್ಳಬೇಕು. ಪ್ರತಿನಿತ್ಯ ಮಕ್ಕಳನ್ನ ಕರೆದೊಯ್ಯುವ ವಾಹನ ಚಾಲಕರ ಮಿನಿ ಹಾಗೂ ಬಾರೀ ವಾಹನಗಳನ್ನ ಚಲಾಯಿಸಲು ನುರಿತ ಚಾಲಕರನ್ನ ನೇಮಿಸಬೇಕು, ಇಲಾಖೆ ನಿಯಮದಂತೆ ಪರ್ಮಿಷನ್ ಇರುವಷ್ಟೇ ಆಸನಗಳಿಗಿಂತ ಹೆಚ್ಚು ಮಕ್ಕಳನ್ನ ಹೊತ್ತೊಯ್ಯುವ ಸಾಹಸಕ್ಕೆ ಮುಂದಾಗಬಾರದು ಎಂದು ಮನವಿ ಮಾಡಿದ್ದಾರೆ. ಕಳೆದ ವರ್ಷ ತಾಲ್ಲೂಕಿನ ಮಾಡ್ರಹಳ್ಳಿ ನೇನೇಕಟ್ಟೆ ರಸ್ತೆ ನಡುವೆ ಶಾಲಾ ಮಕ್ಕಳಿದ್ದ ಬಸ್ಸಿನ ಚಕ್ರಗಳು ಕಳಚಿ ಬಿದ್ದಿದ್ದನ್ನ ಮರೆಯುವಂತಿಲ್ಲ, ಗೋಪಾಲಪುರ ಗ್ರಾಮದಲ್ಲಿಯೂ ಸಹ ಚಾಲಕನ ಅಜಾಗರುಕ ಚಾಲನೆಯಿಂದ ಬಾಲಕ ತೀವ್ರ ಪೆಟ್ಟಿಗೊಳಗಾಗಿದ್ದು ಕಳವಳಕಾರಿಯಾಗಿತ್ತು ಈ ಹಿನ್ನೆಲೆಯಲ್ಲಿ ವಾಹನಗಳ ಗುಣಮಟ್ಟ, ಚಾಲಕರ ತರಬೇತಿ ಪೂರ್ಣ ದಾಖಲೆಗಳನ್ನ ಕೂಲಂಕುಷವಾಗಿ ಪರಿಶೀಲಿಸಿ ಅನುಮತಿಸುವುದು ಒಳಿತು ಎಂದು ಅಧಿಕಾರಿಗಳಿಗೆ ಒತ್ತಾಯಿಸಿದ್ದಾರೆ.

## ಕೆ.ಆರ್.ಬಡಾವಣೆಯ ಶ್ರೀರಾಮ ದೇವಾಲಯದೇಗುಲದ ಜಾಗ ರಕ್ಷಣೆಗೆ ಮನವಿ

• ಉದಯವಾಹಿನಿ, ತುಮಕೂರು

ನಗರದ ಕೆ.ಆರ್.ಬಡಾವಣೆಯ ಶ್ರೀರಾಮ ದೇವಾಲಯಕ್ಕೆ ಸಂಬಂಧಿಸಿದ ಜಾಗದ ಅಧಿಕೃತ ಸರ್ವೆ, ಹದ್ದುಬಸ್ತು ಕಾರ್ಯ ಕೈಗೊಳ್ಳುವಂತೆ ಶಾಸಕ ಜಿ.ಬಿ.ಜ್ಯೋತಿಗಣೇಶ್ ಮನವಿ ಮಾಡಿದರು. ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಎನ್.ತಿಪ್ಪೇಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು.

ದೇಗುಲ ಮುಜರಾಯಿ ಮತ್ತು ಧಾರ್ಮಿಕ ದತ್ತಿ ಇಲಾಖೆಗೆ ವ್ಯಾಪ್ತಿಗೆ ಒಳಪಟ್ಟಿದೆ.

ಇಲ್ಲಿ ಕಳೆದ 59 ವರ್ಷಗಳಿಂದ ಶ್ರೀರಾಮ ನವಮಿ, ಕೃಷ್ಣ ಜನ್ಮಾಷ್ಟಮಿ ಸೇರಿ ನಿರಂತರವಾಗಿ ವಿವಿಧ ಚಟುವಟಿಕೆ ನಡೆಸಲಾಗುತ್ತಿದೆ. ದೇವಸ್ಥಾನಕ್ಕೆ ಹೊಂದಿಕೊಂಡಂತ ಇರುವ ಜಾಗದಲ್ಲಿನ ಶಾಲೆಯ ಚಟುವಟಿಕೆಗಳು ಸ್ಥಗಿತಗೊಂಡಿವೆ.

# ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತ ಸಂಘದಿಂದ ರಾಷ್ಟ್ರೀಯ ಹೆದ್ದಾರಿ ತಡೆ

• ಉದಯವಾಹಿನಿ, ಚಾಮರಾಜನಗರ


ಉದಯವಾಹಿನಿ ಚಿತ್ರ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಬ್ರಿಗೇಡ್ ವತಿಯಿಂದ ನಗರದ ಹೊರವಲಯದ ದೊಡ್ಡರಾಯಪೇಟೆ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲಾಯಿತು. ಸಾಮೂಹಿಕ ನಾಯಕತ್ವದ ರೈತ ಸಂಘದ ಹೊನ್ನೂರುಪ್ರಕಾಶ್ ನೇತೃತ್ವದಲ್ಲಿ ಸಮಾವೇಶಗೊಂಡು ರೈತರು ಮಧ್ಯಾಹ್ನ ಉರಿ ಬಿಸಿಲನ್ನು ಲೆಕ್ಕಿಸದೇ ಮಧ್ಯಾಹ್ನ 12 ಗಂಟೆಯಲ್ಲಿ ರಸ್ತೆ ತಡೆಗೆ ಮುಂದಾದರು. ಸುಮಾರು ಅರ್ಧ ಗಂಟೆಯೂ ಹೆಚ್ಚು ಕಾಲ ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮಾಡಿದರು. ಸ್ಥಳಕ್ಕಾಗಮಿಸಿದ ಡಿವೈಎಸ್ಪಿ ಸ್ನೇಹಾರಾಜ್ ಅವರು ಪ್ರತಿಭಟನಾಕಾರ ರೈತರ ಮನವೊಲಿಸಿ, ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸುವ ಭರವಸೆಯೊಂದಿಗೆ ರಸ್ತೆ ತೆರವು ಮಾಡಿಸಿದರು. ರಸ್ತೆ ಬದಿಯಲ್ಲಿ ಕುಳಿತು ಪ್ರತಿಭಟನೆ ಆರಂಭಿಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹೊನ್ನೂರು ಪ್ರಕಾಶ್ ಚಾಮುಲ್‌ನಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಜವಾಬ್ದಾರಿಯುತ ವಿರುದ್ಧ ಕ್ರಮ ಕೈಗೊಂಡು ಸಂಬಂಧಪಟ್ಟ ನಿರ್ದೇಶಕರ ಶಾವುಲ್ ಅಹಮದ್ ಹಾಗೂ ವ್ಯವಸ್ಥಾಪಕ ನಿರ್ದೇಶಕರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಕರ್ನಾಟಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ಜಿಲ್ಲೆಯ ಬ್ಯಾಂಕ್‌ಗಳಲ್ಲಿ ರೈತರಿಗೆ ಸಮರ್ಪಕ ಸಾಲ ಸೌಲಭ್ಯ ದೊರೆಯುತ್ತಿಲ್ಲ. ಸರ್ಕಾರದಿಂದ ರೈತರಿಗೆ ದೊರೆಯುವ ಸವಲತ್ತುಗಳನ್ನು ಸಾಲ ಖಾತೆಗಳಿಗೆ ಜಮಾ ಮಾಡುವ ಕ್ರಮವನ್ನು ನಿಲ್ಲಿಸಬೇಕು.

ರೈತರಿಗೆ ಸಾಲ ವಿತರಣೆಯಲ್ಲಿ ಸರಳೀಕೃತ ಕ್ರಮಗಳನ್ನು ಅನುಸರಿಸಬೇಕು. ಜಿಲ್ಲೆಯ ಎಲ್ಲಾ ಕೆರೆ-ಕಟ್ಟೆಗಳನ್ನು ತುಂಬಿಸಿ ನೀರಿನ ಸಮಸ್ಯೆ ಉತ್ಪಾದಕರ ಸಹಕಾರ ಸಂಘದಲ್ಲಿ ನಿವಾರಿಸಬೇಕು ಎಂದರು.

> ಪ್ರತಿಭಟನಾ ಸ್ಥಳಕ್ಕೆ ಚಾಮುಲ್ ಎಂಡಿ ರಾಜಕುಮಾರ್, ಸಹಕಾರ ಸಂಘಗಳ ಸಹ ನಿಬಂಧಕರಾದ ಜ್ಯೋತಿ ಅರಸು, ಲೀಡ್ ಬ್ಯಾಂಕ್ ಮ್ಯಾನೇಜರ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ಮ್ಯಾನೇಜರ್ ಆಗಮಿಸಿ, ರೈತರ ಅಹವಾಲು ಸ್ವೀಕರಿಸಿ, ಸಮಸ್ಯೆ ಬಗೆಹರಿಸುವ ಭರಸವೆ ನೀಡಿದರು.

# ಜೂ.13 ಮತ್ತು 14 ರಂದು ಮುನ್ನಡೆ ಮಂಡ್ಯ ವಿಷನ್ -2035 ಕಾರ್ಯಾಗಾರ

• ಉದಯವಾಹಿನಿ , ಮಂಡ್ಯ



ಉದಯವಾಹಿನಿ ಚಿತ್ರ

ಜಿಲ್ಲೆಯ ಎಲ್ಲಾ ಇಲಾಖೆಗಳ ಸಹಕಾರದೊಂದಿಗೆ ಮಂಡ್ಯ ಜಿಲ್ಲೆಯ ಬೆಳವಣಿಗೆಗೆ ಹಾಗೂ ಅಭಿವೃದ್ದಿಯತ್ತ ಸಾಗಲು ಜೂನ್ 13 ಮತ್ತು 14 ರಂದು ಮುನ್ನಡೆ ಮಂಡ್ಯ ವಿಷನ್ -2035ರ 2 ದಿನಗಳ ಕೃಷಿ ಉದ್ಯಮ ಅಧಿವೇಶನ ಕಾರ್ಯಾಗಾರ ಕಾರ್ಯ ಕ್ರಮವನ್ನು ಆಯೋಜಿಸಿದ್ದು, ಉದ್ಯಮಿಗಳು ಕಾರ್ಯಕ್ರಮವನ್ನು ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಕುಮಾರ ರವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಮುನ್ನಡೆ ಮಂಡ್ಯ ವಿಷನ್ -2035 ಕಾರ್ಯಾಗಾರ ಕಾರ್ಯಕ್ರಮ ಕುರಿತು ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಂಡ್ಯ ಒಂದು ಕೃಷಿ ಪ್ರಧಾನ ಜಿಲ್ಲೆಯಾಗಿದ್ದು ಜಿಲ್ಲೆಯಲ್ಲಿ ಹೈನುಗಾರಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಉದ್ಯಮವನ್ನು ಮಾಡುತ್ತಿರುವ ಉದ್ಯಮಿದಾರರು ಕಾರ್ಯ ಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಸದುಪಯೋಗ ಪಡೆದುಕೊಳ್ಳುವಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಉದ್ಯಮಿಗಳು ಉತ್ಪಾದನೆಯಲ್ಲಿ ಉತ್ತಮ ಬ್ರಾಂಡಿಂಗ್ ಮತ್ತು ಉತ್ಪಾದನೆಯ ಗುಣಮಟ್ಟ ತುಂಬಾ ಅಗತ್ಯವಾಗಿದ್ದು ಆದುದರಿಂದ ಕಾರ್ಯಾಗಾರ ಕಾರ್ಯಕ್ರಮದಲ್ಲಿ ಮಾಹಿತಿಯನ್ನು ಉದ್ಯಮಿದಾರಿಗೆ ನೀಡಿ ರೈತರಲ್ಲಿ ಉದ್ಯಮಶೀಲತೆ ಮನೋಭಾವನೆ ಬೆಳೆಸುವುದು ಮತ್ತು ಅವರನ್ನು ಸ್ವಾವಲಂಬಿ ಕೃಷಿ ಉದ್ಯಮಿಗಳಾಗಿ ರೂಪಿಸುವ ನಿಟ್ಟಿನಲ್ಲಿ ಕಾರ್ಯ ಕ್ರಮವನ್ನು ಆಯೋಜಿಸಿದ್ದು ಕಾರ್ಯಕ್ರಮವನ್ನು ಉದ್ಯಮಿಗಳು ಸದುಪಯೋಗ ಪಡೆದು ಕೊಳ್ಳಬೇಕು ಹಾಗೂ ಜಿಲ್ಲಾ ಎಲ್ಲಾ ಇಲಾಖೆವಾರು ಕಾರ್ಯಾಗಾರದ ಮಾಹಿತಿಯನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

**2 ದಿನಗಳ ಕೃಷಿ ಉದ್ಯಮ ಅಧಿವೇಶನ**

> ಜಿಲ್ಲೆಯಲ್ಲಿ ರೈತರು ಸಂಸ್ಕರಣೆ, ಮೌಲ್ಯವರ್ಧನೆ, ಮಾರ್ಕೆ ಟಿಂಗ್ ಹಾಗೂ ಆರ್ಥಿಕ ನಿರ್ವಹಣೆ ಸೇರಿದಂತೆ ವಿವಿಧ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ ಗಳ ಮೂಲಕ ರೈತರು ಕೇವಲ ಉತ್ಪಾದಕರಾಗಿಯೇ ಉಳಿ ಯದೆ ಕೃಷಿ ಉದ್ಯಮಿಗಳಾಗಿ ಬೆಳೆಯಬೇಕು ಎಂಬ ದೃಷ್ಟಿಯಿಂದ ಕಾರ್ಯಾಗಾರವನ್ನು ಆಯೋಜಿಸಿದ್ದು ಉದ್ಯಮಿಗಳು ಕಾರ್ಯಾಗಾರ ಕಾರ್ಯಕ್ರಮವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.
>
> ಜಿಲ್ಲಾಧಿಕಾರಿ ಡಾ.ಕುಮಾರ

# ಸರ್ಕಾರಿ ಶಾಲೆಯಲ್ಲೇ ಓದಿದವರು ಉನ್ನತ ಸ್ಥಾನಕ್ಕೆ: ಜಿ.ಟಿ. ದೇವೇಗೌಡ


• ಉದಯವಾಹಿನಿ, ಚನ್ನಪಟ್ಟಣ

ನಗರದ ಕುಡಿನೀರುಕಟ್ಟೆ ಸಮೀಪ ಬೆಂಗಳೂರು- ಮೈಸೂರು ಹೆದ್ದಾರಿಯ ಇಕ್ಕೆಲಗಳಲ್ಲಿ ಕೊಳೆತ ಮಾವಿನ ಹಣ್ಣು ಸುರಿಯಲಾಗಿದ್ದು, ಇಡೀ ವಾತಾವರಣ ಗಬ್ಬು ನಾರುತ್ತಿದೆ. ಜತೆಗೆ ಸಾಂಕ್ರಾಮಿಕ ರೋಗದ ಭೀತಿ ಎದುರಾಗಿದೆ.

ಹೆದ್ದಾರಿ ಅಕ್ಕಪಕ್ಕದಲ್ಲಿ ಸುಮಾರು ನೂರು ಮೀಟರ್ ದೂರದಷ್ಟು ಕೊಳೆತ ಮಾವಿನ ಹಣ್ಣುಗಳ ರಾಶಿ ಹಾಕಲಾಗಿದೆ. ಕೊಳೆತ ಮಾವಿನ ಹಣ್ಣುಗಳಿಂದ ಹುಳುಗಳು ಹೊರಬರುತ್ತಿವೆ. ಇದರಿಂದ ಇಲ್ಲಿನ ಪರಿಸರ ಹಾಳಾಗಿ ಸೊಳ್ಳೆಯ, ನೊಣಗಳು ಹೆಚ್ಚುತ್ತಿವೆ. ಸ್ಥಳೀಯ ನಿವಾಸಿಗಳು ಸಾಂಕ್ರಾಮಿಕ ರೋಗದ ಭೀತಿ ಎದುರಿಸುವಂತಾಗಿದೆ.

ಹೆದ್ದಾರಿಯ ಪಕ್ಕದಲ್ಲೇ ಇರುವ ಎಪಿಎಂಸಿ ಮಾರುಕಟ್ಟೆಯ ಮಾವಿನ ಮಂಡಿಗೆ ಹಣ್ಣು ಮಾರಾಟ ಮಾಡಲು ಬರುವ ರೈತರು ಬಿಕರಿಯಾಗದೆ ಉಳಿದರೆ ಹೆದ್ದಾರಿಯ ಇಕ್ಕೆಲಗಳಲ್ಲಿ ಸುರಿದು ಹೋಗುತ್ತಾರೆ. ಇದು ದೊಡ್ಡ ರಾಶಿಯನ್ನೇ ನಿರ್ಮಿಸಿದೆ. ಇವು ಕೊಳೆತು ಗಬ್ಬು ನಾರುತ್ತಿವೆ. ಇದಕ್ಕೂ ಎಪಿಎಂಸಿ ಮಂಡಿಗಳಿಗೂ ಸಂಬಂಧವಿಲ್ಲ. ಕೊಳೆತ ಮಾವಿನ ಹಣ್ಣುಗಳನ್ನು ಸುರಿಯದಂತೆ ತಡೆಯುವುದು ನಗರಸಭೆ ಕೆಲಸ ಎಂದು ಇಲ್ಲಿನ ಮಾವಿನ ಮಂಡಿಗಳ ಮಾಲೀಕರು ಹೇಳುತ್ತಾರೆ.

ಮಾವಿನ ಹಣ್ಣು ಖರೀದಿಸುವ ಮಂಡಿಗಳ ಮಾಲೀಕರು ಬೇರೆಡೆಗೆ ಕಳುಹಿಸಲು ಗುಣಮಟ್ಟದ ಹಣ್ಣುಗಳನ್ನು ಆಯ್ಕೆ ಮಾಡಿಕೊಂಡು ಪ್ಯಾಕಿಂಗ್ ಮಾಡುತ್ತಾರೆ. ಆಗ ಉಳಿಯುವ, ಹಾಳಾಗಿರುವ ಹಣ್ಣುಗಳನ್ನು ಹೆದ್ದಾರಿಯ ಪಕ್ಕದಲ್ಲಿ ಸುರಿಯುತ್ತಿದ್ದಾರೆ ಎಂದು ಸಾರ್ವಜನಿಕರು ಆರೋಪಿಸುತ್ತಾರೆ. ರೈತರು, ಮಂಡಿಗಳ ಮಾಲೀಕರು ಹೆದ್ದಾರಿ


ಉದಯವಾಹಿನಿ ಚಿತ್ರ

ಎರಡು ಬದಿಯಲ್ಲಿ ಕೊಳೆತ ಮಾವಿನ ಹಣ್ಣು ಸುರಿಯುತ್ತಿರುವ ಕಾರಣ ಸಾಂಕ್ರಾಮಿಕ ರೋಗ ಕಾಣಿಸಿಕೊಳ್ಳುವ ಆತಂಕ ಕಾಡುತ್ತಿದೆ. ಕೊಳೆತ ಮಾವಿನ ಹಣ್ಣುಗಳನ್ನು ಗುಂಡಿ ತೆಗೆದು ಮುಚ್ಚಬೇಕು. ಆದರೆ ರಸ್ತೆಯ ಬದಿಯಲ್ಲಿ ಸುರಿಯುತ್ತಿರುವುದರಿಂದ ಸೊಳ್ಳೆ, ನೊಣಗಳು ಹೆಚ್ಚಾಗುತ್ತಿವೆ. ಜತೆಗೆ ರಾತ್ರಿ ವೇಳೆ ಸೊಳ್ಳೆಗಳ ಕಾಟ ವಿಪರೀತಆಗುತ್ತಿದೆ ಎಂದು ಸ್ಥಳೀಯರಾದ ಮನೋಹರ್, ಸಿದ್ದಪ್ಪ ಹೇಳುತ್ತಾರೆ.

**ಸ್ಥಳೀಯ ನಿವಾಸಿಗಳ ಆಗ್ರಹ**

**ಇನ್ನೂ ಕ್ರಮ ಕೈಗೊಂಡಿಲ್ಲ**

ಕಳೆದ ಎರಡು ತಿಂಗಳಿಂದಲೂ ಹೆದ್ದಾರಿ ಬದಿ ಇಂತಹ ವಾತಾವರಣ ಸೃಷ್ಟಿ ಆಗಿದ್ದರೂ ನಗರಸಭೆ, ಎಪಿಎಂಸಿ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ನಿರಂತರವಾಗಿ ಕೊಳೆತ ಮಾವಿನ ಹಣ್ಣು ಹಾಕುತ್ತಿದ್ದರೂ ಗಮನ ಹರಿಸುತ್ತಿಲ್ಲ ಎಂದು ವಾಸಿಂ ಖಾನ್, ಮಹಮದ್ ನೂರ್ ದೂರುತ್ತಾರೆ. ಎಪಿಎಂಸಿ ಕಚೇರಿ, ಮಾರುಕಟ್ಟೆ ಆವರಣದಲ್ಲಿ ಸುರಿಯುವ ಮಾವಿನ ಹಣ್ಣುಗಳಿಗೆ ನಾವು ಜವಾಬ್ದಾರರು. ಅದನ್ನು ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳುತ್ತೇವೆ. ಆದರೆ ಹೆದ್ದಾರಿಯ ಪಕ್ಕದಲ್ಲಿ ಸ್ವಚ್ಛತೆ ಮಾಡುವುದು ನಗರಸಭೆಗೆ ಸಂಬಂಧಪಟ್ಟದ್ದು. ಕೊಳೆತ ಮಾವು ತೆರವು ಮಾಡಿ ಸ್ವಚ್ಛತೆಗೆ ಆದ್ಯತೆ ಕಾಪಾಡುವಂತೆ ನಗರಸಭೆಗೆ ಪತ್ರ ಬರೆಯಲಾಗಿದೆ. ಆದರೆ ಇನ್ನೂ ಕ್ರಮ ಕೈಗೊಂಡಿಲ್ಲ ಎಂದು ಎಪಿಎಂಸಿ ಅಧಿಕಾರಿಗಳು ತಿಳಿಸಿದರು.ಬೆಂಗಳೂರು- ಮೈಸೂರು ಹೆದ್ದಾರಿಯಲ್ಲಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತವೆ.

ಕೊಳೆತ ಮಾವಿನ ಹಣ್ಣು ರಾಶಿಯಿಂದ ನಗರದ ಸ್ವಚ್ಛತೆ ಹಾಳಾಗುತ್ತಿದೆ. ಇದನ್ನು ತೆರವುಗೊಳಿಸಿ ಪರಿಸರ ಕಾಪಾಡಬೇಕು. ಸೊಳ್ಳೆ, ನೊಣಗಳ ಕಾಟದಿಂದ ನಮಗೆ ಮುಕ್ತಿ ನೀಡಬೇಕು. ಮುಂದೆ ಮಾವಿನ ಹಣ್ಣು ಸುರಿಯದಂತೆ ಕ್ರಮ ವಹಿಸಬೇಕು ಎಂಬುದು ಸ್ಥಳೀಯ ನಿವಾಸಿಗಳ ಆಗ್ರಹವಾಗಿದೆ.

## ಮಿನಿ ನ್ಯೂಸ್

### ಡಿಕೆಶಿ ಆಡಳಿತಕ್ಕೆ ಶಕ್ತಿ ತುಂಬಲು ಕಾಂಗ್ರೆಸ್ ಕಚೇರಿಯಲ್ಲಿ ವಿಶೇಷ ಪೂಜೆ ಹೋಮ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಯಶಸ್ವಿಯಾಗಿ ಆಡಳಿತ ನಡೆಸಲಿ ಎಂದು ಪ್ರಾರ್ಥನೆ ಸಲ್ಲಿಸಿ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರುಗಳು ಪ್ರಾಧಿಕಾರದ ಅಧ್ಯಕ್ಷ ಚೇತನ್ ಕುಮಾರ್ ನೇತೃತ್ವದಲ್ಲಿ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ವಿಶೇಷ ಹೋಮ ಮತ್ತು ಪೂಜಾ ಕಾರ್ಯಕ್ರಮಗಳನ್ನು ನಡೆಸಿದರು.

ಪೂಜಾ ಕಾರ್ಯಕ್ರಮದ ನಂತರ ಪ್ರಾಧಿಕಾರದ ಅಧ್ಯಕ್ಷ ಚೇತನ್ ಕುಮಾರ್ ಮಾಧ್ಯಮಗಳೊಂದಿಗೆ ಮಾತನಾಡಿ, ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿ ಆಗುತ್ತಿರುವುದು ರಾಮನಗರ ಜಿಲ್ಲೆಗೆ ದೊಡ್ಡ ಗೌರವ. ಹೀಗಾಗಿ ಅವರ ಆಡಳಿತದ ಅವಧಿಯಲ್ಲಿ ಯಾವುದೇ ವಿಘ್ನಗಳು ಬಾರದಿರಲಿ ಎಂದು ವಿಶೇಷ ಹೋಮ ಮತ್ತು ಪೂಜಾ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ರಾಜು ಮಾತನಾಡಿ, ಕಾಂಗ್ರೆಸ್ ಪಕ್ಷದಲ್ಲಿ ಒಬ್ಬ ಸಾಮಾನ್ಯ ಕಾರ್ಯಕರ್ತರಿಂದ ಹಿಡಿದು ಇಲ್ಲಿಯವರೆಗೆ ಅವಿರತವಾಗಿ ದುಡಿದು ಪಕ್ಷವನ್ನು ಕಟ್ಟಿರುವ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುತ್ತಿರುವುದು ಕಾಂಗ್ರೆಸ್ ಪಕ್ಷದ ಗೌರವವನ್ನು ಮತ್ತಷ್ಟು ಹೆಚ್ಚಿಸಿದೆ.

ಮುಂದಿನ ದಿನಗಳಲ್ಲಿ ರಾಜ್ಯದ ಜನರಿಗೆ ಉತ್ತಮ ಆಡಳಿತ ನೀಡುವ ಮೂಲಕ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತರಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಎಚ್.ರಾಜು, ಮುಖಂಡರಾದ ಮೊಜಾಯಿಕ್ ಶಿವಣ್ಣ, ರಾಜಶೇಖರ್, ರವಿ, ಮಹೇಶ್ ಮತ್ತಿತರರು ಇದ್ದರು.

### ಅಪಘಾತ ತಡೆಗಟ್ಟಲು ರಸ್ತೆಗಳ ಅಭಿವೃದ್ಧಿಗೆ ಕ್ರಮವಹಿಸಿ

• ಉದಯವಾಹಿನಿ, ಮೈಸೂರು

ರಸ್ತೆ ಸುರಕ್ಷತಾ ಸಮಿತಿ ವತಿಯಿಂದ ಅಪಘಾತಗಳು ಹೆಚ್ಚಾಗಿ ಸಂಭವಿಸುವ 120 ಬ್ಲ್ಯಾಕ್ ಸ್ಪಾಟ್ ಗಳನ್ನು ಪಟ್ಟಿ ಮಾಡಲಾಗಿದೆ. ಸದರಿ ರಸ್ತೆಗಳಲ್ಲಿ ಅಪಘಾತ ತಡೆಗಟ್ಟುವ ರೀತಿಯಲ್ಲಿ ಯೋಜನೆ ರೂಪಿಸಲಾಗಿರುತ್ತದೆ. ಸದರಿ ರಸ್ತೆಗಳ ಅಭಿವೃದ್ಧಿಗೆ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಜಿ ಅವರು ತಿಳಿಸಿದರು. ಅವರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿದರು. ರಸ್ತೆ ಅಪಘಾತಗಳಲ್ಲಿ ಸಾವು ಸಂಭವಿಸುವ ರಸ್ತೆಗಳಿಗೆ ಅಧಿಕಾರಿಗಳು ಭೇಟಿ ನೀಡಿ ನಿಖರ ಕಾರಣಗಳನ್ನು ಪಟ್ಟಿ ಮಾಡಿಕೊಂಡು ಸರಿಪಡಿಸಲು ಕ್ರಮ ಕೈಗೊಳ್ಳಬೇಕು ಎಂದರು.

120 ಬ್ಲ್ಯಾಕ್ ಸ್ಪಾಟ್ ರಸ್ತೆಗಳ ಪ್ರಗತಿಯ ಬಗ್ಗೆ ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು, ಹೆಚ್ಚಿನ ರಸ್ತೆಗಳು ಲೋಕೋಪಯೋಗಿ ಹಾಗೂ ರಾಷ್ಟ್ರೀಯ ಹೆದ್ದಾರಿ ಇಲಾಖೆಗೆ ಸೇರಿದ್ದು, ರಸ್ತೆ ಅಭಿವೃದ್ಧಿಗಾಗಿ ಸರ್ಕಾರಕ್ಕೆ ಅನುದಾನ ಕೋರಿ ಮನವಿ ಸಲ್ಲಿಸಿ ಹಾಗೂ ತಮ್ಮ ಇಲಾಖೆಯಲ್ಲಿ ಲಭ್ಯ ಅನುದಾನದ ನಿಯಮಾನುಸಾರ ಸಧ್ಯವಾದಲ್ಲಿ ಸದರಿ ಕಾಮಗಾರಿಗಳನ್ನು ಸೇರಿಸಿಕೊಳ್ಳಿ ಎಂದರು.ಮೈಸೂರು ನಗರ ಪ್ರಾದೇಶದಲ್ಲೂ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯವರು ಜಂಟಿಯಾಗಿ ಪರಿಶೀಲನೆ ನಡೆಸಿ ಬ್ಲ್ಯಾಕ್ ಸ್ಪಾಟ್ ಗಳನ್ನು ಗುರುತಿಸಿ ರಸ್ತೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

### ಚಾಮರಾಜನಗರದಲ್ಲಿ ವಾರಕ್ಕೊಮ್ಮೆ ಹೃದಯ ತಪಾಸಣೆ ಮಾಡಲು ಚಿಂತನೆ: ಡಾ. ಬಿ. ದಿನೇಶ್


• ಉದಯವಾಹಿನಿ, ಮೈಸೂರು

ಜಯದೇವ ಹೃದ್ರೋಗ ಸಂಸ್ಥೆಯಿಂದ ಚಾಮರಾಜನಗರ ವೈದ್ಯಕೀಯ ಕಾಲೇಜು ಹಾಗೂ ಜಿಲ್ಲಾಡಳಿತದ ಸಹಕಾರದೊಂದಿಗೆ ಚಾಮರಾಜನಗರದಲ್ಲಿ ವಾರಕ್ಕೊಮ್ಮೆ ಸಾರ್ವಜನಿಕರಿಗೆ ಹೃದಯ ತಪಾಸಣೆ ನಡೆಸಲು ಚಿಂತನೆ ನಡೆಸಲಾಗಿದೆ ಎಂದು ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ. ಬಿ. ದಿನೇಶ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಗಡಿನಾಡು ಚಾಮರಾಜನಗರದಲ್ಲಿ ಸಣ್ಣ ಹೃದ್ರೋಗ ಘಟಕವನ್ನು ಪ್ರಾರಂಭ ಮಾಡಿ ಪ್ರತಿ ಸೋಮವಾರ ಅಥವಾ ಬುಧವಾರ ಹೃದಯ ಸಮಸ್ಯೆ ಇರುವವರಿಗೆ ತಪಾಸಣೆ ನಡೆಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕರೆತಂದು ಚಿಕಿತ್ಸೆ ನೀಡಲಾಗುವುದು ಎಂದ ಅವರು ಮಳೆಗಾಲ ಪ್ರಾರಂಭವಾಗುತ್ತಿರುವುದರಿಂದ ಹೃದಯಾಘಾತದ ಬಗ್ಗೆ ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಬೇಕು. ಉತ್ತರ ಭಾರತದಲ್ಲಿ ಬಿಸಿಲಿನ ದಗೆಗೆ ಶರೀರದಲ್ಲಿ ನೀರಿನ ಕೊರತೆ ಉಂಟಾಗಿ ಬೇರೆ ಬೇರೆ ಖಾಯಿಲೆಗಳಿಗೆ ಜನರು ತುತ್ತಾಗುತ್ತಿದ್ದಾರೆ. ಆದ್ದರಿಂದ ಹೃದಯ ರೋಗಿಗಳು ಪ್ರತಿ 3 ತಿಂಗಳಿಗೊಮ್ಮೆ ಹೃದಯ ತಪಾಸಣೆ ಮಾಡಿಸಿಕೊಳ್ಳಬೇಕು.ಯುವಕರಲ್ಲಿ ಹೆಚ್ಚಾಗಿ ಹೃದಯಾಘಾತ ವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ಮಾದಕವಸ್ತುಗಳ ಸೇವನೆಯನ್ನು ತ್ಯಜಿಸಿ ಉತ್ತಮವಾದ ಆರೋಗ್ಯಶೈಲಿಯನ್ನು ಅಳವಡಿಸಿಕೊಳ್ಳಬೇಕು.

### ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಯನ್ನು ಕಡಿತಗೊಳಿಸಿರುವುದನ್ನು ಖಂಡಿಸಿ ಬೃಹತ್ ಪ್ರತಿಭಟನೆ

• ಉದಯವಾಹಿನಿ, ಕೊಳ್ಳೇಗಾಲ


ಉದಯವಾಹಿನಿ ಚಿತ್ರ

ತಾಲ್ಲೂಕು ನಾಯಕರ ಸಂಘ ಮತ್ತು ನಾಯಕ ಜನಾಂಗದ ಗಡಿಮನೆ, ಕಟ್ಟೆ ಮನೆ ಮತ್ತು ಕಸಬಾ ಮನೆಯ ಯಜಮಾನರು ಮತ್ತು ಕುಲಸ್ಥರು ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಯನ್ನು ಕಡಿತಗೊಳಿಸಿರುವುದನ್ನು ಖಂಡಿಸಿ ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ದೊಡ್ಡ ನಾಯಕರ ಬೀದಿಯಿಂದ ಹೊರಟ ಪ್ರತಿಭಟನೆ ಚಿಕ್ಕ ನಾಯಕರ ಬೀದಿ, ಡಾ.ಅಂಬೇಡ್ಕರ್ ರಸ್ತೆ ಮೂಲಕ ತಾಲ್ಲೂಕು ಕಚೇರಿ ತೆರಳಿ ಪ್ರತಿಭಟಿಸಿ, ಶಿರೆಸ್ತದಾರ್ ಕೃಪಕಾರ್ ರವರಿಗೆ ಮನವಿ ಸಲ್ಲಿಸಿದರು. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸುವಂತೆ ಹಲವು ದಶಕಗಳಿಂದ ಹೋರಾಟ ನಡೆಯುತ್ತಿದ್ದು, ವಿವಿಧ ಆಯೋಗಗಳ ಶಿಫಾರಸಿನ ಮೇರೆಗೆ ರಾಜ್ಯ ಸರ್ಕಾರ 2022ರಲ್ಲಿ ಮೀಸಲಾತಿ ಪ್ರಮಾಣವನ್ನು ಎಸ್‌ಸಿಗೆ 15ರಿಂದ 17 ಶೇಕಡಾ ಹಾಗೂ ಎಸ್‌ಟಿಗೆ 3ರಿಂದ 7 ಶೇಕಡಾಗೆ ಹೆಚ್ಚಿಸುವ ಕಾಯ್ದೆ ಜಾರಿಗೊಳಿಸಿತ್ತು. ಆದರೆ ಈ ಕಾಯ್ದೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಜಾರಿಯಾಗಿರುವುದು ಸಾಮಾಜಿಕ ನ್ಯಾಯಕ್ಕೆ ಹಿನ್ನಡೆಯಾಗಿದೆ ಎಂದು ಆರೋಪಿಸಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣಪತ್ರ ಪಡೆದು ಸೌಲಭ್ಯ ಪಡೆಯುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು .ಅಂತಹ ಪ್ರಮಾಣಪತ್ರಗಳನ್ನು ನೀಡುವ ಅಧಿಕಾರಿಗಳ ಮೇಲೂ ಕಾನೂನು ಕ್ರಮ ಜರುಗಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಯಿತು.

ಅಂತರಾಳದಿಂದ..
EDITORIAL

# ಗೋವನ್ನು ರಾಷ್ಟ್ರೀಯ ಪ್ರಾಣಿಯಾಗಿ ಘೋಷಿಸಲು ಇರುವ ಅಡ್ಡಿಯೇನು?



'ಗೋವನ್ನು ರಾಷ್ಟ್ರೀಯ ಪ್ರಾಣಿ' ಎಂದು ಘೋಷಿಸುವಂತೆ ಕೋರಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿರುವ ಬೆನ್ನಿಗೇ, ಕೇಂದ್ರ ಸರಕಾರವೂ ಗೋವನ್ನು ರಾಷ್ಟ್ರೀಯ ಪ್ರಾಣಿಯೆಂದು ಪರಿಗಣಿಸಲು ಹಿಂದೇಟು ಹಾಕಿದೆ. ಹಸುವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವ ಅಥವಾ ದೇಶಾದ್ಯಂತ ಗೋಹತ್ಯೆ ನಿಷೇಧಿಸುವ ಯಾವುದೇ ಪ್ರಸ್ತಾವ ಇಲ್ಲ ಎಂದು ಕೇಂದ್ರ ಸರಕಾರ ಸ್ಪಷ್ಟನೆ ನೀಡಿದೆ. ಸಂದರ್ಶನವೊಂದರಲ್ಲಿ ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಮಾತನಾಡುತ್ತಾ ''ಪ್ರಸ್ತುತ ಇಂತಹ ಯಾವುದೇ ವಿಷಯ ಸಂಪುಟದ ಪರಿಶೀಲನೆಯಲ್ಲಿ ಇಲ್ಲ. ಜಾನುವಾರು ಹತ್ಯೆ ನಿಯಮಗಳ ಜಾರಿ ವಿಷಯದಲ್ಲಿ ವಿವಿಧ ರಾಜ್ಯಗಳು ತಮ್ಮದೇ ಆದ ಪರಿಸ್ಥಿತಿ ಆಧಾರದ ಮೇಲೆ ನಿರ್ಧಾರ ತೆಗೆದುಕೊಳ್ಳುತ್ತವೆ ಎಂದು ಹೆಗಲು ಜಾರಿಸಿಕೊಂಡಿದ್ದಾರೆ. ಗೋಹತ್ಯೆಯ ವಿಷಯದಲ್ಲಿ ಮಾತ್ರ ಪರಿಸ್ಥಿತಿಗೆ ಅನುಗುಣವಾಗಿ ಆಯಾ ರಾಜ್ಯಗಳೇ ನಿರ್ಧಾರ ತೆಗೆದುಕೊಳ್ಳುತ್ತದೆ ಎನ್ನುವ ಕೇಂದ್ರ ಸರಕಾರದ ಹೇಳಿಕೆಯೇ ಸಮಯ ಸಾಧಕತನದ್ದು ಗೋವು ಇಡೀ ದೇಶದ ಪಾಲಿಗೆ ಪವಿತ್ರ ಪ್ರಾಣಿ ಎಂದು ಕೇಂದ್ರ ಸರಕಾರ ಭಾವಿಸುತ್ತದೆಯಾದರೆ, ಗೋವಿನ ವಿಷಯದಲ್ಲಿ ಇಡೀ ದೇಶಕ್ಕೆ ಒಂದೇ ರೀತಿಯ ಕಾನೂನನ್ನು ಜಾರಿಗೊಳಿಸಬೇಕಲ್ಲವೆ ದೇಶಕ್ಕೆ ಒಂದೇ ಕಾನೂನು, ಒಂದೇ ಭಾಷೆ, ಒಂದೇ ಚುನಾವಣೆ ಇರಬೇಕು ಎಂದು ಪ್ರತಿಪಾದಿಸುವ ಬಿಜೆಪಿ ಸರಕಾರ, ಗೋಹತ್ಯೆಗೆ ಸಂಬಂಧ ಪಟ್ಟ ನಿಯಮಗಳನ್ನು ಮಾತ್ರ ಆಯಾ ರಾಜ್ಯಗಳ ಪರಿಸ್ಥಿತಿಗೆ ತಕ್ಕಂತೆ ಅಳವಡಿಸಲು ನಿರ್ಧರಿಸಿರುವುದು ಯಾಕೆ? ಯಾಕೆಂದರೆ, ಹಲವು ರಾಜ್ಯಗಳಲ್ಲಿ ಗೋಹತ್ಯೆಯನ್ನು ಗೋಮಾಂಸ ಸೇವನೆಯನ್ನು ಬಿಜೆಪಿ ಬೆಂಬಲಿಸುತ್ತದೆ. ಕೇರಳ, ಗೋವಾ, ಈಶಾನ್ಯ ಭಾರತದಲ್ಲಿ ಗೋ ಹತ್ಯೆಯ ಕುರಿತಂತೆ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಲು ಬಿಜೆಪಿ ಹಿಂದೇಟು ಹಾಕುತ್ತಿದೆ. ಇತ್ತೀಚೆಗೆ ಈದ್ ಸಂದರ್ಭದಲ್ಲಿ ಪಶ್ಚಿಮಬಂಗಾಳದಲ್ಲಿ ಮುಸ್ಲಿಮ್ ಮುಖಂಡರು ಕುರ್ಬಾನಿಗಾಗಿ ಗೋವುಗಳನ್ನು ಖರೀದಿ ಮಾಡದಂತೆ' ಕರೆ ನೀಡಿದ್ದರು. ಇದು ಪಶ್ಚಿಮಬಂಗಾಳದ ರೈತರ ಮೇಲೆ ಭಾರೀ ಪರಿಣಾಮ ಬೀರಿತು. ಬರೇ ಪಶ್ಚಿಮಬಂಗಾಳ ಮಾತ್ರವಲ್ಲ ಇಡೀ ದೇಶದಲ್ಲಿ ಈ ಬಹಿಷ್ಕಾರ ಸದ್ದು ಮಾಡಿತು. ತಮ್ಮ ಅನುಪಯುಕ್ತ ಗೋವುಗಳನ್ನು ಖರೀದಿಸುವವರಿಲ್ಲದೆ ರೈತರು ಕಂಗಾಲಾದರು. ಅಷ್ಟೇ ಅಲ್ಲದೆ, ಗೋವಿನ ಹೆಸರಿನಲ್ಲಿ ಒಂದು ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು ದಾಳಿಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಗೋಹತ್ಯೆ ವಿರುದ್ಧ ಕಠಿಣ ಕಾನೂನನ್ನು ಜಾರಿಗೆ ತರಲು ಮುಸ್ಲಿಮ್ ಮುಖಂಡರೇ ಒತ್ತಾಯಿಸಿದ್ದಾರೆ.

## ಬಿಜೆಪಿಗೆ ಗೋವು ಪವಿತ್ರ

ಗೋಹತ್ಯೆ ನಿಷೇಧ ಕಾನೂನನ್ನು ಕಠಿಣವಾಗಿ ಜಾರಿಗೊಳಿಸಿದರೆ ಜನಸಾಮಾನ್ಯರಿಂದ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ ಎನ್ನುವ ಭಯ ಅದನ್ನು ಕಾಡುತ್ತಿದೆ. ಆದುದರಿಂದಲೇ ಜನರಿಗೆ ತಕ್ಕಂತೆ, ರಾಜ್ಯಗಳಿಗೆ ತಕ್ಕಂತೆ ಗೋವಿನ ಕುರಿತ ಬಿಜೆಪಿಯ ಪ್ರೀತಿಯು ಬದಲಾಗುತ್ತಿದೆ. ಮುಖ್ಯವಾಗಿ, ಒಂದು ಸಮುದಾಯದ ವಿರುದ್ಧ ದ್ವೇಷ ಸಾಧಿಸುವುದಕ್ಕೆ ಬಿಜೆಪಿಗೆ ಗೋವು ಪವಿತ್ರವಾಗಿದೆಯೇ ಹೊರತು, ಉಳಿದಂತೆ ಗೋವಿನ ಕುರಿತಂತೆ ಇರುವ ಪ್ರೀತಿ ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ. ಒಂದು ವೇಳೆ ಕಡ್ಡಾಯವಾಗಿ ಗೋಹತ್ಯೆಯನ್ನು ನಿಷೇಧ ಮಾಡಿದ್ದಾದರೆ, ಜನರನ್ನು ವಿಭಜಿಸುವುದಕ್ಕಿರುವ ಪ್ರಮುಖ ಅಸ್ತ್ರವೇ ಬಿಜೆಪಿಯ ಪಾಲಿಗೆ ಇಲ್ಲವಾಗುತ್ತದೆ.

ದೇಶಾದ್ಯಂತ ಮುಸ್ಲಿಮ್ ಸಂಘಟನೆಗಳು ಗೋವುಗಳನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಿ ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಎಂದು ಒತ್ತಾಯಿಸಿದ್ದಾರೆ. ಹೀಗೆ ಗೋಮಾಂಸ ಸೇವಿಸುವ ಒಂದು ವರ್ಗವೇ ಗೋವಿಗಾಗಿ ತಮ್ಮ ಆಹಾರವನ್ನು ತ್ಯಜಿಸಲು ಮುಂದಾಗಿದ್ದರೂ ಬಿಜೆಪಿ ಯಾಕೆ ದೇಶದಲ್ಲಿ ಸಂಪೂರ್ಣ ಗೋಹತ್ಯೆ ನಿಷೇಧಕ್ಕೆ ಮುಂದಾಗುತ್ತಿಲ್ಲ? ಎನ್ನುವ ಪ್ರಶ್ನೆ ಇದೀಗ ಮುನ್ನೆಲೆಗೆ ಬಂದಿದೆ.

ಗೋಹತ್ಯೆ ನಿಷೇಧವಾಗಬೇಕು, ಗೋವುಗಳ ಮಾಂಸವನ್ನು ದೇಶದಲ್ಲಿ ಮಾತ್ರವಲ್ಲ ವಿದೇಶದಲ್ಲೂ ಸೇವಿಸುವುದನ್ನು ತಡೆಯಬೇಕು. ಅದಕ್ಕಾಗಿ ಮೊದಲು ಭಾರತದಿಂದ ಗೋಮಾಂಸ ರಫ್ತು ನಿಲ್ಲಬೇಕು. ಇದರ ಮೊದಲ ಹೆಜ್ಜೆಯಾಗಿ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು ಎಂದು ಮುಸ್ಲಿಮ್ ಸಂಘಟನೆಗಳು ಒತ್ತಾಯಿಸುತ್ತಿವೆ. ಆದರೆ ಕೇಂದ್ರ ಸರಕಾರ ಜಾಣಕಿವುಡು ನಟಿಸುತ್ತಿದೆ.

# ರಾಮಾಯಣ



ತನ್ನ ಕುರುಹಾಗಿ ಜನಕಜೆಯು ಹನುಮನಿಗೆ ತನ್ನ ಶಿರೋರತ್ನವನ್ನಿತ್ತು ಅವನನ್ನು ಬೀಳ್ಕೊಟ್ಟದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಅಸಂಖ್ಯಾತ ವನಚರರು ಅವನ ಆಜ್ಞೆಯಲ್ಲಿದ್ದಾರೆ ಅವರೆಲ್ಲ ಗರುಡಮರುತರ ವೇಗವನ್ನು ಮೀರಿದವರು, ಹೇಳಿದಾಕ್ಷಣವೇ ವನಧಿಯನ್ನು ದಾಟಿ ರಕ್ಕಸರಾಜನನ್ನು ತರಿದು ನಿನಗೆ ಹರ್ಷವನ್ನುಂಟುಮಾಡುವುದರಲ್ಲಿ ಸಂದೇಹವೇ ಇಲ್ಲ, ನನ್ನ ಮಾತನ್ನು ನಂಬು. ಲಂಕಾನಗರದ ಪರ್ವತ ನಿಮಿಷದಲ್ಲಿ ಹುಡಿಯಾಗುತ್ತದೆ, ರಕ್ಕಸಸಮೂಹವು ನೀರುಪಾಲಾಗುತ್ತದೆಂಬುದು ಸತ್ಯ, ಅದರಿಂದ ಪರಿತಾಪವನ್ನು ಬಿಟ್ಟು ನೆಮ್ಮದಿಯಿಂದ ಇರಮ್ಮ ತರಣಿವಂಶದ ಅಣ್ಣತಮ್ಮಂದಿರಿಬ್ಬರೂ ಸೂರ್ಯಚಂದ್ರರಂತೆ ನಮ್ಮೊಡನೆ ಬಂದು ದೈತ್ಯರನ್ನು ಕೊಂದು ನಿನ್ನನ್ನು ಕರೆದೊಯ್ಯುತ್ತಾರೆ. ಚಂದ್ರನೊಡನೆ ರೋಹಿಣಿಯು ಸೇರಿದಂತೆ ನೀನು ಬೇಗ ನಸುನಗೆಯೊಡನೆ ರಾಮನ ಪಾದಗಳನ್ನು ಸೇರುತ್ತೀಯೆ. ಸಿಂಹಶಾರ್ದೂಲಬಲರಾದ ವಾನರರು ರಾವಣವಂಶವನ್ನು ಸಮುದ್ರದ ಪಾಲು ಮಾಡುವುದನ್ನು ನೋಡುತ್ತೀಯೆ. ಇಂದ್ರಸಮೇತಳಾದ ಶಚೀದೇವಿಯಂತೆ ನೀನು ಬಹುಬೇಗ ಶ್ರೀರಾಮರೊಡನೆ ಸೇರುತ್ತೀಯೆ. ಹದಿನಾಲ್ಕು ಲೋಕಗಳಲ್ಲಿಯೂ ರಾಮನಿಗೆ ಎಣೆ ಯಾರಿದ್ದಾರೆ? ರಣರಂಗದಲ್ಲಿ ಲಕ್ಷ್ಮಣನಿಗೆದುರಾಗಿ ನಿಲ್ಲುವವರುಂಟೇ? ಬೆಂಕಿಗಾಳಿಗಳಂತಿರುವ ಆ ಇಬ್ಬರು ಬಂದರೆ ಬ್ರಹ್ಮನಾದರೂ ಎದುರಿಸಲಾದೀತೇ? ಅಂಥದ್ದರಲ್ಲಿ ಬುದ್ಧಿಗೇಡಿಯಾದ ರಾವಣನೆಲ್ಲಿ? ನೇಸರಿನ ಜೊತೆಗೆ ಕತ್ತಲೆ ಬರುವುದು ಶಕ್ಯವೇ ರಕ್ಕಸನ ವನದ ಬದಲು ರಾಮನ ತೊಡೆಯಲ್ಲಿರುವೆನೆಂದು ಧೈರ್ಯದಿಂದಿರು, ತಾಯಿ'' ಎಂದು ಪವಮಾನಸುತನು ಬಿನ್ನವಿಸಿದ. ಅವನ ಮಾತುಗಳನ್ನು ಕೇಳಿದ ಜನಕಸುತೆಯು ಹರ್ಷದಿಂದ ಕೂಡಿ, ''ಎಲೆ ಮಗನೆ, ಬಿಸಿಲಿನ ಬೇಗೆಯಿಂದ ಬಾಡಿದ ಗಿಡಮರಗಳಿಗೆ ನೀರು ಹಣಿಸುವ ಹಾಗೆ ನಿನ್ನ ಮಧುರವಾಕ್ಕುಗಳು ನನ್ನ ಮನಸ್ಸಿಗೆ ಹಿತವನ್ನು ತಂದಿರುವುದಾದರೂ, ದಶಕಂಧರನನ್ನು ಕೊಲ್ಲದೆ ಉಪೇಕ್ಷಿಸಿದರೆ ಆಗುವ ಪರಿಣಾಮವನ್ನು ರಘುರಾಮನಿಗೆ ತಿಳಿಸು. ನಿನಗೆ ನಾನಿತ್ತ ಚೂಡಾಮಣಿಯನ್ನು ನೋಡುತ್ತ ಇಷ್ಟುದಿನ ಶೋಕವನ್ನು ತಡೆದುಕೊಂಡಿರುತ್ತಿದ್ದೆ, ಅದು ಈಗ ನಿನ್ನ ವಶದಲ್ಲಿದೆ, ಇಲ್ಲಿಂದ ಮುಂದೆ ರಕ್ಕಸೀಗಣದ ನಡುವೆ ಹೇಗೆ ದೇಹವನ್ನುಳಿಸಿಕೊಳ್ಳ ಬೇಕೆಂಬುದನ್ನು ವಿವರಿಸಿ ಹೇಳು. ನನಗೆ ಸಂತಸವನ್ನು ನೀಡುತ್ತಿದ್ದ ಶಿರೋರತ್ನವನ್ನು ನಿನಗೆ ಕೊಟ್ಟದ್ದೇನೆ, ನಿನ್ನ ಹಿತಕರವಾದ ನುಡಿಯ ನೆನಪಿನಿಂದ ಇನ್ನೊಂದು ತಿಂಗಳು ಪ್ರಾಣವನ್ನು ಬಿಗಿಹಿಡಿದಿರುತ್ತೇನೆ. ಅಷ್ಟರಲ್ಲಿ ಬಂದು ಕರೆದೊಯ್ಯದಿದ್ದರೆ ನನ್ನ ಜೀವವನ್ನು ಅವನ ಪಾದಾರವಿಂದಗಳಿಗೇ ಅರ್ಪಿಸುತ್ತೇನೆ ಎಂದು ಶ್ರೀರಾಮಚಂದನಿಗೆ ತಿಳಿಸು ಎಂದು ಹೇಳಿದಳು.

ಈ ರೀತಿ ಆಕೆಯು ಹೇಳಿದುದನ್ನು ಕೇಳಿ, ಆ ಜಾಗದ ಕುರುಹನ್ನು ತಿಳಿದುಕೊಂಡು, ''ದೇವಿ, ಕೇಳು, ನನ್ನ ನುಡಿ ಯಾವತ್ತೂ ಸುಳ್ಳಾಗುವುದಿಲ್ಲವೆಂದು ಬಲ್ಲವರು ಹೇಳುತ್ತಾರೆ. ನಿನ್ನ ಕುರುಹನ್ನು ತಿಳಿದುಕೊಂಡು ಹೋಗಿ ದೇವ ರಾಘವನ ಅಂಘ್ರಿಗಳಿಗೆ ಒಪ್ಪಿಸಿದ ತಕ್ಷಣವೆ ರಾವಣನು ಪುತ್ರಮಿತ್ರಬಾಂಧವರೊಡನೆ ಹೊರಟನೆಂದು ತಿಳಿದುಕೋ.

ನಿನ್ನ ಬಗೆಗಿನ ಶುಭವಾರ್ತೆಯನ್ನು ಕೇಳಿದಾಕ್ಷಣವೆ ರಾಮಲಕ್ಷ್ಮಣರು ಸುಗ್ರೀವ ಮತ್ತು ಕಪಿಸೈನ್ಯದೊಡನೆ ಸಮುದ್ರವನ್ನು ದಾಟಿ ಚಿಟಿಕೆ ಹಾಕುವಷ್ಟರಲ್ಲಿ ದಶಗಳ ಕುಲವನ್ನು ಮಣ್ಣುಪಾಲಾಗಿಸಿ, ನಿನ್ನ ದುಮ್ಮಾನವನ್ನು ಪರಿಹರಿಸಿ ಅಯೋಧ್ಯೆಗೆ ಕರೆದೊಯ್ಯುವುದು ಖಂಡಿತ ಎಂದು ನಾನಾವಿಧವಾಗಿ ಸಮಾಧಾನ ಮಾಡಿ ಜಾನಕಿಯ ಸಂದೇಹವನ್ನು ನೀಗಿಸಿ, ಕೈಗಳನ್ನು ಮುಗಿದು, ಇಂದಿರಾವರನೆಡೆಗೆ ಹೋಗಲು ಅಪ್ಪಣೆಯನ್ನು ಕೊಟ್ಟೆಯಲ್ಲವೇ ಎಂದು ಹೇಳಲು ಧರಾನಂದನೆಯೂ ಶುಭನುಡಿಗಳಿಂದ ಹರಸಿ ಬೀಳ್ಕೊಟ್ಟಳು.

ರಾಮನ ಪಾದಗಳಿಗೆ ನಮಸ್ಕಾರಗಳನ್ನು ತಿಳಿಸು, ಸೌಮಿತ್ರಿಗೆ ಆಶೀರ್ವಾದವನ್ನು ಹೇಳು, ಸುಗ್ರೀವನೇ ಮೊದಲಾದ ಕಪಿಶ್ರೇಷ್ಠರಿಗೆ ನಾನು ಕೇಳಿದೆನೆಂದು ಹೇಳು ನನ್ನ ಸ್ವಾಮಿಯನ್ನು ಕಂಡು ಸುಖವಾಗಿರು, ಮುಂದೆ ಶುಭಸರಣಿಯೇ ಸಂಭವಿಸಲಿ'' ಎಂದು ಸೀತೆಯು ಕೂಗಿ ಹರಸಿದಳು. ಪರಮ ಸಂತೋಷದಿಂದ ಬೀಳ್ಕೊಟ್ಟ ಜಾನಕಿಯ ಚರಣಸರಸಿಜಗಳಿಗೆ ಪೊಡಮಟ್ಟು ಬೀಳ್ಕೊಂಡ ಮರುತಜನು ವೇಗವಾಗಿ ಬೇರೊಂದು ಜಾಗಕ್ಕೆ ಹೋಗಿ ಸಂತೋಷದಿಂದ ಕುಳಿತುಕೊಂಡ. ತರಣಿವಂಶಜನಾದ ರಾಮಪುರದರಸನ ಪಾದಗಳನ್ನು ಕಾಣುವ ತವಕದಿಂದಲೂ, ಮುಂದೆ ಆಗಬೇಕಾದ ಕಾರ್ಯಗಳ ಬಗೆಯನ್ನು ಆಲೋಚಿಸುತ್ತಲೂ ಬೆಳಗಾಗುವುದನ್ನೇ ಎದುರು ನೋಡುತ್ತ ಕಾಲಕಳೆದ

ಮುಂದುವರೆಯುವುದು



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ರಾಜಕೀಯ : ಭಾರತದ ಅತ್ಯಂತ ಲಾಭದಾಯಕ ಉದ್ಯಮವೇ?

**ರಾಜಕೀಯದಲ್ಲಿ ಕೆಲವರ ಆಸ್ತಿ ಏರಿಕೆಯು ಸುದ್ದಿಗಳು ಜನರಲ್ಲಿ ಬೇಸರ**

**ಚುನಾವಣೆಗಳು ಇಂದಿಗೆ ಸೇವಾ ಮನೋಭಾವಕ್ಕಿಂತ ''ಹೂಡಿಕೆ''ಯಂತಾಗಿವೆ. ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಲು ಕೋಟಿ ಕೋಟಿ ರೂಪಾಯಿಗಳ ವೆಚ್ಚ ಮಾಡಲಾಗುತ್ತದೆ. ಪ್ರಚಾರ, ಸಭೆಗಳು, ಬ್ಯಾನರ್‌ಗಳು, ಮಾಧ್ಯಮ ಪ್ರಚಾರ ಮತ್ತು ಮತದಾರರ ಮೇಲೆ ಪ್ರಭಾವ ಬೀರುವ ಕಾರ್ಯಗಳಿಗೆ ಅಪಾರ ಹಣ ಹರಿದುಹೋಗುತ್ತದೆ. ಈ ವೆಚ್ಚವನ್ನು ನೋಡಿದಾಗ, ಸಾಮಾನ್ಯ ವ್ಯಕ್ತಿಗೆ ರಾಜಕೀಯ ಪ್ರವೇಶವೇ ಅಸಾಧ್ಯವಾಗುತ್ತಿರುವುದು ಸ್ಪಷ್ಟವಾಗುತ್ತದೆ. ಅಧಿಕಾರಕ್ಕೆ ಬಂದ ನಂತರ ಕೆಲವರು ಭೂಮಿ, ಉದ್ಯಮ, ರಿಯಲ್ ಎಸ್ಟೇಟ್, ಒಪ್ಪಂದಗಳು ಮತ್ತು ವಿವಿಧ ಹೂಡಿಕೆಗಳ ಮೂಲಕ ತಮ್ಮ ಆರ್ಥಿಕ ಸಾಮ್ರಾಜ್ಯವನ್ನು ವಿಸ್ತರಿಸುತ್ತಾರೆ ಎಂಬ ಆರೋಪಗಳು ಕೇಳಿಬರುತ್ತವೆ. ಸಾರ್ವಜನಿಕ ಆಸ್ತಿಗಳ ಮೌಲ್ಯ ಏರಿಕೆ, ದೊಡ್ಡ ಯೋಜನೆಗಳು ಮತ್ತು ಸರ್ಕಾರಿ ನಿರ್ಧಾರಗಳ ಸುತ್ತ ಹಲವು ಅನುಮಾನಗಳು ಮೂಡುವುದು ಸಹ ಸಾಮಾನ್ಯವಾಗಿದೆ. ಇದರಿಂದ ಜನರಲ್ಲಿ ''ರಾಜಕೀಯವೇ ದೊಡ್ಡ ಬಿಸಿನೆಸ್'' ಎಂಬ ಅಭಿಪ್ರಾಯ ಬಲವಾಗುತ್ತಿದೆ.**

**ಇದರ ಪರಿಣಾಮವಾಗಿ ಜನಸೇವೆ ಎಂಬ ಮೂಲ ಉದ್ದೇಶ ಹಿಂಬದಿಗೆ ಸರಿಯುತ್ತಿದೆ ಎಂಬ ಟೀಕೆಗಳು ಹೆಚ್ಚಾಗಿವೆ. ರೈತರು ಸಾಲದ ಒತ್ತಡದಿಂದ ಸಂಕಷ್ಟ ಅನುಭವಿಸುತ್ತಿರುವಾಗ, ಯುವಕರು ಉದ್ಯೋಗಕ್ಕಾಗಿ ಅಲೆದಾಡುತ್ತಿರುವಾಗ ಮತ್ತು ಮಧ್ಯಮ ವರ್ಗ ದಿನನಿತ್ಯದ ಜೀವನ ಸಾಗಿಸಲು ಹೋರಾಡುತ್ತಿರುವಾಗ, ರಾಜಕೀಯದಲ್ಲಿ ಕೆಲವರ ಆಸ್ತಿ ಏರಿಕೆಯ ಸುದ್ದಿಗಳು ಜನರಲ್ಲಿ ಬೇಸರ ಹುಟ್ಟಿಸುತ್ತವೆ.**

ಒಮ್ಮೆ ರಾಜಕೀಯವನ್ನು ಜನಸೇವೆ, ತ್ಯಾಗ ಮತ್ತು ಸಮಾಜ ಪರಿವರ್ತನೆಯ ಮಾರ್ಗವೆಂದು ಪರಿಗಣಿಸಲಾಗುತ್ತಿತ್ತು. ದೇಶದ ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಸಮಾಜದ ಅಭಿವೃದ್ಧಿವರೆಗೆ ಅನೇಕ ಮಹಾನ್ ನಾಯಕರು ರಾಜಕೀಯವನ್ನು ಸೇವೆಯ ರೂಪದಲ್ಲಿ ನೋಡಿದ್ದರು. ಆದರೆ ಇಂದಿನ ಪರಿಸ್ಥಿತಿಯನ್ನು ಗಮನಿಸಿದರೆ, ರಾಜಕೀಯವು ನಿಧಾನವಾಗಿ ಭಾರತದ ಅತ್ಯಂತ ಲಾಭದಾಯಕ ಉದ್ಯಮವಾಗಿ ರೂಪಾಂತರಗೊಳ್ಳುತ್ತಿದೆ ಎಂಬ ಭಾವನೆ ಸಾಮಾನ್ಯ ಜನರಲ್ಲಿ ಮೂಡುತ್ತಿದೆ.

ಇಂದು ರಾಜಕೀಯವು ಕೇವಲ ಆಡಳಿತ ನಡೆಸುವ ವ್ಯವಸ್ಥೆಯಲ್ಲ. ಅದು ಅಪಾರ ಪ್ರಭಾವ, ಹಣ, ಅಧಿಕಾರ ಮತ್ತು ಆಸ್ತಿಯನ್ನು ತರುವ ಶಕ್ತಿಶಾಲಿ ಕ್ಷೇತ್ರವಾಗಿದೆ. ಅನೇಕ ರಾಜಕೀಯ ಮುಖಂಡರ ಆಸ್ತಿ ಕೆಲವೇ ವರ್ಷಗಳಲ್ಲಿ ಕೋಟ್ಯಂತರ ರೂಪಾಯಿಯಿಂದ ಸಾವಿರಾರು ಕೋಟಿಗಳವರೆಗೆ ಏರಿಕೆಯಾಗಿರುವುದು ಜನರಲ್ಲಿ ಆಶ್ಚರ್ಯ ಮೂಡಿಸುತ್ತಿದೆ. ಸಾಮಾನ್ಯ ಉದ್ಯಮಗಳಲ್ಲಿ ವರ್ಷಗಳ ಪರಿಶ್ರಮದ ನಂತರವೂ ಸಾಧ್ಯವಾಗದಷ್ಟು ಆರ್ಥಿಕ ಬೆಳವಣಿಗೆ, ರಾಜಕೀಯದ ಮೂಲಕ ಸಾಧ್ಯವಾಗುತ್ತಿದೆ ಎಂಬ ಮಾತುಗಳು ಹೆಚ್ಚುತ್ತಿವೆ.

ಆದರೆ ಇಲ್ಲಿ ಒಂದು ಮಹತ್ವದ ವಿಷಯವನ್ನು ಮರೆಯಬಾರದು. ಎಲ್ಲಾ ರಾಜಕಾರಣಿಗಳೂ ಒಂದೇ ರೀತಿಯವರಲ್ಲ. ದೇಶದಲ್ಲಿ ಇನ್ನೂ ಪ್ರಾಮಾಣಿಕವಾಗಿ ಕೆಲಸ ಮಾಡುವ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಸರಳ ಜೀವನ ನಡೆಸುವ ನಾಯಕರು ಇದ್ದಾರೆ. ಅವರು ರಾಜಕೀಯವನ್ನು ಸೇವೆಯ ರೂಪದಲ್ಲೇ ನೋಡುತ್ತಾರೆ. ಆದರೆ ಕೆಲವರ ವಿರುದ್ಧ ಕೇಳಿಬರುವ ಭ್ರಷ್ಟಾಚಾರ, ಅಕ್ರಮ ಆಸ್ತಿ ಮತ್ತು ಅಧಿಕಾರದ ದುರುಪಯೋಗದ ಆರೋಪಗಳು ಸಂಪೂರ್ಣ ರಾಜಕೀಯ ವ್ಯವಸ್ಥೆಯ ಮೇಲೆಯೇ ಜನರ ನಂಬಿಕೆಯನ್ನು ಕುಂದಿಸುತ್ತವೆ. ಇಂದು ರಾಜಕೀಯದಲ್ಲಿ ಹಣದ ಪ್ರಭಾವ ಹೆಚ್ಚಾದಂತೆ, ಪ್ರಜಾಪ್ರಭುತ್ವದ ಮೌಲ್ಯಗಳ ಮೇಲೆಯೂ ಪರಿಣಾಮ ಬೀಳುತ್ತಿದೆ. ಮತದಾರರು ಕೆಲವೊಮ್ಮೆ ಜಾತಿ, ಧರ್ಮ, ಹಣ ಅಥವಾ ಪ್ರಚಾರದ ಆಧಾರದ ಮೇಲೆ ನಿರ್ಧಾರ ಮಾಡುತ್ತಾರೆ. ಇದು ನಿಷ್ಠಾವಂತ ಮತ್ತು ಅರ್ಹ ವ್ಯಕ್ತಿಗಳಿಗೆ ಅವಕಾಶ ಕಡಿಮೆ ಮಾಡುತ್ತದೆ. ಪರಿಣಾಮವಾಗಿ ರಾಜಕೀಯವು ಜನಸೇವೆಯ ಕ್ಷೇತ್ರಕ್ಕಿಂತ ಅಧಿಕಾರ ಮತ್ತು ಆರ್ಥಿಕ ಲಾಭದ ವೇದಿಕೆಯಾಗಿ ಕಾಣಿಸಿಕೊಳ್ಳುತ್ತಿದೆ.

ಈ ಪರಿಸ್ಥಿತಿಯನ್ನು ಬದಲಾಯಿಸಲು ಜನರ ಜಾಗೃತಿ ಅತ್ಯಂತ ಮುಖ್ಯ. ಮತದಾರರು ಅಭ್ಯರ್ಥಿಗಳ ಆಸ್ತಿ, ಹಿನ್ನೆಲೆ, ಕೆಲಸದ ಸಾಧನೆ ಮತ್ತು ನೈತಿಕತೆಯನ್ನು ಪರಿಶೀಲಿಸಿ ಮತ ಚಲಾಯಿಸಬೇಕು. ಸಮಾಜವೂ ರಾಜಕೀಯವನ್ನು ಹಣ ಗಳಿಸುವ ಮಾರ್ಗವಾಗಿ ನೋಡುವ ಬದಲು, ಸೇವೆಯ ಜವಾಬ್ದಾರಿಯಾಗಿ ಕಾಣಬೇಕು.

ರಾಜಕೀಯವು ದೇಶದ ಭವಿಷ್ಯವನ್ನು ರೂಪಿಸುವ ಅತ್ಯಂತ ಮಹತ್ವದ ವ್ಯವಸ್ಥೆ. ಅದು ಶುದ್ಧ ಮತ್ತು ಪಾರದರ್ಶಕವಾಗಿದ್ದಾಗ ಮಾತ್ರ ಜನರಲ್ಲಿ ವಿಶ್ವಾಸ ಉಳಿಯುತ್ತದೆ. ಇಲ್ಲವಾದರೆ ರಾಜಕೀಯವು ನಿಧಾನವಾಗಿ ಕೆಲವು ಮಂದಿಗೆ ಮಾತ್ರ ಲಾಭ ತರುವ ಉದ್ಯಮವಾಗಿ ಉಳಿದುಬಿಡುತ್ತದೆ.

ಕೊನೆಯಲ್ಲಿ ಹೇಳುವುದಾದರೆ, ರಾಜಕೀಯ ಜನಸೇವೆಯ ಪವಿತ್ರ ವೇದಿಕೆ ಆಗಿರಬೇಕು. ಆದರೆ ಅಧಿಕಾರ ಮತ್ತು ಹಣದ ಆಕರ್ಷಣೆಯ ನಡುವೆ ಅದು ಲಾಭದಾಯಕ ಉದ್ಯಮವಾಗಿ ಮಾರ್ಪಡುತ್ತಿರುವುದು ಆತಂಕಕಾರಿ ವಾಸ್ತವ. ಇದನ್ನು ಬದಲಾಯಿಸುವ ಶಕ್ತಿ ಜನರ ಕೈಯಲ್ಲಿದೆ.

ಜಾಗೃತ ಮತದಾರರು ಮತ್ತು ಪ್ರಾಮಾಣಿಕ ನಾಯಕತ್ವ ಮಾತ್ರ ರಾಜಕೀಯವನ್ನು ಮತ್ತೆ ಸೇವೆಯ ದಾರಿಗೆ ತರುವಲ್ಲಿ ಯಶಸ್ವಿಯಾಗಬಹುದು.

# ಪೈಲ್ವಾನರ ಭದ್ರ ಬುನಾದಿಗೆ ಜೋಕು ವ್ಯಾಯಾಮದ ತಾಕತ್ತು!

ಅಖಾಡದ ಕೆಮ್ಮಣ್ಣಿನಲ್ಲಿ ಎದುರಾಳಿಯನ್ನು ಧೂಳೀಪಟ ಮಾಡಲು ತೋಳ್ಬಲ ಸಾಲದು; ಕಬ್ಬಿಣದಂತಹ ಕಾಲುಗಳ ಭದ್ರ ಬುನಾದಿ ಬೇಕು. ದೇಹವನ್ನು ವಜ್ರದಂತೆ ಹದಗೊಳಿಸುವ ದೇಸೀ ಕಸರತ್ತುಗಳಲ್ಲಿ ಜೋಕು ಅಥವಾ ಅರೆ ಬೈಟಕ್ಗೆ ಅಗ್ರಸ್ಥಾನ. ಇಂದಿನ ಜಿಮ್‌ನ ಸ್ಕ್ವಾಟ್ಸ್‌ಗೆ ಶತಮಾನಗಳ ಹಿಂದೆಯೇ ನಮ್ಮ ಗರಡಿಮನೆ ಕಂಡ ಉತ್ತರವಿದು. ಮೇಲ್ನೋಟಕ್ಕೆ ಸರಳವಾದರೂ ಲಯಬದ್ಧತೆ, ಉಸಿರಾಟದ ಹದವೇ ಇದರ ಜೀವಾಳ.

## ನಿರಂತರ ಚಲನೆ ಏಕಾಗ್ರತೆ

ಭುಜದ ಅಗಲದಲ್ಲಿ ಕಾಲೂರಿ, ಹಕ್ಕಿಯಂತೆ ಅರ್ಧ ಕುಳಿತು ತೊಡೆ ನೆಲಕ್ಕೆ ಸಮಾನಾಂತರವಾಗಿಸಿ, ಸ್ಪ್ರಿಂಗ್‌ನಂತೆ ಪುಟಿದೇಳಬೇಕು. ಕೈಗಳನ್ನು ಮುಂದೆ ಚಾಚಿ ಅಥವಾ ಸೊಂಟಕ್ಕಾನಿಸಿ ಮಾಡುವ ಈ ನಿರಂತರ ಚಲನೆ ಏಕಾಗ್ರತೆ ಬೇಡುತ್ತದೆ, ಮೈಯಲ್ಲಿ ಚೈತನ್ಯದ ಬುಗ್ಗೆ ಚಿಮ್ಮಿಸುತ್ತದೆ.

ಜೋಕಿನ ನೇರ ಪ್ರಭಾವ ತೊಡೆಯ ಸ್ನಾಯುಗಳ ಮೇಲೆ ಎದುರಾಳಿ ಕಾಲೆಳೆದಾಗ,ಆಕಾಶಕ್ಕೆತ್ತಿ ಅಪ್ಪಳಿಸುವಾಗ ಕಾಲುಗಳು ವಟವೃಕ್ಷದಂತೆ ಅಚಲವಾಗಿರಲು ಸ್ಫೋಟಕ ಶಕ್ತಿ ತುಂಬುತ್ತದೆ. ಮೊಣಕಾಲಿನ ಸುತ್ತಲ ಸ್ನಾಯುರಜ್ಜು ಬಲಗೊಂಡು ಕೀಲುಗಳಿಗೆ ನೈಸರ್ಗಿಕ ಕವಚ ಒದಗುತ್ತದೆ. ಹಳೆಯ ಜಟ್ಟಿಗಳಿಗೆ ಮಂಡಿನೋವು ಸುಳಿಯದ ಗುಟ್ಟು ಇದೇ. ನೂರಾರು ಜೋಕು ಹೊಡೆಯುವಾಗ ಹೃದಯ ಬಡಿತ ಏರಿ, ಶ್ವಾಸಕೋಶ ಹೆಚ್ಚು ಆಮ್ಲಜನಕ ಪೂರೈಸುತ್ತದೆ. ದೀರ್ಘ ಕಣಕ್ಕೆ ಬೇಕಾದ ದಮ್ಮು, ಚಯಾಪಚಯ ಚುರುಕುತನ ಇದರಿಂದ ಸಿದ್ಧಿಸುತ್ತದೆ.

## ಶಿಸ್ತು ಮುಖ್ಯ

**ಬೆನ್ನು ನೇರವಾಗಿರಲಿ, ಮಂಡಿ ಪಾದದ ರೇಖೆ ಮೀರದಿರಲಿ. ಮೊದಲ ದಿನವೇ ಸಾವಿರದ ಸಾಹಸ ಬೇಡ ಹಂತಹಂತವಾಗಿ ಏರಿಸಿ. ಹದವಾದ ಮಣ್ಣು, ಸಮತಟ್ಟಾದ ನೆಲ ಸೂಕ್ತ. ಜೋಕು ಪೈಲ್ವಾನರ ದೈಹಿಕ ಸಾಮ್ರಾಜ್ಯದ ಅಧಿಪತಿ. ಯಂತ್ರದ ಹಂಗಿಲ್ಲದೆ ಮೈಯನ್ನು ಸುಂದರ, ಸದೃಢಗೊಳಿಸುವ ಈ ಜವಾರಿ ವಿದ್ಯೆಯನ್ನು ಯುವಜನ ಅಪ್ಪಿದರೆ ಆಜನ್ಮ ಬಲಿಷ್ಠ ಕಾಯ ದಕ್ಕುತ್ತದೆ.**



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು



# ನೀವು 5 ನಿಮಿಷ ವ್ಯಾಯಾಮ ಮಾಡಿದರೆ ಫಿಟ್ ಫೈನ್



ಪ್ರತಿಯೊಬ್ಬರೂ ಆರೋಗ್ಯಕರ, ಫಿಟ್ ಹಾಗೂ ತೊಂದರೆಮುಕ್ತ ಜೀವನವನ್ನು ನಡೆಸಲು ಬಯಸುತ್ತಾರೆ. ಇದಕ್ಕಾಗಿ ಅನೇಕರು ಕಠಿಣ ಪರಿಶ್ರಮ ಹಾಗೂ ವ್ಯಾಯಾಮದಲ್ಲಿ ತೊಡಗುತ್ತಾರೆ. ಮತ್ತೊಂದೆಡೆ, ಕೆಲವು ವ್ಯಕ್ತಿಗಳು ಆರೋಗ್ಯವಾಗಿ ಹಾಗೂ ಫಿಟ್ ಆಗಿರಲು ಬಯಸುತ್ತಾರೆ, ಆದರೆ ವ್ಯಾಯಾಮ ಮಾಡಲು ಹಿಂಜರಿಯುತ್ತಾರೆ. ಅನೇಕ ಜನರು ಕಾರ್ಯನಿರತ ಜೀವನವನ್ನು ನಡೆಸುತ್ತಿದ್ದಾರೆ. ಅವರಿಗೆ ವ್ಯಾಯಾಮ ಮಾಡಲು ಬಯಕೆಯಿದೆ, ಆದರೆ ವ್ಯಾಯಾಮ ಮಾಡಲು ಸಮಯ ಸಿಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ತಜ್ಞರ ಸಲಹೆಯ ಆಧಾರದ ಮೇಲೆ ನೀವು ತೀವ್ರವಾದ ವ್ಯಾಯಾಮಗಳನ್ನು ಇಷ್ಟಪಡದಿದ್ದರೂ ಅಥವಾ ಅವುಗಳನ್ನು ನಿರ್ವಹಿಸಲು ಸಮಯದ ಕೊರತೆಯಿದ್ದರೂ ನೀವು ಫಿಟ್ ಆಗಿರಲು ಹೇಗೆ ಸಾಧ್ಯ ಎಂಬುದನ್ನು ಅರಿತುಕೊಳ್ಳೋಣ.

ಅನೇಕ ಜನರು ಕಠಿಣ ದೈಹಿಕ ಶ್ರಮ ಅಥವಾ ಜಿಮ್‌ನಲ್ಲಿ ಗಂಟೆಗಟ್ಟಲೆ ಬೆವರು ಸುರಿಸುವುದನ್ನು ಇಷ್ಟಪಡುವುದಿಲ್ಲ. ಇದರ ಪರಿಣಾಮವಾಗಿ ಅವರು ಜಿಮ್‌ಗೆ ಹೋಗುವುದರಿಂದ ದೂರ ಸರಿಯುತ್ತಾರೆ ಹಾಗೂ ಔಪಚಾರಿಕ ವ್ಯಾಯಾಮ ದಿನಚರಿಗಳಲ್ಲಿ ತೊಡಗಿಸಿಕೊಳ್ಳದೆ ಫಿಟ್ ಆಗಿರಲು ಸರಳ ವಿಧಾನಗಳನ್ನು ಹುಡುಕುತ್ತಾರೆ. ಇಂತಹ ವ್ಯಕ್ತಿಗಳಿಗೆ 5 ನಿಮಿಷಗಳ ಹೈಇಂಟೆನ್ಸಿಟಿ ಇಂಟರ್ವಲ್ ಟ್ರೈನಿಂಗ್ ಸರ್ಕ್ಯೂಟ್ ಫಿಟ್ ಹಾಗೂ ಸಕ್ರಿಯವಾಗಿರಲು ಅತ್ಯುತ್ತಮ ಆಯ್ಕೆಯಾಗಿದೆ. ಎಲ್ಲಕ್ಕಿಂತ ಉತ್ತಮವಾಗಿ ಇದಕ್ಕೆ ಯಾವುದೇ ಉಪಕರಣಗಳು ಅಗತ್ಯವಿಲ್ಲ.

**ಜಂಪಿಂಗ್ ಜ್ಯಾಕ್ಸ್:** ನಿಮ್ಮ ದೇಹವನ್ನು ಬೆಚ್ಚಗಾಗಲು 45 ಸೆಕೆಂಡುಗಳವರೆಗೆ ಜಂಪಿಂಗ್ ಜ್ಯಾಕ್ಸ್ ಮಾಡಿ. ಜಂಪಿಂಗ್ ಜ್ಯಾಕ್ಸ್ ನೀವು ಬಹುತೇಕ ಎಲ್ಲಿ ಬೇಕಾದರೂ ಮಾಡಬಹುದಾದ ಪರಿಣಾಮಕಾರಿ ಒಟ್ಟು ದೇಹದ ವ್ಯಾಯಾಮವಾಗಿದೆ. ಈ ವ್ಯಾಯಾಮ ಪ್ಲೈಮೆಟ್ರಿಕ್ಸ್ ಅಥವಾ ಜಂಪ್ ತರಬೇತಿಯ ವರ್ಗಕ್ಕೆ ಸೇರುತ್ತದೆ. ಪ್ಲೈಮೆಟ್ರಿಕ್ಸ್ ಏರೋಬಿಕ್ ವ್ಯಾಯಾಮ ಮತ್ತು ಪ್ರತಿರೋಧ ತರಬೇತಿಯ ಸಂಯೋಜನೆಯಾಗಿದೆ. ಈ ರೀತಿಯ ವ್ಯಾಯಾಮವು ಹೃದಯ, ಶ್ವಾಸಕೋಶಗಳು ಹಾಗೂ ಸ್ನಾಯುಗಳನ್ನು ಏಕಕಾಲದಲ್ಲಿ ತೊಡಗಿಸಿಕೊಳ್ಳುತ್ತದೆ. ಸ್ಕ್ವಾಟ್‌ಗಳು ಕೆಳದೇಹದ ಶಕ್ತಿಯನ್ನು ನಿರ್ಮಿಸಲು ಅಗತ್ಯವಾದ ವ್ಯಾಯಾಮವಾಗಿದೆ. ನಿರ್ದಿಷ್ಟವಾಗಿ ನಿಮ್ಮ ತೊಡೆಗಳು, ಸೊಂಟ ಮತ್ತು ಗ್ಲುಟ್‌ಗಳಿಗೆ ಉತ್ತಮ. ಸ್ಕ್ವಾಟ್ಸ್ ವ್ಯಾಯಾಮವನ್ನು ಪ್ರತಿದಿನ 45 ಸೆಕೆಂಡುಗಳ ಕಾಲ ಮಾಡಿ. ಈ ವ್ಯಾಯಾಮಗಳು ನಿಮ್ಮ ಹೊಟ್ಟೆ ಮತ್ತು ಕೆಳ ಬೆನ್ನಿನ ಕೋರ್ ಸ್ನಾಯುಗಳಲ್ಲಿ ಶಕ್ತಿಯನ್ನು ನಿರ್ಮಿಸಲು ಸಹಾಯ ಮಾಡುತ್ತದೆ. ಒಟ್ಟಾರೆಯಾಗಿ ಸ್ಕ್ವಾಟ್ಸ್ ದೇಹದ ಕೆಳಗಿನ ಅಂಗಾಂಶಗಳಿಗೆ ಸುಧಾರಣೆಗೆ ಕಾರಣವಾಗುತ್ತದೆ.

ಪುಷ್-ಅಪ್ಸ್ ಪ್ರತಿದಿನ 45 ಸೆಕೆಂಡುಗಳ ಕಾಲ ಮಾಡಬೇಕಾಗುತ್ತದೆ. ಪುಷ್-ಅಪ್ ಒಂದು ಮೂಲಭೂತ ಕ್ಯಾಲಿಸ್ಟೆನಿಕ್ಸ್ ವ್ಯಾಯಾಮವಾಗಿದ್ದು, ಇದು ನಿಮ್ಮ ದೇಹದ ತೂಕವನ್ನು ಮಾತ್ರ ಬಳಸಿಕೊಂಡು ನಿಮ್ಮ ಎದೆ, ಭುಜಗಳು, ಟ್ರೈಸ್ಪ್ಸ್ ಮತ್ತು ಕೋರ್ ಅನ್ನು ಬಲಪಡಿಸುತ್ತದೆ. ನ್ಯಾಷನಲ್ ಅಕಾಡೆಮಿ ಆಫ್ ಸ್ಪೋರ್ಟ್ಸ್ ಮೆಡಿಸಿನ್ ಪ್ರಕಾರ, ಪುಷ್-ಅಪ್ಸ್ ವ್ಯಾಯಾಮದಿಂದ ಚಲನೆಯನ್ನು ಕರಗತ ಮಾಡಿಕೊಳ್ಳಲು ಪೂರ್ಣ-ದೇಹದ ಒತ್ತಡದ ಅಗತ್ಯವಿದೆ. ನಿಮ್ಮ ಬೆನ್ನುಮೂಳೆಯನ್ನು ರಕ್ಷಿಸಲು ಹಾಗೂ ಸ್ನಾಯುಗಳ ಬೆಳವಣಿಗೆಯನ್ನು ಹೆಚ್ಚಿಸಲು ಇದು ಅವಶ್ಯಕವಾಗಿದೆ.

ಪೂರ್ಣ-ದೇಹದ ವ್ಯಾಯಾಮವಾಗಿ ಹಾಗೂ ಹೊಟ್ಟೆಯ ಕೊಬ್ಬನ್ನು ಕಡಿಮೆ ಮಾಡಲು 45 ಸೆಕೆಂಡುಗಳ ಕಾಲ ಇವುಗಳನ್ನು ಮಾಡಿ. ಮೌಂಟೇನರ್ಸ್ ಕ್ಲೈಂಬಿಂಗ್ ಕ್ರಿಯಾತ್ಮಕ, ಹೆಚ್ಚಿನ ಉಪಯುಕ್ತತೆಯ ದೇಹದ ತೂಕದ ವ್ಯಾಯಾಮವಾಗಿದೆ. ಮೌಂಟೇನರ್ಸ್ ಕ್ಲೈಂಬಿಂಗ್ ಹೃದಯರಕ್ತನಾಳದ ಕಂಡೀಷನಿಂಗ್ ಅನ್ನು ಪೂರ್ಣ ದೇಹದ ಶಕ್ತಿ ಮತ್ತು ಕೋರ್ ಸ್ಥಿರತೆಯೊಂದಿಗೆ ಸಂಯೋಜಿಸುತ್ತದೆ. ಸಾಮಾನ್ಯವಾಗಿ ರನ್ನಿಂಗ್ ಪ್ಲಾಂಕ್ ಎಂದು ಕರೆಯಲ್ಪಡುವ ಈ ವ್ಯಾಯಾಮವು ನಿಮ್ಮ ಮೇಲ್ಭಾಗದ ದೇಹವನ್ನು ಐಸೊಮೆಟ್ರಿಕ್-ಅಲಿಯಾಗಿ ಸ್ಥಿರಗೊಳಿಸಲು ಒತ್ತಾಯಿಸುತ್ತದೆ. ಆದರೆ ನಿಮ್ಮ ಕೆಳಗಿನ ದೇಹವು ಸಕ್ರಿಯ ಚಲನೆಗಳನ್ನು ನಿರ್ವಹಿಸುತ್ತದೆ. ಇದರಿಂದಾಗಿ ನಿಮ್ಮ ಹೃದಯ ಬಡಿತವನ್ನು ಹೆಚ್ಚಿಸುತ್ತದೆ. ಕೋರ್ ಮತ್ತು ಬೆನ್ನುಮೂಳೆಯ ಬಲವನ್ನು ನಿರ್ಮಿಸಲು 45 ಸೆಕೆಂಡುಗಳ ಕಾಲ ಇದನ್ನು ಮಾಡಲು ಮರೆಯದಿರಿ. ಪ್ಲ್ಯಾಂಕ್ ಒಂದು ಅತ್ಯಂತ ಪರಿಣಾಮಕಾರಿ ಐಸೊಮೆಟ್ರಿಕ್ ಕೋರ್ ಬಲಪಡಿಸುವ ವ್ಯಾಯಾಮವಾಗಿದೆ. ಇದು ಪುಷ್-ಅಪ್‌ನ ಮೇಲ್ಭಾಗದಂತೆಯೇ ಸ್ಥಾನವನ್ನು ಹಿಡಿದಿಟ್ಟುಕೊಳ್ಳುವುದನ್ನು ಒಳಗೊಂಡಿರುತ್ತದೆ. ಇದು ಪ್ರಾಥಮಿಕವಾಗಿ ಕಿಬ್ಬೊಟ್ಟೆಯ ಸ್ನಾಯುಗಳು, ಕೆಳ ಬೆನ್ನು ಮತ್ತು ಭುಜಗಳನ್ನು ಗುರಿಯಾಗಿರಿಸಿಕೊಂಡು ಯಾವುದೇ ಉಪಕರಣಗಳ ಅಗತ್ಯವಿಲ್ಲದೆ ಸ್ಥಿರತೆಯನ್ನು ನಿರ್ಮಿಸುತ್ತದೆ ಹಾಗೂ ಭಂಗಿಯನ್ನು ಸುಧಾರಿಸುತ್ತದೆ.

ಕೇವಲ ಐದು ನಿಮಿಷಗಳು ನಿಮ್ಮ ದೇಹದ ತೂಕವನ್ನು ಮಾತ್ರ ಬಳಸಿ, ಪ್ರಮುಖ ಸ್ನಾಯು ಗುಂಪುಗಳನ್ನು ಪರಿಣಾಮಕಾರಿಯಾಗಿ ಸಕ್ರಿಯಗೊಳಿಸಬಹುದು. ಸಣ್ಣ ವ್ಯಾಯಾಮಗಳು ದೈನಂದಿನ ದೈಹಿಕ ಚೈತನ್ಯವನ್ನು ಹೆಚ್ಚಿಸುತ್ತವೆ ಎಂದು ವೈಜ್ಞಾನಿಕವಾಗಿ ಕೂಡ ಸಾಬೀತಾಗಿದೆ. ಈ ವರದಿಯಲ್ಲಿ ನಿಮಗೆ ನೀಡಲಾದ ಎಲ್ಲಾ ಆರೋಗ್ಯ ಸಂಬಂಧಿತ ಮಾಹಿತಿ ಹಾಗೂ ಸಲಹೆಗಳು ಸಾಮಾನ್ಯ ಮಾಹಿತಿಗಾಗಿ ಮಾತ್ರ.

# ಈ ಎರಡು ನಗರಗಳಲ್ಲಿ 3.2 ಕೋಟಿ ಸೊಳ್ಳೆಗಳನ್ನು ಬಿಡಲು ಪ್ಲಾನ್?

ಪ್ರತಿವರ್ಷ ಪ್ರಪಂಚದಾದ್ಯಂತ ಲಕ್ಷಾಂತರ ಜನರು ಡೆಂಗ್ಯೂ, ಮಲೇರಿಯಾ, ಜಿಕಾ, ಚಿಕೂನ್‌ಗುನ್ಯಾ ಹಾಗೂ ವೆಸ್ಟ್ ನೈಲ್ ವೈರಸ್‌ನಂತಹ ಸೊಳ್ಳೆಗಳಿಂದ ಹರಡುವ ರೋಗಗಳಿಂದ ಸೋಂಕಿಗೆ ಒಳಗಾಗುತ್ತಾರೆ. ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ, ಸೊಳ್ಳೆಯನ್ನು ವಿಶ್ವದ ಅತ್ಯಂತ ಮಾರಕ ಜೀವಿ ಎಂದು ಪರಿಗಣಿಸಲಾಗಿದೆ. ಇದು ವಾರ್ಷಿಕವಾಗಿ ಲಕ್ಷಾಂತರ ಜನರನ್ನು ಅಸ್ವಸ್ಥಗೊಳಿಸುತ್ತದೆ ಹಾಗೂ ಪ್ರಪಂಚದಾದ್ಯಂತ 7 ಲಕ್ಷಕ್ಕೂ ಹೆಚ್ಚು ಸಾವುಗಳಿಗೆ ಕಾರಣವಾಗುತ್ತದೆ. ಹವಾಮಾನ ಬದಲಾವಣೆ, ತ್ವರಿತ ನಗರೀಕರಣ ಹಾಗೂ ಹೆಚ್ಚಿದ ಜಾಗತಿಕ ಪ್ರಯಾಣದಿಂದ ಈ ರೋಗಗಳಿಂದ ಉಂಟಾಗುವ ಬೆದರಿಕೆ ವೇಗವಾಗಿ ಹೆಚ್ಚುತ್ತಿದೆ. ಈ ಸಮಸ್ಯೆಯನ್ನು ತಗ್ಗಿಸಲು ವೆರಿಲಿ (ಗೂಗಲ್‌ನ ಪೋಷಕ ಕಂಪನಿ ಆಲ್ಫಾಬೆಟ್‌ನ ಅಂಗಸಂಸ್ಥೆ) 'ಡೀಬಗ್ ಪ್ರಾಜೆಕ್ಟ್' ಎಂಬ ವಿಶೇಷ ಉಪಕ್ರಮವನ್ನು ಪ್ರಾರಂಭಿಸಿದೆ. ಈ ಯೋಜನೆಯಡಿಯಲ್ಲಿ ಕಂಪನಿಯು ಎರಡು ವರ್ಷಗಳ ಅವಧಿಯಲ್ಲಿ ಕ್ಯಾಲಿಫೋರ್ನಿಯಾ ಹಾಗೂ ಫ್ಲೋರಿಡಾದಲ್ಲಿ ಒಟ್ಟು 32 ಮಿಲಿಯನ್ ವಿಶೇಷ ಗಂಡು ಸೊಳ್ಳೆಗಳನ್ನು ಬಿಡುಗಡೆ ಮಾಡಲು ಪ್ರಸ್ತಾಪಿಸಿದೆ. ಅಮೆರಿಕದ ಪರಿಸರ ಸಂರಕ್ಷಣಾ ಸಂಸ್ಥೆ (ಇಪಿಎ) ಪ್ರಸ್ತುತ ಈ ಯೋಜನೆಯನ್ನು ಪರಿಶೀಲಿಸುವ ಹಾಗೂ ಅನುಮೋದಿಸುವ ಪ್ರಕ್ರಿಯೆಯಲ್ಲಿದೆ. ಈ ಯೋಜನೆಯ ಉದ್ದೇಶ ರೋಗ ಹರಡುವುದಲ್ಲ, ಬದಲಾಗಿ ರಾಸಾಯನಿಕ ಕೀಟನಾಶಕಗಳ ಬಳಕೆ ಅಥವಾ ಆನುವಂಶಿಕ ಮಾರ್ಪಾಡು ಇಲ್ಲದೆ ಅಪಾಯಕಾರಿ ಸೊಳ್ಳೆಗಳ ಸಂಖ್ಯೆಯನ್ನು ನೈಸರ್ಗಿಕವಾಗಿ ಕಡಿಮೆ ಮಾಡುವುದು ಎಂದು ತಜ್ಞರು ತಿಳಿಸುತ್ತಾರೆ. ಇದಕ್ಕಾಗಿಯೇ ಗೂಗಲ್ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಈ ಸೊಳ್ಳೆಗಳನ್ನು ಬಿಡುಗಡೆ ಮಾಡಲು ಅನುಮತಿ ಕೋರುತ್ತಿದೆ. ಈ ಯೋಜನೆ ಕುರಿತ ಸಂಪೂರ್ಣ ವಿವರಗಳನ್ನು ತಿಳಿಯೋಣ.

**ಏನಿದು ಡೀಬಗ್ ಯೋಜನೆ:** ಗೂಗಲ್ ಪರಿಸರಕ್ಕೆ ಬಿಡುಗಡೆ ಮಾಡಲು ಯೋಜಿಸಿರುವ ಸೊಳ್ಳೆಗಳು ಸಾಮಾನ್ಯ ಸೊಳ್ಳೆಗಳಲ್ಲ. ಬದಲಾಗಿ ಅವುಗಳನ್ನು ಪ್ರಯೋಗಾಲಯದಲ್ಲಿ ನಿರ್ದಿಷ್ಟವಾಗಿ ಬೆಳೆಸಲಾದ ಗಂಡು ಸೊಳ್ಳೆಗಳಾಗಿವೆ. ಗಮನಾರ್ಹವಾಗಿ ಈ ಪ್ರಯೋಗಾಲಯವು ಗಂಡು ಸೊಳ್ಳೆಗಳ ಸಂತಾನೋತ್ಪತ್ತಿಯ ಮೇಲೆ ಮಾತ್ರ ಕೇಂದ್ರೀಕರಿಸುತ್ತದೆ, ಏಕೆಂದರೆ ಇದು ಹೆಣ್ಣು ಸೊಳ್ಳೆಗಳು ಮಾತ್ರ ಮನುಷ್ಯರನ್ನು ಕಚ್ಚಿ ಅವರ ರಕ್ತವನ್ನು ತಿನ್ನುತ್ತವೆ ಎಂಬುದು ಪ್ರಕೃತಿಯ ಮೂಲಭೂತ ನಿಯಮವಾಗಿದೆ. ಈ ಪ್ರಯೋಗಾಲಯ ತಳಿಸಲಾದ ಗಂಡು ಸೊಳ್ಳೆಗಳು ವೋಲ್ಬಾಚಿಯಾ ಎಂದು ಕರೆಯಲ್ಪಡುವ ನಿರ್ದಿಷ್ಟ ರೀತಿಯ ಬ್ಯಾಕ್ಟೀರಿಯಾದಿಂದ ಸೋಂಕಿಗೆ ಒಳಗಾಗುತ್ತವೆ.



ಈ ಬ್ಯಾಕ್ಟೀರಿಯಾವು ಜನನ ನಿಯಂತ್ರಣದ ಒಂದು ರೂಪವಾಗಿ ಕಾರ್ಯನಿರ್ವಹಿಸುತ್ತದೆ. ಬ್ಯಾಕ್ಟೀರಿಯಾಗಳನ್ನು ಹೊತ್ತೊಯ್ಯುವ ಈ ಗಂಡು ಸೊಳ್ಳೆಗಳು ಸುತ್ತಮುತ್ತಲಿನ ಪ್ರದೇಶದಲ್ಲಿ ಕಾಡು ಹೆಣ್ಣು ಸೊಳ್ಳೆಗಳೊಂದಿಗೆ ಸಂಯೋಗ ಮಾಡಿದಾಗ ಇವುಗಳ ಮೊಟ್ಟೆಗಳು ಅಭಿವೃದ್ಧಿಯಾಗುವುದಿಲ್ಲ. ಅಂದರೆ ಮೊಟ್ಟೆಗಳು ಹೊರಬರುವುದಿಲ್ಲ. ಇದರ ಪರಿಣಾಮವಾಗಿ ರೋಗಗಳನ್ನು ಹೊತ್ತೊಯ್ಯುವ ಸೊಳ್ಳೆಗಳ ಸಂಖ್ಯೆ ಕ್ರಮೇಣ ಕಡಿಮೆಯಾಗಲು ಪ್ರಾರಂಭಿಸುತ್ತದೆ. ಈ ರೀತಿಯಾಗಿ ಯಾವುದೇ ರಾಸಾಯನಿಕ ಕೀಟನಾಶಕಗಳನ್ನು ಬಳಸದೆ ಸೊಳ್ಳೆಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ.

**ಅನೇಕ ಜನರು ಆಶ್ಚರ್ಯಪಡಬಹುದು:** ಈಗಾಗಲೇ ಹಲವು ಸೊಳ್ಳೆಗಳಿರುವುದರಿಂದ ಕೋಟ್ಯಂತರ ಸೊಳ್ಳೆಗಳನ್ನು ಬಿಡುಗಡೆ ಮಾಡುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆಯೇ? ಮೊದಲ ನೋಟದಲ್ಲಿ ಅಸ್ತಿತ್ವದಲ್ಲಿರುವ ಸೊಳ್ಳೆಗಳನ್ನು ಎದುರಿಸಲು ಇನ್ನೂ ಹೆಚ್ಚಿನ ಸೊಳ್ಳೆಗಳನ್ನು ಬಿಡುಗಡೆ ಮಾಡುವ ಕಲ್ಪನೆಯು ವಿಚಿತ್ರವಾಗಿ ಅಥವಾ ಭಯಾನಕವಾಗಿ ಕಾಣಿಸಬಹುದು. ವಿಜ್ಞಾನಿಗಳು ಇದು ವಿಜ್ಞಾನದಲ್ಲಿ ಆಧಾರಿತವಾದ ಹೆಚ್ಚು ಸುರಕ್ಷಿತ ಮತ್ತು ಪರಿಣಾಮಕಾರಿ ವಿಧಾನವಾಗಿದೆ ಎಂದು ಪ್ರತಿಪಾದಿಸುತ್ತಾರೆ.

ಈ ಯೋಜನೆಯು ಗಂಡು ಸೊಳ್ಳೆಗಳನ್ನು ಮಾತ್ರ ಬಿಡುಗಡೆ ಮಾಡುವುದನ್ನು ಒಳಗೊಂಡಿರುತ್ತದೆ ಎಂದು ಸಂಶೋಧಕರು ವಿವರಿಸುತ್ತಾರೆ. ಸಾಮಾನ್ಯವಾಗಿ ಹೆಣ್ಣು ಸೊಳ್ಳೆಗಳು ಮಾತ್ರ ಮನುಷ್ಯರನ್ನು ಕಚ್ಚುತ್ತವೆ. ಆದರೆ ಗಂಡು ಸೊಳ್ಳೆಗಳು ಸಸ್ಯ ಮಕರಂದವನ್ನು ಆಧರಿಸಿವೆ. ಈ ಸೊಳ್ಳೆಗಳು ಮನುಷ್ಯರಿಗೆ ಯಾವುದೇ ನೇರ ಹಾನಿ ಉಂಟುಮಾಡುವುದಿಲ್ಲ ಎಂದು ತಜ್ಞರು ತಿಳಿಸುತ್ತಾರೆ. ಸೊಳ್ಳೆಗಳ ಸಂಖ್ಯೆಯನ್ನು ನಿಯಂತ್ರಿಸಲು ಕ್ರಿಮಿನಾಶಕವನ್ನು ಬಳಸುವುದು ಹೊಸ ಪರಿಕಲ್ಪನೆಯಲ್ಲ. ಇಂತಹ ಪ್ರಯೋಗಗಳನ್ನು ಈ ಹಿಂದೆ ಯುನೈಟೆಡ್ ಸ್ಟೇಟ್ಸ್, ಬ್ರೆಜಿಲ್, ಪನಾಮ ಹಾಗೂ ಕೇಮನ್ ದ್ವೀಪಗಳಂತಹ ಸ್ಥಳಗಳಲ್ಲಿ ನಡೆಸಲಾಗಿದೆ. ಹಲವಾರು ಅಧ್ಯಯನಗಳ ಪ್ರಕಾರ, ಗುರಿಯಾಗಿಸಿಕೊಂಡ ಸೊಳ್ಳೆಗಳ ಸಂಖ್ಯೆಯನ್ನು ಶೇಕಡಾ 80 ರಿಂದ 90ರಷ್ಟು ಕಡಿಮೆ ಮಾಡಿದ ಸಂದರ್ಭಗಳಿವೆ.

ಅನುಭವಿ ಪೈಲಟ್‌ಗಳು ಸುಸಜ್ಜಿತ ಹೆಲಿಕಾಪ್ಟರ್‌ಗಳ ಮೂಲಕ ವಿಭಿನ್ನ ರೀತಿಯ ಪ್ರದರ್ಶನ ನಡೆಸಿ, ಕೌಶಲ್ಯ ಮೆರೆಯಲಿದ್ದಾರೆ.

# ಬೆಳಗಾವಿಯಲ್ಲಿ ಮೊದಲ ಬಾರಿ ಸಾರಂಗ ಹೆಲಿಕಾಪ್ಟರ್ ಪ್ರದರ್ಶನ

1. ವಾಯುಪಡೆಯ ಶ್ರೇಷ್ಠತೆಯ ದ್ಯೋತಕ
2. 15 ನಿಮಿಷಗಳ ಪ್ರದರ್ಶನ
3. ಸೇನೆಯಲ್ಲಿ ಮಹಿಳೆಯರಿಗೆ ಸಾಕಷ್ಟು ಅವಕಾಶ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಳಗಾವಿ:

ಬೆಳಗಾವಿ ತಾಲ್ಲೂಕಿನ ಸಾಂಬ್ರಾ ಗ್ರಾಮದಲ್ಲಿರುವ ಭಾರತೀಯ ವಾಯುಪಡೆಯ ತರಬೇತಿ ಶಾಲೆಯಲ್ಲಿ ಸತತ 22 ವಾರ ಅತ್ಯಂತ ಕಠಿಣ ಹಾಗೂ ಪರಿಣಾಮಾತ್ಮಕ ತರಬೇತಿ ಪಡೆದ 7ನೇ ತಂಡದ 1 ಸಾವಿರದ 250 ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ ಜೂನ್ 6ರಂದು ನಡೆಯಲಿದೆ. ಇದರ ನಿಮಿತ್ಯ ಅತ್ಯಾಕರ್ಷಕ ಹೆಲಿಕಾಪ್ಟರ್ ಪ್ರದರ್ಶನವನ್ನು ಕೂಡ ಏರ್ಪಡಿಸಲಾಗಿದೆ.

ವಾಯುಪಡೆ ಅಗ್ನಿವೀರರ ನಿರ್ಗಮನ ಪಥಸಂಚಲನದಲ್ಲಿ ಈ ಬಾರಿ ವಿಶೇಷವಾಗಿ ಕುಶಾಲಾಗ್ರ ಸಾರಂಗ ಪೈಲಟ್ ತಂಡದಿಂದ ರೋಮಾಂಚನಕಾರಿ ಹೆಲಿಕಾಪ್ಟರ್ ಪ್ರದರ್ಶನ ನಡೆಯಲಿದ್ದು, ಆಕಾಶದಲ್ಲಿ ಅತ್ಯಾಕರ್ಷಕ ಚಿತ್ತಾರಗಳನ್ನು ಮೂಡಿಸಲು ಪೈಲಟ್‌ಗಳು ಸಜ್ಜಾಗಿದ್ದಾರೆ. ಅಲ್ಲದೇ ಜೂನ್, 4 ಮತ್ತು 5ರಂದು ಅಭ್ಯಾಸ ಪ್ರದರ್ಶನ ಇರಲಿದೆ. ಈ ವೇಳೆ, ವಿವಿಧ ಶಾಲೆಗಳ ಆಯ್ದ ಮಕ್ಕಳು, ಎನ್‌ಸಿಸಿ ಕೆಡೆಟ್ಸ್ ಸೇರಿ ಮತ್ತಿತರರಿಗೆ ಮಾತ್ರ ವೀಕ್ಷಣೆಗೆ ಅವಕಾಶ ನೀಡಲಾಗಿದೆ.

> ಮೇ 13ರಂದು ಪುಣೆ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಕಾನ್ವೋಕೇಶನ್‌ನಲ್ಲಿ ಪ್ರದರ್ಶನ ಮಾಡಿದ್ದೆವು. ಈಗ ಬೆಳಗಾವಿಯಲ್ಲಿ ಪ್ರದರ್ಶನ ನೀಡಲು ತುಂಬಾ ಉತ್ಸುಕರಾಗಿದ್ದೇವೆ. ಇದು ಮುಗಿದ ಮೇಲೆ ಹೈದರಾಬಾದ್ ಏರ್‌ಪೋರ್ಸ್ ಅಕಾಡೆಮಿಯಲ್ಲಿ ಪ್ರದರ್ಶನವಿರಲಿದೆ ಎಂದು ಹೇಳಿದರು.
> -ಪೈಲಟ್ ಮುಖ್ಯಸ್ಥ ಬುದ್ಧಿಸಾಗರ ದುಮ್ರೆ

ಈ ಸಂಬಂಧ ಮಾಧ್ಯಮಗಳ ಜೊತೆಗೆ ಮಾತನಾಡಿದ ಕಮಾಂಡಿಂಗ್ ಅಧಿಕಾರಿ ಜಿ.ಪಿ. ಕ್ಯಾಪ್ಟನ್ ಅಭಿಜಿತ್ ಕುಮಾರ್ ಸಾರಂಗ ತಂಡದ 10 ಜನ ಅನುಭವಿ ಪೈಲಟ್‌ಗಳು ಸುಸಜ್ಜಿತ 5 ಹೆಲಿಕಾಪ್ಟರ್‌ಗಳ ಮೂಲಕ ವಿಭಿನ್ನ ರೀತಿಯ ಪ್ರದರ್ಶನ ನಡೆಸಿ, ಕೌಶಲ್ಯ ಮೆರೆಯಲಿದ್ದಾರೆ. ಆಕಾಶದಲ್ಲಿನ ಹೆಲಿಕಾಪ್ಟರ್‌ಗಳ ಭವ್ಯ ಪ್ರದರ್ಶನ ಸಾರಂಗ ತಂಡದ ಸೈನಿಕ ಶಿಸ್ತು, ವೃತ್ತಿಪರತೆ ಮತ್ತು ವಾಯುಪಡೆಯ ಶ್ರೇಷ್ಠತೆಯ ದ್ಯೋತಕವಾಗಲಿದೆ ಎಂದರು.

ಪೈಲಟ್ ಮುಖ್ಯಸ್ಥ ಬುದ್ಧಿಸಾಗರ ದುಮ್ರೆ 'ಈಟಿವಿ ಭಾರತ' ಜೊತೆ ಮಾತನಾಡಿ, ನಮ್ಮ ಸಾರಂಗ ಹೆಲಿಕಾಪ್ಟರ್ ಪ್ರದರ್ಶನ ತಂಡದ ಉದ್ದೇಶ ನಮ್ಮ ದೇಶದ ಯುವಕರಿಗೆ ಪ್ರೇರಣೆ ನೀಡಿ, ಅವರು ಭಾರತೀಯ ಸೇನೆ ಸೇರುವಂತೆ ಮಾಡುವುದಾಗಿದೆ. ಸಾರಂಗ(ನವಿಲು)ದಂತಹ ಬಣ್ಣದಲ್ಲಿ ಹೆಲಿಕಾಪ್ಟರ್ ಸಿದ್ಧಪಡಿಸಲಾಗಿದೆ. 15 ನಿಮಿಷಗಳ ಪ್ರದರ್ಶನ ಇರಲಿದ್ದು, ಅದರಲ್ಲಿ ಏರೋಬಿಟಿಕ್ ಶೋ ಮಾಡುತ್ತೇವೆ. ಇದು ನೋಡಲು ತುಂಬಾ ಆಕರ್ಷಕವಾಗಿರಲಿದೆ. ಕೊನೆಯ ದಿನ ಹಾಜರಿರಲಿರುವ ಪ್ರಶಿಕ್ಷಣಾರ್ಥಿಗಳ ಪೋಷಕರು ಮತ್ತು ಸಂಬಂಧಿಕರನ್ನು ಪ್ರದರ್ಶನವು ಪುಳಕಿತಗೊಳಿಸಲಿದೆ. ಮೂರು ದಿನ ಮಕ್ಕಳು ಕೂಡ ಇದನ್ನು ಕಣ್ತುಂಬಿಕೊಳ್ಳಲಿದ್ದಾರೆ ಎಂದರು.

> ಭಾರತ ಹಾಗೂ ವಿದೇಶಗಳಲ್ಲಿ ತನ್ನ ಅತ್ಯಾಕರ್ಷಕ ಪ್ರದರ್ಶನದ ಮೂಲಕ ಅಪಾರ ಮೆಚ್ಚುಗೆಗೆ ಪಾತ್ರವಾಗಿರುವ ಸಾರಂಗ ತಂಡ 2004ರಲ್ಲಿ ಸಿಂಗಾಪುರದಲ್ಲಿ ನಡೆದ ಏಷ್ಯನ್ ಏರೋಸ್ಪೇಸ್ ಅಂತಾರಾಷ್ಟ್ರೀಯ ಪ್ರದರ್ಶನದಲ್ಲಿ ಮೊದಲು ಹೆಲಿಕಾಪ್ಟರ್ ಪ್ರದರ್ಶಿಸಿ ಗಮನ ಸೆಳೆದಿತ್ತು. ಅದಾದ ಬಳಿಕ ಇಲ್ಲಿಯವರೆಗೆ ಪ್ರಪಂಚದಾದ್ಯಂತ 390ಕ್ಕೂ ಹೆಚ್ಚು ಸ್ಥಳಗಳಲ್ಲಿ 1,200ಕ್ಕೂ ಹೆಚ್ಚು ಪ್ರದರ್ಶನ ನೀಡಿರುವುದು ನಮ್ಮ ಸಾರಂಗ ತಂಡದ ಹೆಗ್ಗಳಿಕೆ ಎಂದು ಹೇಳಿದರು.
> -ಕ್ಯಾಪ್ಟನ್ ಅಭಿಜಿತ್ ಕುಮಾರ್

ಸಿಂಗಪುರದಲ್ಲಿ ನಡೆದ ಏರ್ ಶೋದಲ್ಲಿ ನಾನು ಪಾಲ್ಗೊಂಡಿದ್ದೆ. ಕಳೆದ ಎರಡು ವರ್ಷಗಳಿಂದ ಸಾರಂಗ ಹೆಲಿಕಾಪ್ಟರ್ ಪ್ರದರ್ಶನ ತಂಡದ ಭಾಗವಾಗಿರುವುದಕ್ಕೆ ತುಂಬಾ ಸಂತೋಷ ಮತ್ತು ಹೆಮ್ಮೆ ಇದೆ. ನಮ್ಮ ಜೊತೆಗೆ ಇನ್ನೂ ನಾಲ್ವರು ಮಹಿಳಾ ಅಧಿಕಾರಿಗಳು ಇದ್ದಾರೆ. ಇಬ್ಬರು ಮಹಿಳಾ ಪೈಲಟ್‌ಗಳು ಹಾಗೂ ನಾವು ಹೆಲಿಕಾಪ್ಟರ್ ಪ್ರದರ್ಶನ ನೀಡಲಿದ್ದೇವೆ. ಮಹಿಳೆಯರಿಗೆ ಅಗ್ನಿವೀರ ವಾಯುಪಡೆ, ಪೈಲಟ್ ಸೇರಿ ಭಾರತೀಯ ಸೇನೆಯಲ್ಲಿ ಸಾಕಷ್ಟು ಅವಕಾಶಗಳಿವೆ. ಏಕಾಗ್ರತೆಯಿಂದ ಪರಿಶ್ರಮಪಟ್ಟರೆ ಭವಿಷ್ಯ ಉಜ್ವಲವಾಗುತ್ತದೆ ಎಂಬುದು ಪೈಲಟ್ ಅಂಕಿತಾ ಸಿಂಗ್ ಅಭಿಪ್ರಾಯ.

## ಪ್ರ, ಪ್ರಥಮ ಕೊಲ್ಹಾರ ಪಟ್ಟಣದಲ್ಲಿ ತುಲಾಭಾರ ಸೇವೆಯ ಸೌಭಾಗ್ಯ ಸಂತಸ: ಡಾ ಕೈಲಾಸನಾಥ ಶ್ರೀ.


ಉದಯವಾಹಿನಿ ಚಿತ್ರ

• ಉದಯವಾಹಿನಿ ಕೊಲ್ಹಾರ:

ಪಟ್ಟಣದ ಶೀಲವಂತ ಹಿರೇಮಠದಲ್ಲಿ ಅಧಿಕ ಮಾಸದ ಪ್ರಯುಕ್ತ ನಡೆದ 16 ನೇ ದಿನದ ಕೋಟಿ ಜಪಾನುಷ್ಠಾಣ ಇಷ್ಟಲಿಂಗ ಪೂಜಾ ಕಾರ್ಯಕ್ರಮ ಮಂಗಳಾರತಿಯ ನಂತರ ಶ್ರೀ ಘಣ ಮಹಿಮ ಪೂರ್ಣಜ್ಞ ಧರ್ಮರತ್ನ ಭಾರತ ಭೂಷಣ ಡಾ.ಕೈಲಾಸನಾಥ ಮಹಾಸ್ವಾಮಿಗಳವರಿಗೆ ಶ್ರೀಮಠದ ಶಿಷ್ಯರಾದ ಶ್ರೀ ಗೊಲ್ಲಾಳಪ್ಪಾ ರಾಮಣ್ಣ ಮ್ಯಾಗಾಡಿಯವರು ಮಾಡಿದ ನಾಣ್ಯಗಳ ತುಲಾಭಾರ ಸೇವೆಯನ್ನು ಸ್ವೀಕರಿಸಿದ ಪೂಜ್ಯರು ಸಾತ್ವಿಕ ಆಚಾರವಂತ ಸಜ್ಜನಿಕೆಯ ಸಾಕಾರಮೂರ್ತಿ ಗುರು ಮಹಾಂತರ ತುಲಾಭಾರ ಸೇವೆ ಮಾಡಿದರೆ ಅತ್ಯುನ್ನತ ಗೌರವ.

ಭಗವಂತನು ಅಂತಹ ಭಕ್ತರನ್ನ ಸದಾ ಮೇಲೆ ಎತ್ತುವನು. ಸಾಮಾನ್ಯ ಅನ್ನದಾತ ರೈತ ಗೊಲ್ಲಾಳಪ್ಪ ಮಾಡಿದ ಸೇವೆ ಸರ್ವರಿಗೂ ಮಾನ್ಯ. ಎಂದು ಆಸಿರ್ವಚನ ನೀಡುತ್ತ ಮನುಷ್ಯ ಬೆಳೆದಂತೆ ಸುಖ ಸಂತೋಷ ನೆಮ್ಮದಿ ಕಾಣಬೇಕಾದರೆ ನಾಲ್ಕು ಹಿತನುಡಿ ಪಾಲಿಸಬೇಕು.

1) ಸಾತ್ವಿಕ ಆಚಾರವಂತ ಸಜ್ಜನ ಸಂತ ಗುರುಮಹಾಂತರನ್ನ. ದೇವರ ಭಕ್ತರನ್ನ ಚುಡಾಯಿಸಬಾರದು. ಅವರ ತಾಳ್ಮೆಯ ಶಾಪ ತಟ್ಟವದು.

2) ದೈವ ಕೋಪಕ್ಕೆ ತುತ್ತಾಗಬಾರದು ದೈವ ಶಕ್ತಿಯ ಮುನಿಸು ತಡೆಯೋಕಾಗಲ್ಲ.

3) ನೆರೆಹೊರೆಯವರನಿಷ್ಠೂರಕೆ ಗುರಿಯಾಗಬಾರದು ಪಕ್ಕದ ಮನೆಯವರ ಜೊತೆ ವಿರೋಧ ಕಿತ್ತಾಟ ಮಾಡಬಾರದು. ದಿನಾ ಮುಖ ನೋಡೋರ ಜೊತೆ ಹಗೆತನ ಇದ್ರೆ ನೆಮ್ಮದಿ ಇರಲ್ಲ.

4) ನಾಲ್ಕು ಜನರ ಜೊತೆ ಜೊತೆ ಚನ್ನಾಗಿದ್ದರೆ ಅವರ ಬದುಕು ಚಿನ್ನದಂಥಾಗುವದು. ಎಲ್ಲರೂ ಹಷನ್ಮುಖಿಗಳಾಗಿ ಉತ್ತಮ ಸಂಸ್ಕಾರ ಸಹನಶೀಲ ಗುಣವಂತರಾಗಿರಬೆಂದು ಪೂಜ್ಯರು ಶುಭ ನುಡಿ ಸಮರ್ಪಿಸಿದರು.

## ರಾಜಕೀಯ ಕುಮ್ಮಕಿನಿಂದ ಅಕ್ರಮ ಮಣ್ಣು ಸಾಗಾಣಿಕೆ: ಸ್ಥಳೀಯ ರೈತರಿಂದ ಆಕ್ರೋಶ.

• ಉದಯವಾಹಿನಿ ಕೊಲ್ಹಾರ:

ಸಮೀಪದ ಕೃಷ್ಣಾ ನದಿಯಿಂದ ಅಕ್ರಮವಾಗಿ ಮಣ್ಣು ಸಾಗಣೆ ರಾಜಕೀಯ ಕುಮಕಿನಿಂದ ನಡೆಯುತ್ತಿರುವುದನ್ನು ಖಂಡಿಸಿ ರೈತರು ಪ್ರತಿಭಟನೆ ನಡೆಸಿದರು. ರಾಷ್ಟ್ರೀಯ ಹೆದ್ದಾರಿ 218ರ ಕೊಲ್ಹಾರ ಸೇತುವೆ ಪಕ್ಕದ ತೋಟದ ರಸ್ತೆಯಲ್ಲಿ ಸಂಚರಿಸುತ್ತಿದ್ದ ಡಂಪರ್ ವಾಹನಗಳನ್ನು ತಡೆದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳದಲ್ಲಿ ರೈತರು ಡಂಪರ್‌ಗಳನ್ನು ನಿಲ್ಲಿಸಿ, ಅಕ್ರಮ ಮಣ್ಣು ಸಾಗಣೆಗೆ ತಕ್ಷಣ ಕಡಿವಾಣ ಹಾಕುವಂತೆ ಆಗ್ರಹಿಸಿದರು. ಡಂಪರ್‌ಗಳಲ್ಲಿ ನಿಯಮ ಮೀರಿ ಮಣ್ಣು ತುಂಬಿ ಸಾಗಿಸಲಾಗುತ್ತಿದ್ದು, ವಾಹನ ಸಂಚಾರದಿಂದ ಏಳುವ ಭಾರೀ ಧೂಳು ಬೆಳೆಗಳ ಮೇಲೆ ಕುಳಿತು ಬೆಳೆ ಹಾನಿಯಾಗುತ್ತಿದೆ ಎಂದು ರೈತರು ಆರೋಪಿಸಿದರು. ರೈತರಾದ ಮಲ್ಲಪ್ಪ ಗಾಣಿಗೇರ ಮತ್ತು ಲಕ್ಷ್ಮಣ್ ಅಂಬಿಗೇರ


ಉದಯವಾಹಿನಿ ಚಿತ್ರ

ಮಾತನಾಡಿ, ''ನದಿಯಲ್ಲಿ ನೀರು ಇಳಿಮುಖವಾಗುತ್ತಿದ್ದಂತೆಯೇ ಮಣ್ಣು ಮಾಫಿಯಾ ದಿನದಿಂದ ದಿನಕ್ಕೆ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳ ಮೆಲಾಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ. ''ಪೊಲೀಸ್ ದೂರು ನೀಡಿ'' ಎಂದು ಹೇಳಿ ಅಧಿಕಾರಿಗಳು ಸಮಸ್ಯೆಯನ್ನು ಕಂಡೂ ಕಾಣದಂತೆ ವರ್ತಿಸುತ್ತಿದ್ದಾರೆ, ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ರೈತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಡಂಪರ್‌ಗಳ ಅತಿಯಾದ ಓಡಾಟದಿಂದ ರಸ್ತೆ ಸಂಪೂರ್ಣ ಹಾಳಾಗಿದ್ದು, ಧೂಳಿನ ಮಬ್ಬಿನಿಂದ ವಾಹನ ಸವಾರರಿಗೆ ರಸ್ತೆ ಕಾಣದ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಳಿಗ್ಗೆ 5ರಿಂದ ರಾತ್ರಿ 10ರವರೆಗೆ ನಿರಂತರ ವಾಹನ ಸಂಚಾರದಿಂದ ವಾಯು ಮಾಲಿನ್ಯ ಹೆಚ್ಚಾಗಿ ಸಾರ್ವಜನಿಕರು, ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಹೇಳಿದರು. ತಕ್ಷಣ ಕ್ರಮ ಕೈಗೊಳ್ಳದಿದ್ದರೆ ರಾಷ್ಟ್ರೀಯ ಹೆದ್ದಾರಿ ತಡೆದು ಉಗ್ರ ಹೋರಾಟ ಕೈಗೊಳ್ಳಲಾಗುವುದು ಎಂದು ರೈತರು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ನಾಗಪ್ಪ ಏಳಗಂಟಿ, ಮಲ್ಲಯ್ಯ ಮಠಪತಿ, ಸುರೇಶ್ ಉಪ್ಪಾರ, ಬಸವರಾಜ್ ಗಾಣಿಗೇರ್, ಪರಮಾನಂದ ಬರಗಿ ಸೇರಿದಂತೆ ಅನೇಕ ರೈತರು ಭಾಗವಹಿಸಿದ್ದರು.

## ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಜಾಗೃತಿ ಜಾಥಾಕ್ಕೆ ಚಾಲನೆ

• ಉದಯವಾಹಿನಿ, ಚಿತ್ರದುರ್ಗ

ಭಾರತದಲ್ಲಿ ಪ್ರತಿವರ್ಷ ಸುಮಾರು 13.5 ಲಕ್ಷ ಜನರು ತಂಬಾಕು ಸೇವನೆಯಿಂದ ಸಾವನ್ನಪ್ಪುತ್ತಿದ್ದಾರೆ. ಕರ್ನಾಟಕದಲ್ಲಿಯೂ 15 ವರ್ಷ ಮೇಲ್ಪಟ್ಟ ಯುವಜನತೆ ಅತಿ ಹೆಚ್ಚಾಗಿ ತಂಬಾಕು ವ್ಯಸನಕ್ಕೆ ತುತ್ತಾಗುತ್ತಿರುವುದು ಆತಂಕಕಾರಿ ವಿಚಾರ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎನ್.ಕಾಶೀ ಕಳವಳ ವ್ಯಕ್ತಪಡಿಸಿದರು. ನಗರದ ಬಸಪ್ಪ ಆಸ್ಪತ್ರೆ ಆವರಣದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ವಿವೇಕಾನಂದ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ವರ್ಷದ ವಿಶ್ವ ತಂಬಾಕು ರಹಿತ ದಿನದ ಘೋಷವಾಕ್ಯವಾದ ''ಆಕರ್ಷಣೆಯನ್ನು ಬಹಿರಂಗಪಡಿಸುವುದು – ನಿಕೋಟಿನ್ ಮತ್ತು ತಂಬಾಕು ವ್ಯಸನವನ್ನು ಎದುರಿಸುವುದು'' ಎಂದು ತಿಳಿಸಿದ ಅವರು, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮವನ್ನು ಜಿಲ್ಲಾದ್ಯಂತ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಕಟ್ಟುನಿಟ್ಟಾಗಿ ಅನುಷ್ಠನಗೊಳಿಸಲಾಗುವುದು. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ತಡೆಗಟ್ಟುವುದು, ಶಾಲಾ–ಕಾಲೇಜುಗಳ ಬಳಿ ತಂಬಾಕು ಮಾರಾಟದ ವಿರುದ್ಧ ಕಾರ್ಯಾಚರಣೆ, ವ್ಯಸನಿಗಳಿಗೆ ಆಪ್ತಸಮಾಲೋಚನೆ ಹಾಗೂ ತಂಬಾಕು ಮುಕ್ತ ಹಳ್ಳಿಗಳ ಘೋಷಣೆ ಸೇರಿದಂತೆ ಹಲವು ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು. ನಗರದ ಬಸಪ್ಪ ಆಸ್ಪತ್ರೆಯ ಆವರಣದಿಂದ ಆರಂಭವಾದ ಜಾಗೃತಿ ಜಾಥಾವು ತುರುವನೂರು ರಸ್ತೆ ಮಾರ್ಗವಾಗಿ



ಉದಯವಾಹಿನಿ ಚಿತ್ರ

ರೆಡ್ಡಿ ಕಲ್ಯಾಣ ಮಂಟಪದವರೆಗೆ ಸಾಗಿ, ಸಾರ್ವಜನಿಕರಲ್ಲಿ ತಂಬಾಕು ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಿತು. ನಂತರ ಪುನಃ ಬಸಪ್ಪ ಆಸ್ಪತ್ರೆಯ ಆವರಣದಲ್ಲಿ ಜಾಥಾ ಮುಕ್ತಾಯಗೊಂಡಿತು.

ಕಾರ್ಯಕ್ರಮದಲ್ಲಿ ವಿವೇಕಾನಂದ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಕಾರ್ಯದರ್ಶಿ ಡಾ. ರಂಗಾರೆಡ್ಡಿ, ಪ್ರಾಂಶುಪಾಲೆ ರಿನಿರಾಜನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಕೃಷ್ಣ ನಾಯ್ಕ್, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರ ಬಿ.ಎಂ.ಪ್ರಭುದೇವ್, ಸಮಾಜ ಕಾರ್ಯಕರ್ತ ಕೆ.ಎಂ. ತಿಪ್ಪೇಸ್ವಾಮಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮೂಗಪ್ಪ, ದತ್ತಾಂಶ ನಮೂದು ನಿರ್ವಾಹಕಿ ಸಾಗರಿಕ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಕಚೇರಿಯ ಸಿಬ್ಬಂದಿ ಹಾಗೂ ನಸಿರ್‌ಂಗ್ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿ ಇದ್ದರು.

## ಜಿಲ್ಲೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಕೊರತೆ ಇಲ್ಲ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿತ್ರದುರ್ಗ

ಜಿಲ್ಲೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ಸಮರ್ಪಕವಾಗಿದ್ದು, ಯಾವುದೇ ರೀತಿಯ ಇಂಧನ ಕೊರತೆ ಇಲ್ಲ. ಇಂಧನ ಪೂರೈಕೆ ಎಂದಿನಂತೆ ಸಹಜವಾಗಿದೆ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಆಯಿಲ್ ಕಂಪನಿಗಳ ಅಧಿಕಾರಿಗಳು ಹಾಗೂ ಆಹಾರ ಇಲಾಖೆಯ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇಂಧನದ ಅನಧಿಕೃತ ದಾಸ್ತಾನು ಇರಿಸುವುದು ಮತ್ತು ತಾತ್ಕಾಲಿಕ ಕೊರತೆ ಸೃಷ್ಟಿಸುವಂತಹ ಪ್ರಕರಣ ಕಂಡುಬಂದಲ್ಲಿ ಅಗತ್ಯ ವಸ್ತುಗಳ ಕಾಯ್ದೆ 1955 ಮತ್ತು ಸಂಬಂಧಪಟ್ಟ ನಿಯಮಗಳಡಿ ಕಟ್ಟುನಿಟ್ಟಿನ ಕಾನೂನು ಕ್ರಮಕ್ಕೆಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಇತ್ತೀಚಿನ ದಿನಗಳಲ್ಲಿ ಔದ್ಯೋಗಿಕ ಮತ್ತು ವಾಣಿಜ್ಯ ಖರೀದಿದಾರರು ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಖರೀದಿಸುತ್ತಿರುವುದನ್ನು ತಡೆಗಟ್ಟಬೇಕು. ಪೆಟ್ರೋಲ್ ಬಂಕ್‌ಗಳಲ್ಲಿ ಅಕ್ರಮ ದಾಸ್ತಾನು ಇಡದಂತೆ ಕಟ್ಟುನಿಟ್ಟಿನ ನಿಗಾವಹಿಸಬೇಕು. ಗ್ರಾಹಕರ ಬೇಡಿಕೆಯನ್ನು ಪೂರೈಸಲು ತೈಲ ಕಂಪನಿಗಳೊಂದಿಗೆ ನಿರಂತರ ಸಮನ್ವಯ ಸಾಧಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪ್ರಸ್ತುತ ಪರಿಸ್ಥಿತಿಯಲ್ಲಿ ಜಿಲ್ಲೆಯಲ್ಲಿ ಇಂಧನ ಪೂರೈಕೆ ಎಂದಿನಂತೆ ಸಹಜವಾಗಿದ್ದು, ಕಂಪನಿಗಳಿಂದ ನಿರಂತರ ಸರಬರಾಜು ಆಗುತ್ತಿದೆ ಎಂದು ತೈಲ ಕಂಪನಿಗಳ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವವಹಾರಗಳ ಇಲಾಖೆ ಜಂಟಿ ನಿರ್ದೇಶಕ ಶಿದ್ರಾಮ ಮಾರಿಹಾಳ, ಐ.ಓ.ಸಿ.ಎಲ್ ಸೇಲ್ಸ್ ಅಧಿಕಾರಿ ಪ್ರತಾಪ್, ಬಿ.ಪಿ.ಸಿ.ಎಲ್ ಸೇಲ್ಸ್ ಅಧಿಕಾರಿ ಜಯಚಂದ್ರ, ಹೆಚ್.ಪಿ.ಸಿ.ಎಲ್ ಸೇಲ್ಸ್ ಅಧಿಕಾರಿ ಸುಮಂತ್ ಇದ್ದರು.

## ಭ್ರಷ್ಟಾಚಾರ ತನಿಖೆ ನಡೆಸುವಲ್ಲಿ ಜಿಲ್ಲಾಡಳಿತ ವಿಫಲ: ಕಲಕೇರಿ ಗ್ರಾಮಸ್ಥರ ಧರಣಿ

• ಉದಯವಾಹಿನಿ, ವಿಜಯಪುರ

ಕಲಕೇರಿ ಗ್ರಾಮ ಪಂಚಾಯಿತಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ವಿರುದ್ಧ ಸಮಗ್ರ ತನಿಖೆ ನಡೆಸುವಲ್ಲಿ ಜಿಲ್ಲಾಡಳಿತ ವಿಫಲವಾಗಿದೆ ಎಂದು ಆರೋಪಿಸಿ, ದಲಿತ ಸಂಘರ್ಷ ಸಮಿತಿ ಹಾಗೂ ರೈತ ಸಂಘದ ನೇತೃತ್ವದಲ್ಲಿ ಕಲಕೇರಿ ಗ್ರಾಮಸ್ಥರು ಜಿಲ್ಲಾ ಪಂಚಾಯಿತಿ ಕಚೇರಿ ಎದುರು ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಎರಡನೇ ದಿನಕ್ಕೆ ಕಾಲಿಟ್ಟಿದೆ.

ಭ್ರಷ್ಟಾಚಾರ ತನಿಖೆ ಕುರಿತು ಕಳೆದ ಫೆ.16 ರಂದು ಕಲಕೇರಿಯಿಂದ ವಿಜಯ ಪುರದವರೆಗೆ ಪಾದಯಾತ್ರೆ ನಡೆಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು ಈ ವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಸರ್ವೇ ನಂ.1 ರಲ್ಲಿ ನಿರ್ಮಿಸಲಾದ ವಾಣಿಜ್ಯ ಮಳಿಗೆಗಳಿಗೆ ಹಣ ವಸೂಲಿ ಮಾಡಿದ ಆರೋಪದಡಿ ಸಂಬಂಧಪಟ್ಟ


> ಆಡಳಿತದ ನಿರ್ಲಕ್ಷ್ಯದ ವಿರುದ್ಧ ಕ್ರಮ


ಉದಯವಾಹಿನಿ ಚಿತ್ರ

ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದು, 15ನೇ ಹಣಕಾಸಿನಲ್ಲಿ ಮಳಿಗೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಕಲಿ ಬಿಲ್ ಸೃಷ್ಟಿಸಿ ಹಣ ದುರುಪಯೋಗ ಮಾಡಿದವರ ವಿರುದ್ಧ ತನಿಖೆ ನಡೆಸುವುದು. ಅಲ್ಲದೇ, ತನಿಖಾ ತಂಡದಿಂದ ವರದಿ ವಿಳಂಬವಾಗಿರುವುದಕ್ಕೆ ಕಾರಣರಾದ ಅಧಿಕಾರಿಗಳನ್ನು ಅಮಾನತು ಮಾಡುವುದು, ಗ್ರಾಮ ಪಂಚಾಯಿತಿ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳುವುದು ಹಾಗೂ ತಾಲ್ಲೂಕು ಆಡಳಿತದ ನಿರ್ಲಕ್ಷ್ಯದ ವಿರುದ್ಧ ಕ್ರಮ ಜರುಗಿಸುವಂತೆ ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ. ಇನ್ನು ಸ.ನಂ 1ರ ಪಕ್ಕದಲ್ಲಿರುವ ಅಂಗಡಿಗಳನ್ನು ತೆರವುಗೊಳಿಸಿ, ಸುಮಾರು 40 ಕುಟುಂಬಗಳಿಗೆ ಜೀವನೋಪಾಯಕ್ಕಾಗಿ ಶೆಡ್ ನಿರ್ಮಿಸಲು ಅನುಮತಿ ನೀಡಬೇಕೆಂದು ಆಗ್ರಹಿಸಿದರು. ಪ್ರತಿಭಟನಾ ಸ್ಥಳಕ್ಕೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಹೇಶ ಪೋತದಾರ ಭೇಟಿ ನೀಡಿ ಮನವೊಲಿಸಲು ಯತ್ನಿಸಿದರೂ ಅದು ವಿಫಲವಾಯಿತು.

# ಮೂವರು ಶಾಸಕರಲ್ಲಿ ಯಾರ 'ಕೈ' ಮೇಲು?

## ಬಸವರಾಜ ರಾಯರಡ್ಡಿ, ಶಿವರಾಜ ತಂಗಡಗಿ, ರಾಘವೇಂದ್ರ ಹಿಟ್ನಾಳ ನಡುವೆ ಪೈಪೋಟಿ




ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೊಪ್ಪಳ

ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರ ಅಧಿಕಾರ ಪದಗ್ರಹಣಕ್ಕೆ ಬುಧವಾರ ವೇದಿಕೆ ಸಿದ್ಧಗೊಂಡಿದ್ದರೆ, ಇನ್ನೊಂದೆಡೆ ಸಚಿವ ಸ್ಥಾನ ಪಡೆಯಲು ಜಿಲ್ಲೆಯ ಶಾಸಕರು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಮೂರರಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರಿರುವ ಕೊಪ್ಪಳ ಜಿಲ್ಲೆಯಲ್ಲಿಯೂ ಸಚಿವ ಸ್ಥಾನ ತಮ್ಮದಾಗಿಸಿಕೊಳ್ಳಲು ಶಾಸಕರು ತಮ್ಮದೇ ಮಾರ್ಗದಲ್ಲಿ ಲಾಬಿ ಮಾಡುತ್ತಿದ್ದಾರೆ. ಸಚಿವ ಸ್ಥಾನ ಬೇಕು ಎಂದು ಎಲ್ಲಿಯೂ ಮುಕ್ತವಾಗಿ ಹೇಳಿಕೊಳ್ಳದಿದ್ದರೂ ಅದಕ್ಕಾಗಿ ರಾಯರಡ್ಡಿ ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿರುವುದು ಗುಟ್ಟೇನಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಅವರ ಜೊತೆ ಆಪ್ತ ಒಡನಾಟ ಹೊಂದಿರುವ ರಾಯರಡ್ಡಿ ಅವರು ಶಾಸಕರಾಗಿದ್ದುಕೊಂಡೇ ಯಲಬುರ್ಗಾ ಕ್ಷೇತ್ರಕ್ಕೆ ಸಾಕಷ್ಟು ಅನುದಾನ ತಂದಿದ್ದಾರೆ. ಹಿಂದೆ ಸಚಿವರಾಗಿದ್ದಾಗಲೂ ಸಮರ್ಥವಾಗಿ ಕೆಲಸ ಮಾಡಿ ಹೆಸರು ಮಾಡಿದ್ದಾರೆ. ಹಿರಿಯರ ಲೆಕ್ಕಾಚಾರ ಹಾಗೂ ಲಿಂಗಾಯತದ ಕೋಟಾದಲ್ಲಿ ತವುಗೂ ಸಚಿವ ಸ್ಥಾನ ಸಿಗಬಹುದು ಎನ್ನುವ ನಿರೀಕ್ಷೆ ರಾಯರಡ್ಡಿ ಹೊಂದಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಿಂದುಳಿದ ವರ್ಗಗಳ ಖಾತೆ ಹೊಂದಿದ್ದ ಕನಕಗಿರಿ ಕ್ಷೇತ್ರದ ಶಿವರಾಜ ತಂಗಡಗಿ ಭೋವಿ ಸಮುದಾಯಕ್ಕೆ ಸೇರಿದವರು. ಜಿಲ್ಲೆಯಲ್ಲಿರುವ ಈ ಮೂವರು ಶಾಸಕರಲ್ಲಿ ತಮ್ಮ ನೆಚ್ಚಿನ ನಾಯಕ ಸಚಿವರಾಗಬೇಕು ಎಂದು ಸಾಮಾಜಿಕ ತಾಣಗಳಲ್ಲಿ ಪೋಸ್ಟರ್‌ಗಳನ್ನು ಹಾಕುತ್ತಿದ್ದಾರೆ. ತಂಗಡಗಿಯ ಬೆಂಬಲಿಗರು ಹಾಗೂ ಕನಕಗಿರಿ ಕ್ಷೇತ್ರದ ಕಾಂಗ್ರೆಸ್ ಪ್ರಮುಖರು ಕನಕಗಿರಿಯ ಕನಕಾಚಲಪತಿ ಹಾಗೂ ಅಂಜನಾದ್ರಿಯಲ್ಲಿ ದೇವರಿಗೆ ಪ್ರಾರ್ಥನೆ ಸಲ್ಲಿಸಿದ್ದಾರೆ.

> ಮೀಸಲಾತಿ ಕ್ಷೇತ್ರದಿಂದ ಶಾಸಕರಾಗಿರುವ ಅವರ ಹಿಂದೆ ಎರಡು ಬಾರಿ ಶಾಸಕರಾಗಿದ್ದಾಗಲೂ ಸಚಿವರಾಗಿದ್ದಾರೆ. ಆದರೆ ಹಿಂದಿನ ಎರಡೂ ಬಾರಿಯೂ ಅವರು ಪೂರ್ಣ ಐದು ವರ್ಷ ಕೆಲಸ ಮಾಡಲು ಅವಕಾಶ ಸಿಕ್ಕಿರಲಿಲ್ಲ. ತಂಗಡಗಿ ಮೂರು ವರ್ಷಗಳಿಂದ ಸಚಿವರಾಗಿದ್ದಾರೆ. ಈ ಬಾರಿಯಾದರೂ ಅವರಿಗೆ ಪೂರ್ಣ ಅವಧಿ ಮುಗಿಸಲು ಸಾಧ್ಯವಾಗುತ್ತದೆಯೇ ಎನ್ನುವುದು ಚರ್ಚೆಗೆ ಕಾರಣವಾಗಿದೆ.

ಈಗಿನ ಸರ್ಕಾರದ ಅವಧಿ ಎರಡು ವರ್ಷ ಉಳಿದಿದ್ದು ಈ ಅವಧಿಯಲ್ಲಿ ಸಚಿವರಾದರೆ ಮುಂದಿನ ಚುನಾವಣೆಗೂ ಅನುಕೂಲವಾಗುತ್ತದೆ ಎನ್ನುವ ಲೆಕ್ಕಾಚಾರ ಮೂವರೂ ಶಾಸಕರದ್ದಾಗಿದೆ. ಐದು ವಿಧಾನಸಭಾ ಕ್ಷೇತ್ರಗಳಷ್ಟೇ ಇರುವುದರಿಂದ ಜಿಲ್ಲೆಗೆ ಒಂದು ಸಚಿವ ಸ್ಥಾನ

> ಕುರುಬ ಸಮುದಾಯದ ಶಾಸಕ ಕೊಪ್ಪಳ ಕ್ಷೇತ್ರದ ರಾಘವೇಂದ್ರ ಹಿಟ್ನಾಳ ಸತತ ಮೂರು ಬಾರಿ ಶಾಸಕರಾಗಿದ್ದಾರೆ. ಇದೇ ಸಮುದಾಯದವರೇ ಹಿಂದೆ ಮುಖ್ಯಮಂತ್ರಿಯಾಗಿದ್ದರಿಂದ ಹಿಟ್ನಾಳಗೆ ಸಚಿವ ಸ್ಥಾನ ಸಿಕ್ಕಿರಲಿಲ್ಲ. ಶತಾಯು ಗತಾಯು ಈ ಬಾರಿ ಸಚಿವರಾಗಲೇಬೇಕು ಎನ್ನುವ ಪಟ್ಟಿನೊಂದಿಗೆ ರಾಘವೇಂದ್ರ ಹಿಟ್ನಾಳ ವರಿಷ್ಠರ ದುಂಬಾಲು ಬಿದ್ದಿದ್ದಾರೆ.

ಸಿಗಬಹುದು ಎನ್ನುವ ನಿರೀಕ್ಷೆಯಿದ್ದು, ಈ ಒಂದು ಸಚಿವಗಿರಿಗಾಗಿ ಮೂವರು ಶಾಸಕರ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಇದರಲ್ಲಿ ಯಾರ ಕೈ ಮೇಲಾಗಲಿದೆ ಎನ್ನುವ ಕುತೂಹಲವೂ ಮನೆ ಮಾಡಿದೆ. ಐದು ವಿಧಾನಸಭಾ ಕ್ಷೇತ್ರಗಳಷ್ಟೇ ಇರುವುದರಿಂದ ಜಿಲ್ಲೆಗೆ ಒಂದು ಸಚಿವ ಸ್ಥಾನ ಸಿಗಬಹುದು ಎನ್ನುವ ನಿರೀಕ್ಷೆಯಿದ್ದು, ಈ ಒಂದು ಸಚಿವಗಿರಿಗಾಗಿ ಮೂವರು ಶಾಸಕರ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ.

ಇದರಲ್ಲಿ ಯಾರ ಕೈ ಮೇಲಾಗಲಿದೆ ಎನ್ನುವ ಕುತೂಹಲವೂ ಮನೆ ಮಾಡಿದೆ. ತಮ್ಮ ಆಪ್ತರ ಮೂಲಕ ಸಚಿವ ಸ್ಥಾನಕ್ಕಾಗಿ ಲಾಬಿ ಬೆಂಗಳೂರು, ದೆಹಲಿಯಲ್ಲಿ ಬೀಡುಬಿಟ್ಟ ಶಾಸಕರು ಮೊದಲ ಬಾರಿಗೆ ಸಚಿವರಾಗುವ ಆಸೆಯಲ್ಲಿ ಶಾಸಕ ಹಿಟ್ನಾಳ ಕನಕಗಿರಿ ಕ್ಷೇತ್ರದ ಕಾಂಗ್ರೆಸ್ ಪ್ರಮುಖರು ಕನಕಗಿರಿಯ ಕನಕಾಚಲಪತಿ ಅಂಜನಾದ್ರಿಯಲ್ಲಿ ದೇವರಿಗೆ ಪ್ರಾರ್ಥನೆ ಸಲ್ಲಿಸಿದ್ದಾರೆ. ಈಗಿನ ಕಾಂಗ್ರೆಸ್ ಸರ್ಕಾರದ ಅವಧಿ ಎರಡು ವರ್ಷ ಉಳಿದಿದ್ದು ಈ ಅವಧಿಯಲ್ಲಿ ಸಚಿವರಾದರೆ ಮುಂದಿನ ಚುನಾವಣೆಗೂ ಅನುಕೂಲವಾಗುತ್ತದೆ ಎನ್ನುವ ಲೆಕ್ಕಾಚಾರ ಮೂವರೂ ಶಾಸಕರದ್ದಾಗಿದೆ.

> ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಆರ್ಥಿಕ ಸಲಹೆಗಾರರಾಗಿದ್ದ ಯಲಬುರ್ಗಾ ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿ ಅವರು ಹಿಂದೆ ಉನ್ನತ ಶಿಕ್ಷಣ ಸೇರಿದಂತೆ ಹಲವು ಖಾತೆಗಳನ್ನು ನಿರ್ವಹಣೆ ಮಾಡಿದ್ದಾರೆ. ಬಳಿಕ ಹಿರಿಯ ಶಾಸಕ ಎನ್ನುವ ಹೆಗ್ಗಳಿಕೆಯೂ ಇದೆ.

> ತೀವ್ರ ಪೈಪೋಟಿ

## ಮಿನಿ ನ್ಯೂಸ್

### ಚಿಂಚೋಳಿಯಲ್ಲಿ ಸರ್ಕಾರಿ ಕೆಲಸ ದೇವರ ಕೆಲಸವೆಂದು ಮಾಡಿದ್ದು ತೃಪ್ತಿ ತಂದಿದೆ: ವಾಲಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂಚೋಳಿ:

ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ್ರಭಾರಿ ಸಹಾಯಕ ನಿರ್ದೇಶಕರಾಗಿ ಮತ್ತು ಕಛೇರಿ ಅಧೀಕ್ಷಕರಾಗಿ ಸರ್ಕಾರಿ ಕೆಲಸ ದೇವರ ಕೆಲಸವೆಂದು ಮಾಡಿದ್ದು ಅತ್ಯಂತ ತೃಪ್ತಿತಂದಿದೆ ಎಂದು ಸೇವಾವಯೋನಿವೃತ್ತಿ ಹೊಂದಿದ ಪ್ರಭುಲಿಂಗ ವಾಲಿ ಹೇಳಿದರು.

ಪಟ್ಟಣದ ತಹಸೀಲ್ ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಕಛೇರಿ ಅಧಿಕ್ಷಕ ಪ್ರಭುಲಿಂದ ವಾಲಿಯವರ ಸೇವಾವಯೋನಿವೃತ್ತಿ ಹೊಂದಿದ ಪ್ರಯುಕ್ತ ಹಮ್ಮಿಕೋಂಡ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನನ್ನ ಸರ್ಕಾರಿ ಸೇವಾ ಅವಧಿಯಲ್ಲಿ ಯಾವುದೇ ಕಪ್ಪುಚುಕ್ಕೆ ಇಲ್ಲದೆ ತಾಲ್ಲೂಕ ಮಟ್ಟದ ಅಧಿಕಾರಿಗಳ ಮತ್ತು ಕಛೇರಿ ಸಿಬ್ಬಂದಿಗಳ ಜೊತೆ ಒಳ್ಳೆಯ ನಡತೆ ಸಂಬಂಧ ಪ್ರೀತಿ ವಿಶ್ವಾಸದಿಂದ ಇರುತ್ತಿದ್ದೆ ಹಾಗಾಗಿ ನನ್ನನ್ನು ಎಲ್ಲರೂ ಚನ್ನಾಗಿ ಇದ್ದು ಎಲ್ಲಾ ಕೆಲಸಗಳು ನಾನು ಸಿಬ್ಬಂದಿ ವರ್ಗದವರು ಕೂಡಿ ಮಾಡುತ್ತಿದ್ದೆವು. ನನ್ನ ಇಲಾಖೆಯ ಸಿಬ್ಬಂದಿಗಳು ಸಹ ನನಗೆ ಸಹಕಾರ ನೀಡಿದಂಗೆ ಈಗ ಬಂದಿರುವ ಅಧಿಕಾರಿಗಳಿಗೂ ಸಂಪೂರ್ಣ ಸಹಕರ ನೀಡಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು. ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ, ಗ್ರೇಡ್2 ತಹಶೀಲ್ದಾರ್ ವೆಂಕಟೇಶ ದುಗ್ಗನ್, ಸಮಾಜ ಕಲ್ಯಾಣ ಎಡಿ ಡಾ.ಶೃತಿ.ಎಮ್, ಮುಖ್ಯಾಧಿಕಾರಿ ಕಾಶಿನಾಥ ಧನ್ನಿ, ಗಣಪತಿ ಜಾಧವ, ಗಜಾನನ ಪಾತ್ರೆ, ಸಂತೋಷ ಶಿಂಧೆ, ಡಾ, ಧನರಾಜ ಬೋಮ್ಮ. ಮಾತನಾಡಿದರು. ಪಶುಸಂಗೋಪನಾ ಆಸ್ಪತ್ರೆ ಎಡಿ ಮಲ್ಲಿಕಾರ್ಜುನ, ಅರಣ್ಯ ಅಧಿಕಾರಿ ಸಿದ್ದರೂಢ ಹುಕ್ಕುಂಡಿ, ಮತೀನ್, ಸೇರಿದಂತೆ ಅನೇಕರಿದ್ದರು.

### ಇಂದು ವಿವಿಧಡೆ ವಿದ್ಯುತ್ ವ್ಯತ್ಯಯ ಗ್ರಾಹಕರು ಸಹಕರಿಸಿ: ಜೆಸ್ಕಾಂ ಎಇಇ

• ಉದಯವಾಹಿನಿ, ಚಿಂಚೋಳಿ

ಪಟ್ಟಣದ ಚಂದಾಪೂರದ 11ಕೆವಿ ಮಾರ್ಗದ ಪುರಸಭೆ ವತಿಯಿಂದ ತುರ್ತು ದುರಸ್ತಿ ಕಾರ್ಯಕೈಗೋಳ್ಳುತ್ತಿರುವ ಪ್ರಯುಕ್ತ 110/33/11ಕೆವಿ ಸ್ಟೇಷನ್ ಹೊರಹೋಗುವ ಚಿಂಚೋಳಿ ಮತ್ತು ಹಳೆ ಸುಲೇಪೇಟ ಮಾರ್ಗಗಳಿಗೆ ಹೋಗುವ ವಿದ್ಯುತ್ ಸರಬುರಾಜು ಬೆಳಿಗ್ಗೆ 9;00 ಗಂಟೆಯಿಂದ 3:00ಗಂಟೆ ಯವರೆಗೆ ವಿದ್ಯುತ್ ಸರಬುರಾಜಿನಲ್ಲಿ ವ್ಯತ್ಯಯವುಂಟಾಗಲಿದೆ ಗ್ರಾಹಕರು ಸಹಕರಿಸುವಂತೆ ಜೇಸ್ಕಾಂ ಎಇಇ ಕಾಮಣ್ಣ ಇಂಜೇಳ್ಳಿ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ಹೊರಡಿದ ಅವರು, ಚಿಂಚೋಳಿ ಸಂಪೂರ್ಣ ಪಟ್ಟಣ, ಚಂದಾಪೂರದ ಆಶ್ರಯ ಕಾಲೋನಿ, ಪಟೇಲ್ ಕಾಲೋನಿ, ಬಸವೇಶ್ವರ ವೃತ್ತ, ಚಿಮ್ಮಾಯಿದ್ಲಾಯಿ, ದಸ್ತಾಪೂರ, ಐ.ಪಿ.ಹೋಸಳ್ಳಿ, ಹೊಸ ಗೌಡನಹಳ್ಳಿ, ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ, ಗ್ರಾಹಕರು, ಸಾರ್ವಜನಿಕರು, ಜೇಸ್ಕಾಂದೋಂದಿಗೆ ಸಹಕರಿಸಲು ಕೋರಿದ್ದಾರೆ.


### ಕೆರೆಗಳ ಅಭಿವೃದ್ಧಿ ಎಲ್ಲರ ಜವಾಬ್ದಾರಿ: ಸಂಜೀವ್ ಕುಮಾರ್

• ಉದಯವಾಹಿನಿ, ಸಾಗರ:

ಎಲ್ಲೇ ಕೆರೆಗಳ ಅಭಿವೃದ್ಧಿ ಕೈಗೊಂಡರೂ ಅದಕ್ಕೆ ಕೈಜೋಡಿಸುವುದು ಪ್ರತಿಯೊಬ್ಬ ವ್ಯಕ್ತಿಯ ಸಾಮಾಜಿಕ ಜವಾಬ್ದಾರಿಯಾಗಿದೆ' ಎಂದು ಕರ್ಣಾಟಕ ಬ್ಯಾಂಕ್‌ನ ಶಿವಮೊಗ್ಗ ಪ್ರಾದೇಶಿಕ ಕಚೇರಿ ವ್ಯವಸ್ಥಾಪಕ ಸಂಜೀವ್ ಕುಮಾರ್ ಕುಲಕರ್ಣಿ ಹೇಳಿದರು. ತಾಲ್ಲೂಕಿನ ಮಡಸೂರು–ಲಿಂಗದಹಳ್ಳಿ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿಗೆ ಕರ್ಣಾಟಕ ಬ್ಯಾಂಕ್‌ನಿಂದ ಸಹಾಯಧನ ವಿತರಿಸಿ ಮಾತನಾಡಿದರು. 'ಕೆರೆಗಳ ಪುನಶ್ಚತನದಿಂದ ಆಯಾ ಭಾಗದ ಅಂತರ್ಜಲ ವೃದ್ಧಿಯಾಗುತ್ತದೆ.

ಇದರಿಂದ ಕೃಷಿ ಕಾರ್ಯಗಳಿಗೆ ಅನುಕೂಲವಾಗುವ ಜೊತೆಗೆ ಪ್ರಾಣಿ, ಪಕ್ಷಿಗಳಿಗೂ ಸಹಕಾರಿಯಾಗುತ್ತದೆ. ಕುಡಿಯುವ ನೀರಿನ ಬಾವಿಗಳನ್ನು ಕೆರೆಯ ನೀರು ಕಾಯಕಲ್ಪದಂತೆ ಕಾಪಾಡುತ್ತದೆ' ಎಂದರು. 'ಮಡಸೂರು–ಲಿಂಗದಹಳ್ಳಿ ಗ್ರಾಮದ ಕೆರೆಯು ಸಾಗರ–ಸೊರಬ ರಸ್ತೆಯ ಪಕ್ಕದಲ್ಲೇ ಇರುವುದರಿಂದ ಪುನಶ್ಚತನಗೊಂಡ ಕೆರೆ ಮತ್ತೆ ಮಲಿನಗೊಳ್ಳದಂತೆ ಜಾಗೃತಿ ವಹಿಸಬೇಕಿದೆ. ತ್ಯಾಜ್ಯಗಳನ್ನು ಕೆರೆಗೆ ಸುರಿಯುವ ಪ್ರವೃತ್ತಿ ಹೆಚ್ಚುತ್ತಿದ್ದು, ಇದನ್ನು ತಡೆಯುವತ್ತ ಗಮನ ಹರಿಸಬೇಕು' ಎಂದು ಕಿವಿಮಾತು ಹೇಳಿದರು.

ಕರ್ಣಾಟಕ ಬ್ಯಾಂಕ್‌ನ ಸಿಎಸ್‌ಆರ್ ನಿಧಿಯಿಂದ ಲಿಂಗದಹಳ್ಳಿ ಕೆರೆ ಅಭಿವೃದ್ಧಿಗೆ 15 ಲಕ್ಷ ಮಂಜೂರಾಗಿದ್ದು, ಈಗಾಗಲೇ 10 ಲಕ್ಷ ಪಾವತಿಸಲಾಗಿದೆ. ಕೊನೆಯ ಕಂತಿನಲ್ಲಿ 5 ಲಕ್ಷ ನೀಡಲಾಗಿದೆ. ಈ ಹಣವನ್ನು ಗ್ರಾಮಸ್ಥರು ಸದ್ಬಳಕೆ ಮಾಡಿಕೊಂಡಿರುವುದು ಸಂತಸ ತಂದಿದೆ' ಎಂದರು.


ಉದಯವಾಹಿನಿ ಚಿತ್ರ

### ಬೆಲಗೂರಿನಿಂದ ಶೃಂಗೇರಿಗೆ ನೇರ ಬಸ್

• ಉದಯವಾಹಿನಿ, ಹೊಸದುರ್ಗ:

ತಾಲ್ಲೂಕಿನ ಶ್ರೀರಾಂಪುರ ಹೋಬಳಿಯ ಬೆಲಗೂರಿನಿಂದ ಶೃಂಗೇರಿಗೆ ಕೆಎಸ್‌ಆರ್‌ಟಿಸಿ ನೇರ ಬಸ್ ಸಂಚಾರಕ್ಕೆ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಶಾಸಕ ಬಿ.ಜಿ.ಗೋವಿಂದಪ್ಪ ಈಚೆಗೆ ಹಸಿರು ನಿಶಾನೆ ತೋರಿದರು. ತಾಲ್ಲೂಕಿನಿಂದ ಶೃಂಗೇರಿ ಶಾರದಾಂಬೆಯ ದರ್ಶನಕ್ಕೆ ತೆರಳಿ, ಅಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವ ಭಕ್ತರಿಗೆ ಅನುಕೂಲವಾಗಲಿದೆ. ಬೆಲಗೂರು ಹಾಗೂ ಶೃಂಗೇರಿ ಪುಣ್ಯಕ್ಷೇತ್ರಗಳಾಗಿದ್ದು, ಎರಡೂ ಕಡೆಯ ಭಕ್ತರಿಗೆ ಹೊಸ ಮಾರ್ಗದಿಂದ ನೆರವಾಗುತ್ತದೆ. ಶೃಂಗೇರಿ ಮಾರ್ಗದ ಹಲವು ವಸತಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ತಾಲ್ಲೂಕಿನ ವಿದ್ಯಾರ್ಥಿಗಳಿಗೂ ಅನುಕೂಲವಾಗಿದೆ' ಎಂದು ಗೋವಿಂದಪ್ಪ ಹೇಳಿದರು.

ಚಿತ್ರದುರ್ಗ ಕೆಎಸ್‌ಆರ್‌ಟಿಸಿ ವಿಭಾಗೀಯ ಹಿರಿಯ ನಿಯಂತ್ರಣಾಧಿಕಾರಿ ಬಸ್ ಮಂಜೂರು ಮಾಡಿಸಿದ್ದಾರೆ. 50 ಸೀಟ್‌ಗಳಿದ್ದು, ನಾಲ್ಕು ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ. 'ಶಕ್ತಿ ಯೋಜನೆ'ಯಡಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಬಹುದು' ಎಂದರು.


ಉದಯವಾಹಿನಿ ಚಿತ್ರ

